Digitized by Arya Samaj Foundation Chennai and eGangotri

ಕಲಾವಿದರು

ಎನ್.ಮರಿಶಾಮಾಚಾರ್



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Reprinted free of cost with the compliments
from the Dept of Education, Govt of India
New Delhi

D6800

DONATION

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

DONATION

LL6800

ಕಲಾವಿದರು

ಎನ್. ಮರಿಶಾಮಾಚಾರ್

ಸಿ. ಎಂ. ಎನ್. ಪ್ರಕಾಶನ
33, 1ನೇ ಕ್ರಾಸ್
ಸಂಪಂಗಿರಾಮನಗರ
ಬೆಂಗಳೂರು - 560 027

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

KALAVIDARU - Encylopedia of Artists (Kannada) by N. Marishama char,
Published by C. M. N. Prakashana, 33, 1st Cross, Sampangiramanagar
Bangalore-560 027.

ಮೊದಲ ಮುದ್ರಣ : 1989

© ಬಿ. ಇ. ಮಂಜುಳಾ

ಬೆಲೆ : ರೂ. 25-00

ಮುದ್ರಣ : ರಶ್ಮಿ ಮುದ್ರಣ, ಸುಧಾಮನಗರ, ಬೆಂಗಳೂರು - 560 027

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಪಣೆ

ನನ್ನ ಕಲಾಗುರುಗಳು ಮತ್ತು
ರಾಜ್ಯದಲ್ಲಿ ಸಮಕಾಲೀನ ಕಲೆಗೆ
ಹೊಸ ಆಯಾಮ ನೀಡಿದ
ಶ್ರೀ ಆರ್. ಎಂ. ಹಡಪದ್ ಅವರಿಗೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಒಂದು ಮಾತು

ಈ ಪುಸ್ತಕವು ಚಿತ್ರ, ಶಿಲ್ಪ ಮತ್ತು ಗ್ರಾಫಿಕ್ ಕಲಾವಿದರ ಸುಮಾರು 230ಕ್ಕೂ ಹೆಚ್ಚು ಕಲಾವಿದರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ. ಪುಸ್ತಕದಲ್ಲಿ ಪಾಶ್ಚಾತ್ಯ ಮತ್ತು ಭಾರತದ ಪ್ರಮುಖ ಕಲಾವಿದರನ್ನು ಮಾತ್ರ ಪರಿಚಯಿಸಲಾಗಿದೆ. ನಮ್ಮಲ್ಲಿ ಪಾಶ್ಚಾತ್ಯ ಕಲಾವಿದರ ಬಗ್ಗೆ ಸಾಕಷ್ಟು ಪುಸ್ತಕಗಳಿವೆ. ಆದರೆ ಭಾರತದ ಕಲಾವಿದರ ಬಗ್ಗೆ ಸಾಕಷ್ಟು ಪುಸ್ತಕಗಳು ಇಲ್ಲವೆಂದರೆ ತಪ್ಪಾಗಲಾರದು. ನಾನು ಬಹಳಷ್ಟು ಭಾರತದ ಕಲಾವಿದರ ಕೃತಿಗಳನ್ನು ನೋಡಿರುವುದರಿಂದ, ನನ್ನ ವೈಯಕ್ತಿಕ ಅಭಿಪ್ರಾಯ ಇಲ್ಲಿ ವ್ಯಕ್ತಪಡಿಸಿರುವೆ ಹಾಗೂ ಅವಶ್ಯಕವಾದ ಕಪ್ಪು ಬಿಳುಪಿನ ಪಡಿಯಚ್ಚುಗಳನ್ನು ಬಳಸಲಾಗಿದೆ. ಈ ಕೃತಿಯು ಪ್ರಯೋಜನ ಅವಶ್ಯಕವಾಗಿ ನಮ್ಮ ಕಲಾವಿದರಿಗೆ ಮತ್ತು ಕಲಾಪ್ರೇಮಿಗಳಿಗೆ ತುಂಬಾ ಉಪಯುಕ್ತವಾಗುವುದು ಎಂದು ತಿಳಿಯುವೆ. ಕನ್ನಡದಲ್ಲಿ ಕಲಾವಿದರಿಗೆ ಸಂಬಂಧಿಸಿದ : 'ಕಲಾವಿದರು' ಪುಸ್ತಕ ವಿವಿಧ ಕಲಾವಿದರ ಜೀವನ, ಅವರ ಕಲೆಯ ತಂತ್ರ, ಪ್ರಯೋಗ ಮುಂತಾದುವುಗಳನ್ನು ತಿಳಿಯಲು ಅನುಕೂಲವಾಗಿದೆ. ಭಾರತದ ಇತರ ಭಾಷೆಗಳಲ್ಲಿ ಕಲಾವಿದರ ಬಗ್ಗೆ ಇದುವರೆವಿಗೂ ಪುಸ್ತಕ ಪ್ರಕಟವಾಗಿಲ್ಲ. ಕನ್ನಡದಲ್ಲಿ ಈ ಪುಸ್ತಕ ಪ್ರಪ್ರಥಮವಾಗಿ ಪ್ರಕಟವಾಗುತ್ತಿರುವುದು ಎಂದು ತಿಳಿಸಲು ನನಗೆ ಹೆಮ್ಮೆಯಾಗುತ್ತದೆ. 'ಕಲಾವಿದರು' ಪುಸ್ತಕ ಪರಿಪೂರ್ಣ ಎಂದಾಗಲಿ, ಕೊರತೆಯಿಂದ ಮುಕ್ತವಾಗಿದೆ ಎಂದು ನಾನು ಭಾವಿಸಿಲ್ಲ; ಇದೊಂದು ಪ್ರಯತ್ನ. ಇಂತಹ ಪುಸ್ತಕ ಪ್ರಕಟಣೆಗೆ ನೆರವಾದ ಕರುಣಾ ಆರ್ಟ್ಸ್ ಅಂಡ್ ಪ್ರಿಂಟ್ ಮತ್ತು ಸ್ಮಿತಾ ಗ್ರಾಫಿಕ್ಸ್ ಹಾಗೂ ನನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಹೋದರರಾದ ಸರ್ವಶ್ರೀ ಎನ್. ರಾಜಗೋಪಾಲಚಾರ್, ಎನ್. ವೇಣುಗೋಪಾಲಚಾರ್, ಎನ್. ಕೃಷ್ಣಾಚಾರ್ ಮತ್ತು ಎನ್. ವಿಶ್ವ ರೂಪಾಚಾರ್ ಅವರಿಗೆ ಮತ್ತು ಎ.ಎಂ. ನಾಗರಾಜ್ ಬಿ.ಇ. ಸುಬ್ರಮಣಿ ಅವರಿಗೆ ಕೃತಜ್ಞನಾಗಿದ್ದೇನೆ. ಅಲ್ಲದ ನನ್ನ ಎಲ್ಲಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನನ್ನ ಪತ್ನಿ ಮಂಜುಳಾ ಮತ್ತು ನನ್ನ ಮಗಳು ಚಿತ್ರಾಳನ್ನು ನೆನೆಯುವುದು ನನ್ನ ಕರ್ತವ್ಯ. ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ರಾಮಕೃಷ್ಣ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಸದಾ ಪ್ರೋತ್ಸಾಹ ನೀಡುತ್ತಿರುವ ಕಲಾವಿದ ಗೆಳೆಯರಿಗೆ ಮತ್ತು ಕಲಾ ಪ್ರೇಮಿಗಳಿಗೆ ನನ್ನ ನನ್ನ ವಂದನೆಗಳನ್ನು ಸಲ್ಲಿಸಲೇಬೇಕು.

ಎನ್. ಮರಿಶಾಮಾಚಾರ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕ್ಬರ್ ಪದ್ಮಸಿ

1928ರಲ್ಲಿ ಮುಂಬಯಿನಲ್ಲಿ ಜನಿಸಿದ ಪದ್ಮಸಿ, ತಮ್ಮ ಕಲಾಶಿಕ್ಷಣವನ್ನು ಜೆ.ಜೆ. ಕಲಾಶಾಲೆಯಿಂದ ಪಡೆದು, ಅನಂತರ ಪ್ಯಾರಿಸಿಗೆ ತೆರಳಿ, ಅಲ್ಲಿನ ಕಲೆಯ ಪರಿಚಯ ಪಡೆದರು. ಅವರ ಮೊದಲ ಚಿತ್ರಗಳಲ್ಲಿ ಚಿತ್ರರಚನೆ ವಸ್ತುನಿಷ್ಠವಾಗಿದ್ದು, ಅವುಗಳಲ್ಲಿ ಪ್ರಾಚೀನ ಕೃತಿಗಳ ಭಾವವನ್ನು ಕಾಣುತ್ತೇವೆ. ಇತ್ತೀಚಿನ ಕೃತಿಗಳಲ್ಲಿ, ಅವರ ಅಭಿಪ್ರಾಯದಂತೆ, "ಯಾವುದೇ ವ್ಯಕ್ತಿ ಹುಟ್ಟಿನಿಂದಲೇ ಕೆಲವು ತಿಳಿವಳಿಕೆಗಳನ್ನು ಹೊಂದಿರುತ್ತಾನೆ. ಸಮತಲಕ್ಕೆ ನಮ್ಮ ದೃಷ್ಟಿ ಒಗ್ಗಿ ಹೋಗಿರುವುದರಿಂದ ಆ ಸಮತಲ ನಮಗೆ ನಿಷ್ಕ್ರಿಯವಾಗಿ ಕಾಣುತ್ತದೆ. ಈ ಅಂಶಗಳು ನಮ್ಮ ಗ್ರಹಿಕೆಯನ್ನು ನಿಯಂತ್ರಿಸಿ, ದೃಷ್ಟಿಯನ್ನು ಅನಿಯಂತ್ರಿಸುವ ಹಾಗೂ ವಿಸ್ತರಿಸುವ ಪ್ರಯತ್ನದಲ್ಲಿ 'ಆಕೃತಿ'ಯನ್ನು ರೂಪಿಸುತ್ತವೆ. ವಸ್ತುವನ್ನು ಚೆನ್ನಾಗಿ ಕಾಣಲು ಮಾಮೂಲು ಆಕ್ಷಿಪಟಲದ ದೃಷ್ಟಿಗಿಂತ ಭಿನ್ನವಾದ ದೃಷ್ಟಿ ಅಗತ್ಯ. ಕಲಾವಿದನು ನಿರ್ದಿಷ್ಟ ವಸ್ತು ವನ್ನು ರೂಪಾಂತರಿಸದೆ ದೃಷ್ಟಿಯ ವಿಧಾನವನ್ನೇ ರೂಪಾಂತರಿಸುತ್ತಾನೆ."

ಅರ್ನಾವಾಜ್

ಅರ್ನಾವಾಜ್ 1945ರಲ್ಲಿ ಮದ್ರಾಸಿನಲ್ಲಿ ಹುಟ್ಟಿದ್ದು, ಮದ್ರಾಸಿನ ಸರ್ಕಾರಿ ಕಲಾಶಾಲೆಯಿಂದ ಡಿಪ್ಲೊಮೋ ಪಡೆದಿದ್ದಾರೆ. ರಾಷ್ಟ್ರದ ಮತ್ತು ವಿದೇಶದ ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1976ರಲ್ಲಿ ಮದ್ರಾಸ್ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಗಳಿಸಿದ್ದ ಈಕೆ ಅಮೆರಿಕಾ, ಲಂಡನ್, ಫ್ರಾನ್ಸ್, ಜಪಾನ್ ದೇಶ ಗಳಿಗೆ ಭೇಟಿಕೊಟ್ಟಿದ್ದರು. ತಮ್ಮ ರೇಖಾಚಿತ್ರಗಳ ಮೂಲಕ ಜನಪ್ರಿಯರಾಗಿದ್ದ ಅವರು ತಮ್ಮ ಚಿತ್ರಗಳಲ್ಲಿ ಪೌರಾಣಿಕ ಸನ್ನಿವೇಶಗಳನ್ನು ಚಿತ್ರಿಸಿ, ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ರೂಢಿಸಿಕೊಂಡಿದ್ದರು. ವೀರ್ಯವತ್ತಾದ ರೇಖೆಗಳು ಮತ್ತು ವಾಶ್ ಮಾಧ್ಯಮದಿಂದ ತಮ್ಮ ಸೃಜನಶೀಲತೆಯನ್ನು ಅಭಿವ್ಯಕ್ತಪಡಿಸಿದ್ದಾರೆ. ಮದ್ರಾಸಿನ ಕಲಾವಿದರ ಗ್ರಾಮದಲ್ಲಿ ಕಲಾಚಟುವಟಿಕೆಗಳಲ್ಲಿ ಭಾಗವಹಿಸಿದ್ದ ಈಕೆ, ರಾಜ್ಯದ ಕಲಾಚಟುವಟಿಕೆಯಲ್ಲೂ ಪಾತ್ರವಹಿಸಿದ್ದು, 1988ರಲ್ಲಿ ನಿಧನರಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅರ್ಪಿತಾಸಿಂಗ್

ಅರ್ಪಿತಾಸಿಂಗ್ 1937ರಲ್ಲಿ ಪಶ್ಚಿಮ ಬಂಗಾಳದಲ್ಲಿ ಜನಿಸಿ, ದೆಹಲಿಯ ಸ್ಕೂಲ್ ಆಫ್ ಆರ್ಟ್‌ನಿಂದ 1959ರಲ್ಲಿ ಪದವಿ ಪಡೆದರು, ಅವರ ಕೃತಿಗಳಲ್ಲಿ ದಿನನಿತ್ಯದ ಜೀವನದಿಂದ ವಿಷಯಗಳು ಮತ್ತು ಸ್ಮರಣೆಯಿಂದ ಬಂದ ಪ್ರತಿಮೆಗಳು, ಶೈಲಿಯುಕ್ತವಾಗಿ ವಸ್ತುಗಳು ಅಲೌಕಿಕವಾಗಿ ಮಿಲನವಾಗುತ್ತವೆ. ಬಾಹ್ಯರೇಖೆಗಳು ಬಳುಕದಂತೆ ಇದ್ದು, ನಿಗೂಢತೆ, ಛಾಯೆಗಳು ಕತ್ತಲಿನಿಂದ ಬೆಳಕಿನೆಡೆಗೆ ಬದಲಾವಣೆಯಾಗಿ, ಪ್ರತಿಮೆಗಳು ಸಮತಲ ಪ್ರದೇಶದ ಮೇಲೆ ವಿಚಿತ್ರವಾಗಿ, ಉಜ್ವಲವಾದ ವರ್ಣಗಳಿಂದ ಕೂಡಿರುತ್ತವೆ. ಇತ್ತೀಚಿನ ಕೃತಿಗಳಲ್ಲಿ ಅಲಂಕೃತವಾದ ರಚನೆ ಹಾಗೂ ಮನುಷ್ಯಾಕೃತಿಗಳಲ್ಲಿ ಒಂದು ರೀತಿಯ ಹೋರಾಟ, ಅನೇಕ ಸಂಕೇತಗಳು ಚಿತ್ರದ ವಸ್ತುವಾಗಿ, ಚಿಂತನಶೀಲವಾಗಿ ಮತ್ತು ತಂತ್ರದ ದೃಷ್ಟಿಯಿಂದ ಈ ಮೂರ್ತ ರೂಪಗಳು ಭ್ರಾಮಕತೆಯಾಗಿ ಒಂದು ಸಂಕೀರ್ಣವನ್ನುಂಟುಮಾಡುತ್ತವೆ.

ಅಬನೀಂದ್ರನಾಥ ಠಾಕೂರ್

1871ರಲ್ಲಿ ಜನಿಸಿದ ಅಬನೀಂದ್ರರರು, ಈ ಶತಮಾನದ ಆದಿ ಭಾಗದಲ್ಲಿ ಭಾರತೀಯ ಚಿತ್ರಕಲೆಯ ಪುನರುಜ್ಜೀವನಕ್ಕೆ ಕಾರಣಕರ್ತರಾದವರು. ಬಾಲ್ಯದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ ಬಂದು, ಮನೆಯವರಿಂದಲೂ ಪ್ರೋತ್ಸಾಹ ದೊರೆಯಿತು. ಜಪಾನ್ ಕಲೆಯ ರಚನಾತಂತ್ರ, ಮೊಗಲ್ ಮತ್ತು ರಜಪೂತ ಚಿತ್ರಕಲೆಯ ರಚನಾ ತಂತ್ರಗಳನ್ನು ಕಲಿತರು. ಸ್ವತಂತ್ರವಾದ ಚಿತ್ರ ಬರೆಯುವ ಪ್ರವೃತ್ತಿ ಬೆಳೆಸಿಕೊಂಡರು. 1897ರಲ್ಲಿ ಅಬನೀಂದ್ರರಿಗೆ ಕಲ್ಕತ್ತಾ ಕಲಾಶಾಲೆಯ ಪ್ರಿನ್ಸಿಪಾಲ್ ಇ.ಬಿ. ಹ್ಯಾವೆಲ್‌ರ ಪರಿಚಯವಾಗಿ, ಅಲ್ಲಿ ಶಿಕ್ಷಕರಾಗಲು ಆಹ್ವಾನಿಸಿದರು. ಹ್ಯಾವೆಲ್ ನಿವೃತ್ತರಾದನಂತರ ಅಲ್ಲೇ ಪ್ರಿನ್ಸಿಪಾಲರಾದರು. ಅವರು ಅನೇಕ ಚಿತ್ರಗಳನ್ನು ರಚಿಸಿದ್ದು, ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗದೆ, ಭಾರತೀಯ ಚಿತ್ರಕಲೆಗೆ ಒಂದು ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟರು. ಪ್ರಾರಂಭದಲ್ಲಿ ಪ್ರಕೃತಿ ಮತ್ತು ಜನಸಾಮಾನ್ಯರ ಜೀವನದ ಚಿತ್ರಗಳನ್ನು ರಚಿಸಿದ್ದು, ಅನಂತರ ಭಾರತಮಾತಾ, ಗಣೇಶಜನನ, ಅಶೋಕನ ರಾಣಿ, ಕೃಷ್ಣಲೀಲೆಯ ಚಿತ್ರಗಳು, ಉಮರ್ ಖಯಾಮನ ರುಬಾಯತ್ ಚಿತ್ರಗಳು, ಅಲಿಬಾಬ ಮತ್ತು ನಲ್ವತ್ತು ಮಂದಿ ಕಳ್ಳರು ಮುಂತಾದ ಚಿತ್ರಗಳು ಅವರ ವೈವಿಧ್ಯದ ಪ್ರತೀಕಗಳಾಗಿವೆ. ಇವುಗಳಲ್ಲಿನ ವರ್ಣ ಸಂಯೋಜನೆ, ಆಕಾರ ಮತ್ತು ರೇಖಾಲಾಲಿತ್ಯ ಅವರ ಚಿತ್ರಗಳಲ್ಲಿ ಪ್ರಾಮುಖ್ಯವಾಗಿವೆ. 1941ರಲ್ಲಿ ಕಲ್ಕತ್ತ ವಿಶ್ವವಿದ್ಯಾನಿಲಯ 'ಡಾಕ್ಟರ್ ಆಫ್ ಲೆಟರ್ಸ್' ಗೌರವ ಪ್ರಶಸ್ತಿ ಪಡೆದ ಇವರು 1949ರಲ್ಲಿ ನಿಧನರಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಭಯ ಖಟಾವ್

ಅಭಯ 1927ರಲ್ಲಿ ಜನಿಸಿದ್ದು, ಚಿಕ್ಕಂದಿನಲ್ಲೇ ಕಲೆಯಲ್ಲಿ ಆಸಕ್ತಿ ಬೆಳೆದು, ವರ್ಣಗಳೊಡನೆ ಆಟವಾಡುತ್ತಿದ್ದು, ಕುಂಚಗಳಿಂದ ಆಕಾರಗಳನ್ನು ಸೃಷ್ಟಿಸಿ, ಅನಂತರ ಸ್ವಂತಿಕೆಯಿಂದ ಕಲೆ ಕಲಿತರು. ಶ್ರೀಮಂತ ಕುಟುಂಬದಲ್ಲಿ ಜನಿಸಿದುದರಿಂದ, ಯೂರೋಪ್ ಪ್ರವಾಸ ಕೈಗೊಂಡಿದ್ದರು. ಮೂಲತಃ ಸಂಗೀತ ಕಲಿತಿದ್ದರೂ, ಅದರಲ್ಲಿ ಯಶಸ್ವಿಯಾಗಲಿಲ್ಲ. ಅನಂತರ ತಮ್ಮ ಕ್ಷೇತ್ರವನ್ನು ಚಿತ್ರಕಲೆಗೆ ಮೀಸಲಿಟ್ಟು, ವರ್ಣಗಳಿಂದ ಸಂಗೀತ ರಾಗಗಳನ್ನು ಚಿತ್ರಿಸಿದರು. ಚಿತ್ರಗಳಲ್ಲಿ ಯೂರೋಪಿಯನ್ ಕಲೆಯ ಪ್ರಭಾವವಿದ್ದು, ಬ್ಲೇಕನ ಪ್ರಭಾವ ಕಾಣಬಹುದು. ಇಟಲಿ, ಫ್ರಾನ್ಸ್, ಇಂಗ್ಲೆಂಡ್‌ಗಳಲ್ಲಿ ಪ್ರಖ್ಯಾತ ಕಲಾವಿದರ ಚಿತ್ರಗಳನ್ನು ವೀಕ್ಷಿಸಿದ ನಂತರ ಅವರ ಚಿತ್ರಗಳಲ್ಲಿ ಬದಲಾವಣೆ ಕಾಣಬಹುದು. 'ಅಪೇರಾ'ದ ಅನೇಕ ಚಿತ್ರಗಳನ್ನು ರಚಿಸಿದ್ದು, ಚಲನೆ ಮತ್ತು ಕ್ರಿಯೆ, ವರ್ಣಗಳ ಬಳಕೆಯಲ್ಲಿ ಪ್ರಭುತ್ವ ಕಾಣಬಹುದು.

ಅಬಿಲ್‌ಗಾರ್ಡ್ ನಿಕೋಲೈ ಅಬ್ರಹಾಂ

ಅಬ್ರಹಾಂ 1743ರಲ್ಲಿ ಜನಿಸಿದ್ದು, ಡ್ಯಾನಿಷ್ ಚಿತ್ರಕಲಾವಿದ, ಅವನು ತನ್ನ ಕಲಾಶಿಕ್ಷಣವನ್ನು ಇಟಲಿಯಲ್ಲಿ ಪಡೆದ ಹಾಗೂ ಚಿತ್ರಗಳು ಸಾಂಪ್ರದಾಯಿಕ ಶೈಲಿಯಲ್ಲಿವೆ ಮತ್ತು ವೀರೋಚಿತ ವಸ್ತುಗಳನ್ನು ಚಿತ್ರಿಸಿದ್ದಾನೆ. ಕೊಪೆನ್‌ಹೇಗನ್ ಅರಮನೆಯಲ್ಲಿ ನಾಟಕರೂಪಕ ಕಥೆಗಳಿರುವ ಭಿತ್ತಿಚಿತ್ರಗಳನ್ನು ಚಿತ್ರಿಸಿದ್ದಾನೆ. ಇವು ಅವನ ಅತ್ಯುತ್ತಮ ಚಿತ್ರಗಳೆಂದು ಮನ್ನಣೆ ಪಡೆದಿವೆ ಹಾಗೂ ಈ ಚಿತ್ರಗಳಿಗೆ ಬೆಂಕಿ ಬಿದ್ದುದರಿಂದ ಹಾಳಾಗಿದ್ದು, ಉಳಿದ ಕೆಲವು ಚಿತ್ರಗಳು ರಾಯಲ್ ಗ್ಯಾಲರಿಯಲ್ಲಿವೆ. ಅವನು 1809ರಲ್ಲಿ ತೀರಿಕೊಂಡ.

ಅಬ್ಬೆ ಈಡ್ವಿನ್ ಆಸ್ಟೀನ್

ಆಸ್ಟೀನ್ 1852ರಲ್ಲಿ ಬಟ್ರನ್ನಿನಲ್ಲಿ ಹುಟ್ಟಿದ್ದು. ತೈಲವರ್ಣ, ಜಲವರ್ಣ ಮತ್ತು ನಿರೂಪಣಾ ಕಲೆಯಲ್ಲಿ ಪರಿಣತಿ ಹೊಂದಿದ್ದ. ರಾಯಲ್ ಅಕಾಡೆಮಿಯಲ್ಲಿ ಕೆಲಸ ನಿರ್ವಹಿಸಿದ್ದು, ಗೋಲ್ಡ್‌ಸ್ಮಿತ್, ಷೇಕ್ಸ್‌ಪಿಯರ್ ಮುಂತಾದವರ ಪುಸ್ತಕಗಳಿಗೆ ಚಿತ್ರಗಳನ್ನು ರಚಿಸಿದ್ದಾನೆ ಹಾಗೂ ಬೋಸ್ಟನ್ ಗ್ರಂಥಾಲಯದ ಗೋಡೆಗಳ ಮೇಲೆ ಚಿತ್ರ ರಚಿಸಿದ್ದಾನೆ. ಅವನು 1911ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಮರನಾಥ ಸೇಗಾಲ್

ಸೇಗಾಲ್ 1922ರಲ್ಲಿ ಜನಿಸಿದ್ದು, ಲಾಹೋರ್ ವಿಶ್ವವಿದ್ಯಾಲಯದ ವಿಜ್ಞಾನ ಪದವೀಧರರಾಗಿದ್ದು, ಮಾಯೋ ಸ್ಕೂಲ್ ಆಫ್ ಆರ್ಟ್ ಮತ್ತು ಲಾಹೋರ್ ಕಲಾ ಶಾಲೆಯಲ್ಲಿ ಕೆಲವು ಕಾಲ ಕಲಾಶಿಕ್ಷಣ ಪಡೆದಿದ್ದು, ಕಲಾಶಿಕ್ಷಣ ಮತ್ತು ಜಾನಪದ ಕಲೆಯ ಬಗ್ಗೆ ಆಸಕ್ತಿ ಹೊಂದಿದ್ದರು. ಯುನೆಸ್ಕೊ ಸಂಸ್ಥೆಗಾಗಿ ಜಾನಪದ ಕಲೆಯ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸಿದ್ದಾರೆ. ಅಲ್ಲದೆ ಕಲಾಶಿಕ್ಷಣದಲ್ಲಿ ನ್ಯೂಯಾರ್ಕ್ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದು, 1950-51ರಲ್ಲಿ ನ್ಯೂಯಾರ್ಕ್‌ನಲ್ಲಿ ಮತ್ತು 1952ರಲ್ಲಿ ಪ್ಯಾರಿಸ್, ಈಸ್ಟ್ ಆಫ್ರಿಕಾ, 1953ರಲ್ಲಿ ದೆಹಲಿಯಲ್ಲಿ ತಮ್ಮ ಕೃತಿಗಳ ಪ್ರದರ್ಶನವನ್ನು ಪ್ರದರ್ಶಿಸಿದ್ದರು. 1957ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಇವರು ಅನೇಕ ಶಿಲ್ಪಗಳನ್ನು ರಚಿಸಿದ್ದು, ಅವುಗಳಲ್ಲಿ ಮಾನವೀಯ ಸಂಕಷ್ಟಗಳ ನೋವುಗಳನ್ನು ಕಾಣಬಹುದು.

ಅಮೃತಾ ಶೇರ್‌ಗಿಲ್

ಅಮೃತಾ ಶೇರ್‌ಗಿಲ್ 1913ರಲ್ಲಿ ಯೂರೋಪಿನ ಬುಡಾಪೆಸ್ಟ್‌ನಲ್ಲಿ ಹುಟ್ಟಿದಳು. ಅಮೃತಾ ಐದು ವರುಷದವಳಿದ್ದಾಗಲೇ ಜಲವರ್ಣದಿಂದ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದಳು. ಕಲೆಯಲ್ಲಿ ಆಸಕ್ತಿಯಿರುವುದನ್ನು ಕಂಡ ಅವಳ ತಂದೆ ತಾಯಿ ಮುಂದೆ ಇಟಲಿಯ ಫ್ಲಾರೆನ್ಸಿನಲ್ಲಿ ಮತ್ತು ಪ್ಯಾರಿಸಿನಲ್ಲಿ ಕಲಾಶಾಲೆಗೆ ಕಳುಹಿಸಿದರು. ಪ್ರಾರಂಭದಲ್ಲಿ ಭಾವಚಿತ್ರಣ ಮತ್ತು ವಸ್ತುಚಿತ್ರಗಳನ್ನು ರಚಿಸಿದಳು. ಈ ಚಿತ್ರಗಳಲ್ಲಿ ಪಾಶ್ಚಾತ್ಯ ಭಾವನೆಗಳಿದ್ದವು ಹಾಗೂ ಹಂಗೇರಿಯಲ್ಲಿದ್ದಾಗ ರಚಿಸಿದ್ದ ಚಿತ್ರಗಳಲ್ಲಿ ಯೂರೋಪಿನ ಗುಣಗಳನ್ನು ಹೊಂದಿದ್ದ ವರ್ಣಗಳು, ಮನೋಭಾವ ಮತ್ತು ಸಂವೇದನಾಶಕ್ತಿಯಿಂದ ಕೂಡಿದ್ದವು. ಭಾರತಕ್ಕೆ ಬಂದ ಮೇಲೆ ಅಜಂತಾ ಚಿತ್ರಗಳು ಮತ್ತು ದಕ್ಷಿಣ ಭಾರತದ ಜನರ ಜೀವನ ಅವಳ ಮೇಲೆ ಪ್ರಭಾವ ಬೀರಿತು. ಅನಂತರ ರಚಿಸಿದ ಚಿತ್ರಗಳಲ್ಲಿ ಸ್ವಂತಿಕೆ, ಹೊಸ ತಂತ್ರಗಳನ್ನು ವಿಕಾಸಗೊಳಿಸಿ. ಅರ್ಥ ಪೂರ್ಣವಾದ ವರ್ಣ ಮತ್ತು ಆಕಾರಗಳನ್ನು ಕಾಣಬಹುದು. ಜನರ ವೈಯಕ್ತಿಕವಾದ ಸ್ವಭಾವದ ಲಕ್ಷಣ, ಭಾವನೆ, ಅನುಕಂಪ, ಭಾರತದ ಗ್ರಾಮೀಣ ಜೀವನದ ಮಾರ್ಮಿಕ ಜೀವನ, ನಮ್ಮ ದೇಶದ ಪರಂಪರಾಗತ ಶೈಲಿ ಮತ್ತು ತನ್ನ ಚಿತ್ರಗಳಲ್ಲಿ ವಿವರ, ವಿರೂಪಣೆಗಳನ್ನು ಕಡಿಮೆ ಮಾಡಿ ಆಕಾರಗಳನ್ನು ಸರಳಗೊಳಿಸಿದ್ದಾಳೆ. ಭಾರತದ ಆಧುನಿಕ ಕಲೆಯ ನಿರ್ಮಾಪಕಳಾಗಿ, 1941ರಲ್ಲಿ ನಿಧನಳಾದಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅಲಮೇಲಕರ್

ಅಲಮೇಲಕರ್ ಎ. ಎ.

ಅಲಮೇಲಕರ್ 1920ರಲ್ಲಿ ಜನಿಸಿದ್ದು, ಬಿಜಾಪುರ ಜಿಲ್ಲೆಯ ಅಲಮೇಲ ಎಂಬ ಹಳ್ಳಿ ಇವರ ಮೂಲ ಸ್ಥಳ. 1948ರಲ್ಲಿ ಮುಂಬಯಿನ ನೂತನ ಕಲಾಮಂದಿರದಲ್ಲಿ ಕಲೆ ಕಲಿತು, ತಮ್ಮ ಕಲಾ ಜೀವನವನ್ನು ಪ್ರಕೃತಿ ಚಿತ್ರಗಳ ಮೂಲಕ ಪ್ರಾರಂಭಿಸಿ ನಂತರ ಸಾಮಾಜಿಕ ಜೀವನ, ಹಳ್ಳಿಗಾಡಿನ ಸ್ತ್ರೀಪುರುಷರ ವಿಶೇಷ ಭಾವ ಭಂಗಿಗಳು ಇವರ ಕಲಾಕೃತಿಗಳಲ್ಲಿ ಜೀವಂತವಾಗಿ ಮೂಡಿವೆ. ಆನಂತರದ ಕೃತಿಗಳಲ್ಲಿ ಬುಡಕಟ್ಟಿನ ಜನರ ಜೀವನ ಮತ್ತು ವರ್ಣ, ರೇಖೆಗಳ ಮೇಲೆ ಹಿಡಿತಹೊಂದಿದ್ದು, ಹದವಾದ ವರ್ಣ ಸಮ್ಮಿಶ್ರಣ ಹಾಗೂ ವೈವಿಧ್ಯತೆಯನ್ನು ಕಾಣಬಹುದು. 1953-55ರ ಕೃತಿಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪರ್ಶಿಯನ್, 1970ರಲ್ಲಿ ಗ್ರಾಮ್ಯಜೀವನದಿಂದ ಪ್ರಭಾವಿತರಾದ ಅವರು ಬೈಗಾ, ಗೊಂಡ, ಪಂತ, ಮಾಡಿಯೂ ಮುಂತಾದ ಮಧ್ಯಪ್ರದೇಶದ ಬುಡಕಟ್ಟು ಜನಾಂಗಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಿದ್ದು, ಒಪೇಕ್ ಮತ್ತು ತೈಲವರ್ಣಗಳಿಂದ ರಚಿಸುತ್ತಿದ್ದು, ಅನಂತರ ಜಲವರ್ಣಗಳಿಂದ ಚಿತ್ರಗಳನ್ನು ಕಾರ್ಡ್‌ಬೋರ್ಡಿನ ಮೇಲೆ ರಚಿಸಿದ್ದಾರೆ. ತಮ್ಮ ಜೀವನಪರ್ಯಂತ ಭಾರತದ ಪರಂಪರಾನುಗತ ಕಲೆಯ ಅಭಿವೃದ್ಧಿಗಾಗಿ ಶ್ರಮಿಸಿ, ಅವರು 1982ರಂದು ನಿಧನರಾದರು.

ಅರಿಕಾ ಅವಿಗ್ನಾರ್

ಅವಿಗ್ನಾರ್ ಇಸ್ರೇಲ್ ಚಿತ್ರಕಲಾವಿದನಾಗಿದ್ದು, 1929ರಲ್ಲಿ ಹುಟ್ಟಿದ. ಚಿತ್ರ, ಮುದ್ರಣಕಲೆ ಮತ್ತು ಕಲಾ ಬರಹಗಾರನಾಗಿದ್ದು, ಪ್ಯಾರಿಸಿನಲ್ಲಿ ನೆಲೆಸಿ, ಅಲ್ಲಿ ಚಿತ್ರಗಳನ್ನು ರಚಿಸಿದ್ದಾನೆ. ಚಿತ್ರಗಳಲ್ಲಿ ಪ್ರತಿಮೆಗಳನ್ನು ಬಿಟ್ಟು, ಅಮೂರ್ತ ಕಲೆಯಲ್ಲಿ ಚಿತ್ರ ರಚಿಸಿದವರಲ್ಲಿ ಅವನೂ ಒಬ್ಬನು.

ಅಲೆಕ್ಸಾಂಡರ್ ಜಾನ್‌ವೈಟ್

ಜಾನ್‌ವೈಟ್ 1856ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದನು ಮತ್ತು ಭಾವಚಿತ್ರಗಳನ್ನು ರಚಿಸುವುದರಲ್ಲಿ ಪ್ರಸಿದ್ಧಿ ಪಡೆದನು. ವಾಷಿಂಗ್‌ಟನ್‌ನಲ್ಲಿರುವ ಲೈಬ್ರರಿ ಆಫ್ ಕಾಂಗ್ರೆಸ್ ಹಾಗೂ ಪಿಟ್ಸ್‌ಬರ್ಗ್‌ನಲ್ಲಿ ಅವನು ರಚಿಸಿರುವ ಭಿತ್ತಿಚಿತ್ರಗಳಿವೆ.

ಅಸಿತ್‌ಕುಮಾರ್ ಹಲ್ದಾರ್

1890ರಲ್ಲಿ ಕಲ್ಕತ್ತದಲ್ಲಿ ಜನಿಸಿದ ಅವರು, ತಮ್ಮ ಪ್ರಾಥಮಿಕ ಶಿಕ್ಷಣದ ನಂತರ ಚಿತ್ರಕಲೆಯನ್ನು ಅಬನೀಂದ್ರನಾಥ ಟಾಗೂರರ ಬಳಿ ಕಲಿತರು. ಕಲ್ಕತ್ತದಲ್ಲಿ ಕಲಾ ಶಿಕ್ಷಣ ಪಡೆದ ನಂತರ, ರವೀಂದ್ರನಾಥ ಟಾಗೂರರು ಶಾಂತಿನಿಕೇತನದ ಪ್ರಿನ್ಸಿಪಾಲರನ್ನಾಗಿ ನೇಮಿಸಿದರು. ಸಂಯೋಜನಾ ಚಿತ್ರಗಳಲ್ಲಿ ಸಿದ್ಧಹಸ್ತರಾದ ಹಲ್ದಾರರು ಚಿತ್ರಕಲೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿದರು. ಹಲ್ದಾರ್ ಅವರು ಕಲಾಭವನವನ್ನು ಬಿಟ್ಟನಂತರ ರಾಜಾಸ್ತಾನದ ಜಯಪುರ ಕಲಾಸಂಸ್ಥೆಗೆ ಪ್ರಿನ್ಸಿಪಾಲರಾದರು. ಅನಂತರ ಯೂರೋಪ್‌ಗೆ ಹೋಗಿ ಅಲ್ಲಿ ಕಲೆಯ ನೂತನ ಪದ್ಧತಿಗಳನ್ನು ತಿಳಿದುಕೊಂಡು ಬಂದು ಲಕ್ನೋದಲ್ಲಿನ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದರು. ಅಲ್ಲಿ ಅವರ ಕಲೆ ವಿಕಾಸವಾಗಿ, ಅವರ ಕಲ್ಪನೆಗಳು ವಾಸ್ತವ ರೂಪ ಪಡೆಯಿತು.

ಅವರು ಜಲವರ್ಣ ಮಾಧ್ಯಮದಲ್ಲಿ ಪರಿಣತರಾಗಿದ್ದು, ಚಾರಿತ್ರಿಕ, ದೈನಂದಿನ, ಭಾವಚಿತ್ರಗಳನ್ನು ಚಿತ್ರಿಸಿದ್ದು, ರೇಖೆಗಳಿಗೆ ಪ್ರಾಧಾನ್ಯ ರೇಖೆಗಳಲ್ಲಿ ಲಯ, ಲಾಲಿತ್ಯ ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಹಿವಾಸಿ ಜಗನ್ನಾಥ

ಗುಜರಾತಿನ ಮಾಂಟ್ರಾದಲ್ಲಿ 1901ರಲ್ಲಿ ಹುಟ್ಟಿದ ಅಹಿವಾಸಿ, ಅವರ ತಂದೆ ದೇವಾಲಯದಲ್ಲಿ ಕೀರ್ತನಕಾರರಾಗಿದ್ದರು. ತಮ್ಮ ಮಗ ದೇವಾಲಯದಲ್ಲಿ ಸಂಗೀತ ಗಾರನಾಗಬೇಕೆಂದು ಆಶಿಸಿದ್ದರು. ಆದರೆ ಮಗ ಚಿತ್ರಕಲಾವಿದನಾದ. ತಮ್ಮ ಕಲಾ ಶಿಕ್ಷಣವನ್ನು ಮುಂಬಯಿನ ಜೆ. ಜೆ. ಕಲಾಶಾಲೆಯಲ್ಲಿ ಕಲಿತು, ಆಗಲೇ ಚಿತ್ರಕಲೆಯಲ್ಲಿ ಅದ್ವೀತಿಯ ಕೌಶಲವನ್ನು ಪಡೆದಿದ್ದರು. ಜೆ. ಜೆ. ಕಲಾಶಾಲೆಯ ಪಿನ್ಸಿಪಾಲರಾಗಿದ್ದ ಗ್ಲಾಡ್‌ಸ್ಟೋನ್ ಸಾಲೋಮನ್ ಅವರು ಅಹಿವಾಸಿಯವರಲ್ಲಿ ಭಿತ್ತಿಚಿತ್ರದಲ್ಲಿದ್ದ ಪ್ರತಿಭೆಯನ್ನು ಗಮನಿಸಿ, ಭಿತ್ತಿಚಿತ್ರ ಕಲಿಯಲು ಶಿಷ್ಯವೇತನ ಮಂಜೂರು ಮಾಡಿದ್ದರು. ಅವರು ದೆಹಲಿಯ ಸಚಿವಾಲಯದಲ್ಲಿ ಅನೇಕ ಭಿತ್ತಿಚಿತ್ರಗಳನ್ನು ಮತ್ತು ರಜಪೂತ ಸಾಂಪ್ರದಾಯಿಕ ತಂತ್ರ, ವರ್ಣಸಂಯೋಜನೆ, ಕುಶಲತೆಯಲ್ಲಿ ಚಿತ್ರಗಳನ್ನು ರಚಿಸುವುದರಲ್ಲಿ ಜಯಪ್ರಿಯರಾಗಿದ್ದರು. ರಜಪೂತ ಶೈಲಿಯಲ್ಲದೆ, ಅಜಂತ ಮತ್ತು ಮೊಗಲ್ ಶೈಲಿಯಲ್ಲೂ ಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೆ ಜೆ. ಜೆ. ಕಲಾಶಾಲೆಯ ಕಲಾವಿಭಾಗದ ಮುಖ್ಯಸ್ಥರಾಗಿದ್ದಾಗ, ಜನಪ್ರಿಯ ಕಲಾಶಿಕ್ಷಕರಾಗಿದ್ದರು.

ಆಗರ್ ಈನ್

ಇಂಗ್ಲೆಂಡಿನಲ್ಲಿ ನೆಲೆಸಿರುವ ಈಕೆ 1904ರಲ್ಲಿ ಜನಿಸಿದ್ದು, ಸರ್‌ರಿಯಲಿಸಂ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿದ್ದಾಳೆ ಹಾಗೂ ಬ್ರಿಟನ್ನಿನ ಪ್ರಮುಖ ಕಲಾವಿದೆ. 1936ರಲ್ಲಿ ನಡೆದ ಅಂತರರಾಷ್ಟ್ರೀಯ ಸರ್‌ರಿಯಲಿಸಂ ಕಲಾಪ್ರದರ್ಶನದಲ್ಲಿ ಈಕೆಯ ಕಲಾಕೃತಿಗಳು ಪ್ರದರ್ಶಿತವಾಗಿದ್ದವು.

ಆರ್ಚಿಪೆಂಕೊ ಅಲೆಕ್ಸಾಂಡರ್

ಅಲೆಕ್ಸಾಂಡರ್ ಮೂಲತಃ ರಷ್ಯಾದೇಶದವನಾಗಿದ್ದು, 1882ರಲ್ಲಿ ಜನಿಸಿದ. ಪ್ಯಾರಿಸಿಗೆ ಬಂದನಂತರ ಅಲ್ಲಿ ಕ್ಯೂಬಿಸ್ಟ್ ಕಲಾವಿದರೊಂದಿಗೆ ಸಂಪರ್ಕ ಪಡೆದು, ಕ್ಯೂಬಿಸ್ಟ್ ಶಿಲ್ಪಗಳನ್ನು ರಚಿಸಿದನು. ಇಪ್ಪತ್ತನೇ ಶತಮಾನದಲ್ಲಿ ಅಭಿವೃದ್ಧಿ ಹೊಂದಿದ ಅನೇಕ ಹೊಸ ಶೈಲಿಗಳಲ್ಲಿ ಅವನ ಶಿಲ್ಪಗಳು ಮುಖ್ಯವಾದುವು. ಕ್ಯೂಬಿಸ್ಟ್ ಶಿಲ್ಪಿಯಾದ ಅವನು ಅನೇಕ ಹೊಸ ಪ್ರಯೋಗಗಳನ್ನು ತಂದನು. ಅದೆಂದರೇ, ಕೊಲಾಜ್ ತಂತ್ರ, ಮರದ ಉಪಯೋಗ, ಲೋಹ ಮತ್ತು ಗಾಜು ಇತ್ಯಾದಿ 'ಈಜ್ ಬಾಕ್ಸರ್ಸ್' ಶಿಲ್ಪ ಅವನ ಮೇರು ಕೃತಿ. ಅವನು 1964ರಲ್ಲಿ ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಗಸ್ಟೆ ಹರ್ಬಿನ್

ಆಗಸ್ಟೆ ಹರ್ಬಿನ್

ಫ್ರೆಂಚ್ ಚಿತ್ರಕಲಾವಿದನಾದ ಹರ್ಬಿನ್ 1882ರಲ್ಲಿ ಜನಿಸಿದ. ಅವನು ಅಮೂರ್ತ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿದ್ದು, ಪ್ಯಾರಿಸಿನಲ್ಲಿ ನೆಲೆಸಿದ್ದು, ಮೊದಲಿಗೆ ಕ್ಯೂಬಿಸ್ಟ್ ಚಿತ್ರಗಳಿಂದ ಪ್ರಭಾವಿತನಾಗಿದ್ದ. ಅನಂತರ ಅಮೂರ್ತ ಶೈಲಿಯಲ್ಲಿ ಕೃತಿಗಳನ್ನು ರಚಿಸಿದ್ದು, ಜಾಮಿತಿಯ ಆಕಾರಗಳನ್ನು ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆಂಡಿ ವರೋಲ್

ವರೋಲ್ 1928ರಂದು ಜನಿಸಿದ್ದು, ಅಮೆರಿಕದ ಚಿತ್ರ, ಪ್ರಿಂಟ್ ಮೇಕರ್ ಮತ್ತು ಚಲನಚಿತ್ರ ನಿರ್ಮಾಪಕ. ಅಮೆರಿಕಾದ ಪಾಪ್ ಕಲೆಯ ಮುಖ್ಯನಾದ ಪ್ರತಿಪಾದಕ. ಮೂಲತಃ ವಾಣಿಜ್ಯ ಚಿತ್ರಕಲಾವಿದನಾದ ಅವನು ತಂತ್ರ ಮತ್ತು ಕಲ್ಪನೆಗಳನ್ನು ಚಿತ್ರಗಳಲ್ಲಿ ಬಳಸಿದ. ಮೊದಲ ಕಲಾಕೃತಿಗಳು ಶೈಲಿಯುಕ್ತವಾದ ವ್ಯಂಗ್ಯ ಚಿತ್ರಮಾಲಿಕೆಗಳು ಹಾಗೂ ಅನಂತರದ ಚಿತ್ರಗಳು ಪುನಾರಾವರ್ತನೆಯ ಭಾವನೆಗಳನ್ನು ಸಿಲ್ಕ್‌ಸ್ಕ್ರೀನ್‌ನಿಂದ ಕ್ಯಾನವಾಸ್ ಮೇಲೆ ರೂಪಿಸಿದ ಹಾಗೂ ಹೆಚ್ಚಾಗಿ ಭಾವಚಿತ್ರಗಳಾಗಿದ್ದು, ಭಾವನೆಗಳು, ಕೋಕಾಕೋಲಾ ಬಾಟಿಲುಗಳು, ಡಾಲರ್ ಬಿಲ್ಸ್, ಹೂಗಳು ಇವು ಚಿತ್ರದ ಶೀರ್ಷಿಕೆಗಳು.

ಆಂಡ್ರೆಯಾ ಡೇಲ್ ಸಾರ್ಟೋ

ಸಾರ್ಟೋ 1486ರಲ್ಲಿ ಫ್ಲಾರೆನ್ಸಿನಲ್ಲಿ ಜನಿಸಿದ. ಲಿಯೋನಾರ್ಡೋ ದ ವಿಂಚಿ, ಮೈಕೆಂಲೆಂಜಲೋ ಅವರ ಚಿತ್ರಗಳನ್ನು ಪ್ರತಿಕೃತಿಗಳನ್ನು ಬರೆದು ಕಲೆಯಲ್ಲಿ ಅವುಗಳ ತಂತ್ರವನ್ನು ಕಲಿತು, ಅನಂತರ ಕಲಾಶಾಲೆಯನ್ನು ಸೇರಿದ. ಫ್ಲಾರೆನ್ಸ್‌ನ ಸರ್ವೈಟ್ ಪಂಥದ ಚರ್ಚಿನಲ್ಲಿ ಐದು ಚಿತ್ರಗಳನ್ನು ಚಿತ್ರಿಸಿದ. ಫ್ಲಾರೆನ್ಸಿನಲ್ಲಿ ಸಂತ ಬ್ಯಾಪ್ಟಿಸ್ಟ್ ಜಾನನ ಕಥೆಯನ್ನು ಭಿತ್ತಿಚಿತ್ರವಿಧಾನದಲ್ಲಿ ರಚಿಸಿದ. ಚಿತ್ರಕಲೆಯಲ್ಲಿ ಅವನದು ಪಳಗಿದ ಕೈ ಮತ್ತು ನಕಲು ಮಾಡುವುದರಲ್ಲಿ ಸಿದ್ಧಿ ಪಡೆದಿದ್ದು, ಚಿತ್ರಗಳಲ್ಲಿ ಬೆಳಕು, ಬಣ್ಣಗಳ ಹೊಂದಾಣಿಕೆ, ನೆರಳು-ಬೆಳಕುಗಳ ಮನೋಜ್ಞ ಪರಿಣಾಮ ಬರುವಂತೆ ಚಿತ್ರಿಸುತ್ತಿದ್ದ.

ಆದಿಮೂಲಂ ಕೆ. ಎಂ.

ಆದಿಮೂಲಂ ತಮಿಳುನಾಡಿನ ಕೀರಂಬೂರ್‌ನಲ್ಲಿ 1938ರಲ್ಲಿ ಜನಿಸಿದ್ದು, 1966ರಲ್ಲಿ ಮದ್ರಾಸಿನ ಸರ್ಕಾರಿ ಕಲಾ ಕಾಲೇಜಿನಿಂದ ಡಿಪ್ಲೊಮೊವನ್ನು ಪಡೆದಿದ್ದು, ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 1969ರಲ್ಲಿ ಗಾಂಧೀ ಶತಾಬ್ದಿ ಸಂದರ್ಭದಲ್ಲಿ, ಗಾಂಧೀಜಿಯ ಬಗ್ಗೆ ನೂರು ರೇಖಾಚಿತ್ರಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ. ಇದುವರೆಗೂ ಸುಮಾರು ಇಪ್ಪತ್ತು ಪ್ರಶಸ್ತಿಗಳನ್ನು ಪಡೆದಿರುವ ಅವರು 1979ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಅವರು ರೇಖೆಗಳಲ್ಲಿ ಪ್ರಭುತ್ವ ಮತ್ತು ಕುಶಲತೆ ಹೊಂದಿದ್ದು, ತಮ್ಮ ಕಲ್ಪನೆಗಳನ್ನು ಅಮೂರ್ತ ಶೈಲಿಯಲ್ಲಿ ಚಿತ್ರಿಸುವರು. ಶಾಯಿಯ ಚಿತ್ರ ಮತ್ತು ತೈಲವರ್ಣದ ಚಿತ್ರಗಳಲ್ಲಿ ತಮ್ಮ ಆಂತರ್ಯಭಾವವನ್ನು, ಅವಕಾಶದಲ್ಲಿ ವಸ್ತುವನ್ನು ಸೂಕ್ತವಾಗಿ ಸಂಯೋಜಿಸಿ ಭ್ರಮೆಯನ್ನುಂಟು ಮಾಡುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರ್ಪ್‌ಜೀನ್

ಶಿಲ್ಪ, ಗ್ರಾಫಿಕ್, ಚಿತ್ರ ಮತ್ತು ಕಲಾಲೇಖಿಕ. ಅಮೂರ್ತ ಶಿಲ್ಪಗಳನ್ನು ಮೊದಲು ರಚಿಸಿದ್ದು, ಅನಂತರ ದಾದಾ ಚಳವಳಿ ಮತ್ತು ಸರ್‌ರಿಯಲಿಸಂ ಕಲಾ ಪ್ರದರ್ಶನದಲ್ಲಿ ತನ್ನ ಕೃತಿಗಳನ್ನು ಪ್ರದರ್ಶಿಸಿದನು. ಶಿಲ್ಪದ ಉಬ್ಬು ಕೃತಿಗಳನ್ನಲ್ಲದೆ, ಕೊಲಾಜ್ ಮತ್ತು ರೇಖಾಚಿತ್ರಗಳನ್ನು ರಚಿಸಿದ್ದಾನೆ. ಪ್ಯಾರಿಸಿನ ಯುನೆಸ್ಕೊ ಕಟ್ಟಡದಲ್ಲಿ ಅವನ ಶಿಲ್ಪದ ಉಬ್ಬು ಕೃತಿಯಿದೆ. ಮತ್ತು ಅವನ ಬಹುಪಾಲು ಕೃತಿಗಳು ಅಮೂರ್ತ ಶೈಲಿಯಲ್ಲಿವೆ.

ಆಲ್ಬರ್ಟ್ ಡ್ಯೂರೆರ್

ಡ್ಯೂರೆರ್ ಜರ್ಮನ್ ದೇಶದ ನೂರೆನ್‌ಬರ್ಗ್‌ನಲ್ಲಿ 1471ರಲ್ಲಿ ಹುಟ್ಟಿದನು. ಚಿತ್ರ, ಎನ್‌ಗ್ರೇವಿಂಗ್, ಮರಕೆತ್ತನೆಗಳಲ್ಲಿ ಪರಿಣತನಾಗಿದ್ದ. ತಂದೆಯೇ ಅವನಿಗೆ ಮೊದಲ ಗುರು. ಇಟಲಿಗೆ ಬಂದನಂತರ, ಇಟಲಿಯ ಚಿತ್ರಗಳ ಅಭ್ಯಾಸ ಮಾಡಿದ. ಅವನು ರಚಿಸಿರುವ ಸ್ವ-ಭಾವಚಿತ್ರಗಳು. ನೋಡುಗನನ್ನು ತುಂಬಾ ಆಸಕ್ತಿ ಹುಟ್ಟಿಸುತ್ತವೆ. ಪುಸ್ತಕಗಳಿಗಾಗಿ ಮಾಡಿದ ಮರ ಕೆತ್ತನೆಗಳು ಜನಪ್ರಿಯ. ಅಲ್ಲದೆ ಅವನು ರಚಿಸಿರುವ ಜಲವರ್ಣ ಚಿತ್ರಗಳಾದ ಮನುಷ್ಯರು. ಪ್ರಾಣಿಗಳು. ಮರಗಿಡಗಳನ್ನು ರಚಿಸಿದ್ದಾನೆ. ತೈಲವರ್ಣಗಳಲ್ಲಿ ಪುನರುಜ್ಜೀವನ ಕಾಲದ ಕಲಾವಿದರು ರಚಿಸಿರುವ ಮಾದರಿಯಲ್ಲೇ ರಚಿಸಿದ್ದಾನೆ.

ಆಲ್‌ಬರ್ ಜೋಸೆಫ್

ಜೋಸೆಫ್ 1888ರಲ್ಲಿ ಜನಿಸಿದ್ದು, ಜರ್ಮನ್ ಚಿತ್ರ ಮತ್ತು ಡಿಸೈನರ್. ಬರ್ಲಿನ್‌ನಲ್ಲಿ ತನ್ನ ಕಲಾಶಿಕ್ಷಣ ಪಡೆದನು, 1933ರಲ್ಲಿ ಅಮೆರಿಕಾಕ್ಕೆ ಬಂದು ಸ್ವತಂತ್ರವಾದ ಅಮೂರ್ತ ಕಲೆಯನ್ನು ಅಭಿವೃದ್ಧಿ ಪಡಿಸಿದನು ಮತ್ತು ವರ್ಣಗಳಲ್ಲಿ ಕೌಶಲವಿದ್ದು, ಅವುಗಳನ್ನು ಆಸಕ್ತಿಯಿರುವಂತೆ ಪ್ರಯೋಗ ನಡೆಸಿದನು. ಅಮೆರಿಕದ ಜಾಮಿತಿಯ ಅಮೂರ್ತ ಕಲೆಯನ್ನು ಅಭಿವೃದ್ಧಿ ಪಡಿಸಿ ಪ್ರಮುಖ ಕಲಾವಿದನೆನಿಸಿದನು.

ಆಲ್ಬಾನೇ ವೈನೋ

ಆಲ್ಬಾನೇ 1894ರಲ್ಲಿ ಜನಿಸಿದ್ದು, ಪಿನ್ನಿಷ್‌ನ ಚಿತ್ರ ಮತ್ತು ಶಿಲ್ಪ ಕಲಾವಿದನಾಗಿದ್ದು, ಆಧುನಿಕ ಶಿಲ್ಪಗಳನ್ನು ತನ್ನ ದೇಶದಲ್ಲಿ ರಚಿಸಿದ್ದಾನೆ. ಅವನ ಬಹುಪಾಲು ಶಿಲ್ಪಗಳು ಗ್ರಾನೈಟ್‌ನಿಂದ ಕೂಡಿದ್ದು, ಪರಿಸರದ ಗುಣಗಳನ್ನು ಹೊಂದಿದ್ದು, ಸಾಂಪ್ರದಾಯಿಕತೆ ಕಾಣಬಹುದು. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಅನೇಕ ಮುಖ್ಯ ಸ್ಥಳಗಳಲ್ಲಿ ಹೆಣ್ಣಿನ ಮುಂಡ ಮತ್ತು ಭಾವಶಿಲ್ಪಗಳನ್ನು ರಚಿಸಿದ್ದು, 1966ರಲ್ಲಿ ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಆರಾ ಕೆ. ಎಚ್.

ಆರಾ 1914ರಲ್ಲಿ ಆಂಧ್ರಪ್ರದೇಶದ ಬೋಲಾರಂನಲ್ಲಿ ಜನಿಸಿದ್ದು, ಸ್ವತಂತ್ರವಾಗಿ ಕಲೆಯನ್ನು ಕಲಿತರು ಹಾಗೂ 1948ರಲ್ಲಿ ಪ್ರೊಗ್ರೇಸೀವ್ ಆರ್ಟಿಸ್ಟ್ಸ್ ಗ್ರೂಪಿಗೆ ಸೇರಿದರು. ಆರಾ ಜನರ ಜೀವನಕ್ಕೆ ಸ್ಪಂದಿಸಿ, ಸ್ಟಿಲ್‌ಲೈಫ್ ಚಿತ್ರಗಳು, ನಗ್ನಚಿತ್ರಗಳು, ತಾವು ಕಂಡ ಜನಜೀವನವನ್ನು ತಕ್ಷಣವೇ ಮತ್ತು ನೇರವಾಗಿ ಪ್ರತಿಕ್ರಿಯೇ ಮಾಡುವರು. ಅವರ ಸಂಯೋಜನೆ ಹಾಗೂ ನಗ್ನಚಿತ್ರಗಳು ಹೊಸ ದೃಷ್ಟಿಕೋನದಿಂದ, ಭಾವನೆ ಮತ್ತು ಜಾಗೃತಿಯಿಂದ ರಚಿತವಾಗಿರುತ್ತದೆ. ಸ್ಟಿಲ್‌ಲೈಫ್ ಚಿತ್ರಗಳು ವೈವಿಧ್ಯಮಯವಾಗಿ ಹೂವಿನಿಂದ ಕೂಡಿ, ಖಾಲಿಯಾಗಿರುವ ಕುಂಡ, ಹಣ್ಣುಗಳು ಆಥವಾ ಸ್ಟಿಲ್‌ಲೈಫ್ ಮತ್ತು ನಗ್ನ ಹೆಣ್ಣಿರುವ ಸಂಯೋಜನೆಗಳಲ್ಲಿ ಹಾಗೂ ವಾಸ್ತವವಾದ ಜೀವನದ ಚಿತ್ರಣ ಕಾಣಬಹುದು. ಇವು ಕಾವ್ಯಾತ್ಮಕವಾಗಿ ಆಥವಾ ಸಾಹಿತ್ಯಿಕವಾಗಿ ರೂಪು ಗೊಂಡಿರುತ್ತದೆ. ವರ್ಣಗಳ ಬಳಕೆ ಅಸಧಾರಣವಾದುದು.

ಆಸ್ಕರ್ ಕೊಕೊಸ್ಕಾ

ಆಸ್ಕರ್ 1886ರಲ್ಲಿ ಜನಿಸಿದ್ದು, ಆಸ್ಟ್ರೀರಿಯನ್ ಕಲಾವಿದ ಮತ್ತು ವಿಯೆನ್ನಾದಲ್ಲಿ ಶಿಕ್ಷಣ ಪಡೆದ. ಅವನ ಮೊದಲ ಗ್ರಾಫಿಕ್ ಕೃತಿಗಳು ಬಹಳ ವೈಯಕ್ತಿಕವಾದುದು. ಭಾವಚಿತ್ರಗಳು ಅಭಿವ್ಯಕ್ತಿವಾದದ ಶೈಲಿಯಲ್ಲಿ ರಚಿತವಾಗಿವೆ ಮತ್ತು ಭಾವಚಿತ್ರಗಳಲ್ಲಿ ತಲೆ, ಕೈಗಳಿಗೆ ಹೆಚ್ಚು ಪ್ರಾಧಾನ್ಯತೆ ಹಾಗೂ ಕುಶಲತೆಯಿಂದ ಕೂಡಿರುತ್ತದೆ. ಅನಂತರ ರಚಿಸಿದ ಪ್ರಕೃತಿ ಚಿತ್ರಗಳಲ್ಲಿ ವಾಸ್ತವಿಕತೆ ಕಾಣಬಹುದು. ಅವನು 1980ರಲ್ಲಿ ತೀರಿಕೊಂಡ.

ಇನ್‌ಗ್ರೇಸ್ ಜೀನ್ ಆಗಸ್ಟೆ

ಇನ್‌ಗ್ರೇಸ್ 1780ರಲ್ಲಿ ಜನಿಸಿದ್ದು, ಫ್ರೆಂಚ್ ಚಿತ್ರಕಲಾವಿದ ಮತ್ತು ಡ್ರಾಫ್ಟ್‌ಮೆನ್. ಪ್ಯಾರಿಸಿನಲ್ಲಿ ಕಲಾಶಿಕ್ಷಣ ಪಡೆದು, 1806ರಲ್ಲಿ ಅವನು ರಚಿಸಿದ 'ನೆಪೋಲಿಯನ್ I ಆನ್ ದಿ ಇಂಪೀರಿಯಲ್ ಥ್ರೋನ್' ಭಾವಚಿತ್ರ ಹಾಗೂ ಅವನ ಅನೇಕ ಚಿತ್ರಗಳು ವಿಮರ್ಶಕರ ಕಟುಟೀಕೆಗೆ ಗುರಿಯಾಯಿತು. ಭಾವಚಿತ್ರ ಮತ್ತು ರೇಖಾಚಿತ್ರಗಳಲ್ಲಿ ವಾಸ್ತವಿಕತೆ, ಕುಶಲತೆ, ಭಾವಪೂರ್ಣತೆಯನ್ನು ಕಾಣುತ್ತೇವೆ. ಅವನು 1867ರಲ್ಲಿ ಮರಣಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಈಪ್‌ಸ್ಟೀನ್ ಸರ್ ಜೇಕಬ್

ಜೇಕಬ್ 1880ರಲ್ಲಿ ಜನಿಸಿದ್ದು, ಅಮೆರಿಕಾ ದೇಶದವನು. ಭಾವಚಿತ್ರ ಮತ್ತು ವಾತಾವರಣ ಶಿಲ್ಪ ರಚನೆಯಲ್ಲಿ ಅನೇಕ ಶಿಲ್ಪಗಳನ್ನು ರಚಿಸಿದ್ದು 1905ರಲ್ಲಿ ಲಂಡನ್ನಿನಲ್ಲಿ ನೆಲಸಿದ್ದನು. ಬ್ರಿಟಿಷ್ ಮೆಡಿಕಲ್ ಸಂಸ್ಥೆಯ ಕಟ್ಟಡಕ್ಕೆ ಹದಿನೆಂಟು ಉಬ್ಬು ಕೆತ್ತನೆಯ ಶಿಲ್ಪಗಳನ್ನು ರೆಚಿಸಿದ್ದಾನೆ. ಅವನು ರಚಿಸಿರುವ ಮಕ್ಕಳ ಭಾವಶಿಲ್ಪಗಳು ಸಮಕಾಲೀನ ಕ್ಷೇತ್ರದಲ್ಲಿ ಹೆಸರು ಪಡೆದಿದೆ. ಆವನು 1959ರಲ್ಲಿ ನಿಧನನಾದ.

ಈಶ್ವರ್‌ದಾಸ್

ಲಕ್ನೋದಲ್ಲಿ ಷಾ ಕುಟುಂಬದಲ್ಲಿ ಜನಿಸಿದ ಈಶ್ವರ್‌ದಾಸ್, 1935ರಲ್ಲಿ ಲಕ್ನೊವಿನಲ್ಲಿ ಕಲಾಶಾಲೆ ಸೇರಿ, ಹೆಸರಾಂತ ಕಲಾವಿದ ಅಸಿತ್‌ಕುಮಾರ್ ಹಲ್ದಾರ್ ಅವರ ಬಳಿ ಶಿಕ್ಷಣ ಪಡೆದರು. ಅವರು ಮೊಗಲ್ ಮತ್ತು ರಜಪೂತ್ ಶೈಲಿಯಲ್ಲಿ ರಚಿಸಿರುವ ಜಲವರ್ಣ ಚಿತ್ರಗಳಲ್ಲಿ ವಾಶ್ ಪದ್ಧತಿಯಲ್ಲಿ ಪ್ರಭುತ್ವವನ್ನು ಮತ್ತು ಕೆಲವು ಭಾವಚಿತ್ರಗಳನ್ನು ರಚಿಸಿದ್ದಾರೆ. ಚೈನಾ ಮತ್ತು ಜಪಾನ್ ವಾಶ್ ತಂತ್ರದಲ್ಲಿ ಆಸಕ್ತಿ ಹೊಂದಿ, ಈ ತಂತ್ರವನ್ನು ತಮ್ಮ ಚಿತ್ರಗಳಲ್ಲಿ ಅಳವಡಿಸಿ, ವರ್ಣಗಳ ಹೊಂದಾಣಿಕೆ, ಭಾವನೆ ಮತ್ತು ಲಯಬದ್ಧತೆ, ಚಲನೆ ಕಾಣಬಹುದು. ಭಕ್ತ ಸೂರದಾಸನ ಬಗ್ಗೆ ರಚಿಸಿರುವ ಚಿತ್ರಗಳು ಕಲಾವಿದರ ಮನ್ನಣೆ ಗಳಿಸಿವೆ. ಪಂಜಾಬ್, ದಸರಾ, ಬಾಂಬೆ ಆರ್ಟ್ ಸೊಸೈಟಿಯ ಕಲಾ ಪ್ರದರ್ಶನಗಳಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಉಡವಿಗ್ ಅರ್ನ್‌ಸ್ಟ್ ಕ್ರಿಚನರ್

ಕ್ರಿಚನರ್ 1880ರಲ್ಲಿ ಜನಿಸಿದ್ದು, ಜರ್ಮನಿಯ ಅಭಿವ್ಯಕ್ತಿವಾದದ ಚಿತ್ರ ಕಲಾವಿದ. ಅವನು ಡ್ರೆಸ್‌ಡನ್‌ನಲ್ಲಿ ವಾಸ್ತುಶಿಲ್ಪದಲ್ಲಿ ಶಿಕ್ಷಣ ಪಡೆದಿದ್ದು, ಡೈಬ್ರೂಕ್ ಸಂಸ್ಥೆಯ ಸದಸ್ಯರ ಪರಿಚಯವಾಗಿ, ಅವನು ಅದರ ಮುಖ್ಯಸ್ಥನಾಗಿದ್ದ, ಗಾಗಿನ್, ಮಂಕ್, ವಾನ್‌ಗಾಗ್ ಮತ್ತು ಪುರಾತನ ಕಲೆಯಿಂದ ಸ್ಫೂರ್ತಿ ಪಡೆದ ಈ ತಂಡ, ಜರ್ಮನ್ ಅಭಿವ್ಯಕ್ತಿವಾದವನ್ನು ಮೊದಲು ಘೋಷಿಸಿ, ಮನುಷ್ಯನ ಭಾವನೆಗಳಿಗೆ ಹೆಚ್ಚು ಪ್ರಾಧಾನ್ಯ ನೀಡಿತು. ಕ್ರಿಚನರ್ ವರ್ಣಗಳನ್ನು ಹರಡಿ, ಪ್ರಜ್ವಲವಾದ ಕಿತ್ತಲೆ ಮತ್ತು ಕಡುಗೆಂಪು ವರ್ಣಗಳಿಂದ, ದೃಶ್ಯ ಸಂವೇದನೆ ತರುವುದು. ದಟ್ಟವಾದ ರೇಖೆಗಳು ಮತ್ತು ಪುರಾತನ ಕಲೆಯಿಂದ ಪ್ರಭಾವಿತನಾಗಿ, ಮರಕೆತ್ತನೆಯ ಚಿತ್ರಗಳನ್ನು ಅತಿಶಯವಾಗಿ ವಿರೂಪಗೊಳಿಸಿದ್ದಾನೆ. ಅವನು 1938ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಡ್ವರ್ಡ್ ಮಂಕ್

ಎಡ್ವರ್ಡ್ ಮಂಕ್

ಮಂಕ್ 1863ರಲ್ಲಿ ಹುಟ್ಟಿದ್ದು, ನಾರ್ವೆಜಿಯನ್ ದೇಶದ ಚಿತ್ರಕಲಾವಿದ ಜಸ್ಲೊವಿನಲ್ಲಿ ತನ್ನ ಕಲಾ ಶಿಕ್ಷಣ ಪಡೆದನು. ಅವನ ಮೊದಲ ಚಿತ್ರಗಳು ಸಾಮಾಜಿಕ ಯಥಾವತ್ತಾದ ಪ್ರತಿಬಿಂಬದ ಚಿತ್ರಗಳು ಹಾಗೂ ಅವನ ಚಿತ್ರಗಳು ಪ್ಯಾರಿಸ್ ಮತ್ತು ಬರ್ಲಿನಿನ ನಿಯತಕಾಲಿಕಗಳಲ್ಲಿ ಪ್ರಕಟವಾಗಿ, ಅನಂತರ ಜನಪ್ರಿಯನಾದ. ಜರ್ಮನ್ ಅಭಿವ್ಯಕ್ತವಾದದ ಮುಖ್ಯ ಪ್ರತಿಪಾದಕ. 1909ರಲ್ಲಿ ನಾರ್ವೆಗೆ ಬಂದು, ಓಸ್ಲೋ ವಿಶ್ವವಿದ್ಯಾಲಯದಲ್ಲಿ ಭಿತ್ತಿಚಿತ್ರ ಮತ್ತು ಭಾವಚಿತ್ರಗಳನ್ನು ರಚಿಸಿದ. ಕ್ಷಯರೋಗ ದಿಂದ ಸತ್ತ ತಂಗಿಯ ಬಗ್ಗೆ 'ದಿ ಸಿಕ್ ಚೈಲ್ಡ್' ಚಿತ್ರ ಎಕ್ಸ್‌ಪ್ರೆಸಮ್‌ನಲ್ಲಿದೆ. 'ಚೀತ್ಕಾರ' ಎಂಬ ಚಿತ್ರದಲ್ಲಿ ವ್ಯಕ್ತಿಯು ಭಯಭೀತಿಯಿಂದ ಕಿರುಚುತ್ತಿದ್ದು, ಆತನು ಕೆನ್ನೆಗಳಿಗೆ ಕೈಯೊತ್ತಿ ಬೊಬ್ಬೆಯಿಡುವಂತಿದೆ. ಅವನು ಈ ಚಿತ್ರ ಮತ್ತು ಪ್ರಿಂಟ್ಸ್ ಗಳಲ್ಲಿ ನೋವು ಪ್ರಧಾನವಾಗಿದ್ದು, ಅದನ್ನು ಅಭಿವ್ಯಕ್ತಿಸಿದ್ದಾನೆ. ಉಜ್ವಲ ವರ್ಣಗಳು ಮತ್ತು ಅವುಗಳ ಲಯ, ಭಯಭೀತಿಯನ್ನು ವ್ಯಕ್ತಪಡಿಸುತ್ತವೆ. ಅವನು 1944ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಡ್ವರ್ಡ್ ಮಾನೆ

ಎಡ್ವರ್ಡ್ ಮಾನೆ

ಎಡ್ವರ್ಡ್ ಮಾನೆ 1832ರಲ್ಲಿ ಜನಿಸಿದ. ಅವನ ಗುರು ಥಾಮಸ್ ಕೂಟರ್. ಮಾನೆ ತನ್ನ ಚಿತ್ರಗಳಲ್ಲಿ ಸ್ವತಂತ್ರ ದಾರಿಯನ್ನು ಹಿಡಿದು, ಇಟಲಿ, ಜರ್ಮನಿ, ಆಸ್ಟ್ರೇಲಿಯ, ಹಾಲೆಂಡ್ ದೇಶಗಳಲ್ಲಿ ಪ್ರವಾಸ ಮಾಡಿ, ತನ್ನ ಕಲಾಭ್ಯಾಸವನ್ನು ಮುಂದುವರೆಸಿದ. ಕಂಡದ್ದನ್ನು ಕಂಡಂತೆ ಚಿತ್ರಿಸುತ್ತಿದ್ದ. ವರ್ಣಗಳನ್ನು ವಿಶಿಷ್ಟ ರೀತಿಯಲ್ಲಿ ಉಪಯೋಗಿಸಿ, ಬೆಳಕಿನ ಪರಿಣಾಮವನ್ನು ಚಿತ್ರಿಸುವುದರಲ್ಲಿ ವಿಶಿಷ್ಟತೆ ಕಾಣಬಹುದು. 'ಪ್ರಕೃತಿಯಲ್ಲಿ ಸ್ಪಷ್ಟ ಗೆರೆಗಳಿಲ್ಲ' ಎನ್ನುವುದು ಅವನ ವಾದ ಹಾಗೂ ತನ್ನ ಚಿತ್ರ ರಚನೆಯಲ್ಲೂ ಇದೇ ತತ್ವವನ್ನು ಅನುಸರಿಸಿದ. 'ಹುಲ್ಲು ಬಯಲಿನ ಮೇಲೆ ಭೋಜನ' ಎಂಬ ಚಿತ್ರ ಹಲವು ವಿವಾದಗಳಿಗೆ ಕಾರಣವಾಯಿತು, ಒಲಿಂಪಿಯಾ, ಗಿಟಾರ್‌ವಾದಕ' ಚಿತ್ರಗಳು ಜನಪ್ರಿಯ. ಯಾವುದೇ ವಿವಾದ ಬಂದರೂ ತನ್ನ ದಾರಿ ಬಿಡದ ಅವನು ಹತ್ತೊಂಬತ್ತನೆಯ ಶತಮಾನದ ಅತ್ಯಂತ ಶ್ರೇಷ್ಠ ಚಿತ್ರಕಲಾವಿದ. ಅನಂತರ ಜನ ಅದನ್ನು ಒಪ್ಪಿಕೊಂಡರು. ಒಂದು ಚಿತ್ರದಲ್ಲಿ ಬೆಳಕು ಮುಖ್ಯ ಎಂಬುದು ಇವನ ಅಭಿಪ್ರಾಯವಾಗಿದ್ದು, 1883ರಲ್ಲಿ ನಿಧನ ಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಡ್ಗರ್ ಡಿಗಾಸ್

ಡಿಗಾಸ್ ಫ್ರೆಂಚ್ ಕಲಾವಿದನಾಗಿದ್ದು, 1834ರಲ್ಲಿ ಜನಿಸಿದ. ಚಿತ್ರ, ಡ್ರಾಫ್ಟ್ಸ್ ಮೆನ್, ಶಿಲ್ಪ ಮತ್ತು ಗ್ರಾಫಿಕ್ ಕಲಾವಿದನಾಗಿದ್ದು, ಪ್ಯಾರಿಸಿನಲ್ಲಿ ಕಲಾ ಶಿಕ್ಷಣ ಪಡೆದ. ಭಾವಚಿತ್ರ, ಸಂಯೋಜನೆಯ ಚಿತ್ರಗಳು ಅತ್ಯಂತ ಶ್ರೇಷ್ಠವಾಗಿದ್ದು, ನಂತರದ ಚಿತ್ರಗಳು ನೃತ್ಯಗಾರರು, ನಗರಜೀವನ, ವಾತಾವರಣದೊಂದಿಗೆ ರಚಿತವಾದ ಭಾವ ಚಿತ್ರಗಳು - ಇವು ಅವನನ್ನು ಶ್ರೇಷ್ಠ ಕಲಾವಿದನನ್ನಾಗಿ ಮಾಡಿವೆ. ಗ್ರಾಫಿಕ್ ಮಾಧ್ಯಮದಲ್ಲಿ ಪ್ರಯೋಗ ನಡೆಸಿ, ಪೇಸ್ಟಲ್ ವರ್ಣ, ಮಾನೋಟೈಪ್, ಎಚ್ಚಿಂಗ್ ಗಳಲ್ಲಿ ನೃತ್ಯಗಾರ್ತಿಯರ ಮತ್ತು ರೇಸಿನ ಕುದುರೆಗಳ ಚಲನೆ ಹಾಗೂ ಭಾವಗಳಿಗೆ ಹೆಚ್ಚು ಪ್ರಾಧಾನ್ಯ ನೀಡಿದ್ದಾನೆ. ಅವನು 1917ರಲ್ಲಿ ತೀರಿಕೊಂಡ.

ಎಡ್ವರ್ಡ್ ವಲ್ಲಾರ್ಡ್

ವಲ್ಲಾರ್ಡ್ 1868ರಲ್ಲಿ ಜನಿಸಿದ್ದು, ಅವನು ಫ್ರೆಂಚ್ ಚಿತ್ರಕಲಾವಿದ, ಪ್ಯಾರಿಸ್ಸಿನ ಬ್ಯೂಆರ್ಟ್ಸ್-ಆರ್ಟ್ಸ್ ಮತ್ತು ಅಕಾಡೆಮಿ ಜೂಲಿಯಾದಲ್ಲಿ ಕಲಾಶಿಕ್ಷಣ ಪಡೆದನು. ಹೆಚ್ಚಾಗಿ ಗೃಹಗಳ ಇಂಟೀರಿಯರ್ ದೃಶ್ಯಗಳನ್ನು ಚಿತ್ರಿಸಿದ್ದು, ಸಮೃದ್ಧವಾದ ವರ್ಣಗಳು ಮತ್ತು ಶಕ್ತಿಯುತವಾದ ಆಕಾರಗಳನ್ನು ಕಾಣಬಹುದು. ಅವನು 1940ರಲ್ಲಿ ಮರಣಹೊಂದಿದ.

ಎಪ್‌ಸ್ಟೈನ್

ಜೇಕಬ್ ಎಫ್‌ಸ್ಟೈನ್ ಶಿಲ್ಪಕಲಾವಿದನಾಗಿದ್ದು, 1880ರಲ್ಲಿ ನ್ಯೂಯಾರ್ಕ್‌ನಲ್ಲಿ ಜನಿಸಿದ. ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಎಪ್‌ಸ್ಟೈನ್ ನ್ಯೂಯಾರ್ಕಿನ ಚಿತ್ರಕಲಾ ಸಂಸ್ಥೆಯೊಂದನ್ನು ಸೇರಿ, ಶಿಲ್ಪಕಲೆಯನ್ನು ಕಲಿತ. ಅನಂತರ ಅನೇಕ ಶಿಲ್ಪಗಳನ್ನು ರಚಿಸಿದ. ಪ್ಯಾರಿಸಿಗೆ ತೆರಳಿ ಅಲ್ಲಿ ಈಜಿಪ್ಟಿನ ವಿಗ್ರಹಗಳನ್ನು ಪರೀಕ್ಷಿಸುವ ಅವಕಾಶ ಲಭಿಸಿತು. ಅವನ ಶಿಲ್ಪಗಳಲ್ಲಿ ಪ್ರಾಚೀನ ಆಫ್ರಿಕಾ, ಈಜಿಪ್ಟ್ ಮತ್ತು ಶಿಲ್ಪಕಲಾವಿದ ರೊಡಿನಿನ ಪ್ರಭಾವ ಕಾಣಬಹುದು; ಅವನ ಶಿಲ್ಪಗಳು ವ್ಯಕ್ತಿಚಿತ್ರ, ಎದೆಯ ಭಾಗ ಗಳನ್ನೊಳಗೊಂಡ ಕಂಚಿನ ಪ್ರತಿಮೆಗಳು ಹಾಗೂ ಬೃಹತ್ ಆಕಾರದ ಕಲ್ಲಿನ ಶಿಲ್ಪಗಳು. ಇವುಗಳಲ್ಲದೆ ಅನೇಕ ಮೂರ್ತಿಶಿಲ್ಪಗಳು. ಮೂರ್ತಿಶಿಲ್ಪಗಳಲ್ಲಿ ವ್ಯಕ್ತಿಗಳ ಗುಣ ವೈಶಿಷ್ಟ್ಯ ಮತ್ತು ಅವನ ಪ್ರತಿಭೆ ಕಾಣುತ್ತೇವೆ. ಬರ್ನಾರ್ಡ್ ಷಾ, ಚರ್ಚಿಲ್, ಠಾಕೂರ್, ನೆಹರು ಮುಂತಾದವರ ಮೂರ್ತಿಶಿಲ್ಪಗಳು ಮುಖ್ಯವಾಗಿದ್ದು, ಲಂಡನ್ನಿನ ಸಾರ್ವಜನಿಕ ಕಟ್ಟಡಗಳಲ್ಲಿ ಹದಿನೆಂಟು ಶಿಲ್ಪಗಳನ್ನು ರಚಿಸಿದ್ದು, ಅವನ ಆಳವಾದ ತಿಳಿವಳಿಕೆಯಿಂದ ಕೂಡಿದ ಶಿಲ್ಪಗಳಾಗಿವೆ. 1959ರಲ್ಲಿ ನಿಧನ ಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎಲ್‌ಗ್ರೆಕೋ

ಗ್ರೀಸ್ ದೇಶದ ಎಲ್‌ಗ್ರೆಕೋ 1541ರಲ್ಲಿ ಕ್ರೀಟ್‌ನಲ್ಲಿ ಜನಿಸಿದ. ಕ್ರೈಸ್ತ ಮಠದಲ್ಲಿ ವಿದ್ಯಾಭ್ಯಾಸ ಪಡೆಯುತ್ತಿದ್ದಾಗ, ಅಲ್ಲೇ ಕೆಲವು ಚಿತ್ರಗಳನ್ನು ರಚಿಸಿದ. ಅವನ ಕಲೆಯ ಮೇಲೆ ಬೈಜಾಂಟೈನ್ ಶೈಲಿಯ ವಿಗ್ರಹಗಳು ಪ್ರಭಾವ ಬೀರಿವೆ. ಅವನು ಧಾರ್ಮಿಕ ಶ್ರದ್ಧೆಯುಳ್ಳವನಾಗಿದ್ದು, ಇದು ಅವನ ಚಿತ್ರಗಳಲ್ಲೂ ಮೂಡಿವೆ. ಅವನಿಂದ ಚಿತ್ರಿತವಾಗಿರುವ ಚಿತ್ರಗಳು ವಿಕೃತಗೊಳಿಸುವ ನೀಳವಾದ ಆಕಾರಗಳು. ಇವುಗಳಲ್ಲಿ ಒಂದು ಬಗೆಯ ಪರವಶತೆ ಮತ್ತು ಮನಸ್ಸು ಕದಡುವ ಕನಸು ಕಂಡಂತೆ ಕಾಣುವ ಮುಖಭಾವಗಳು ಪ್ರಾರಂಭದಲ್ಲಿ ಸೌಮ್ಯವಾದ ವರ್ಣಗಳನ್ನು ಬಳಸಿ ಚಿತ್ರ ರಚಿಸಿದ. ಅನಂತರ ಪ್ರತಿಯೊಂದು ಬಣ್ಣ ಉಪಯೋಗಿಸುವಾಗಲೂ ಬಿಳಿಯಿಂದ ಹಿಡಿದು ಆ ಬಣ್ಣದ ಅತ್ಯಂತ ಕಡು ಛಾಯೆಯವರೆಗೆ ಅನೇಕ ಛಾಯೆಗಳನ್ನು ಬಳಸಿದ. ಇದರಿಂದ ಚಿತ್ರ ಕ್ರಮಕ್ರಮವಾಗಿ ವಿಕಾಸವಾಗುತ್ತಿರುವಂತೆ ಕಾಣುತ್ತದೆ. ಬಣ್ಣ, ಬೆಳಕು ಹಾಗೂ ರೇಖೆಗಳನ್ನು ತನ್ನದೇ ಆದ ರೀತಿಯಲ್ಲಿ ಉಪಯೋಗಿಸಿ, ತನ್ನ ಚಿತ್ರಗಳಲ್ಲಿ ವಿಶೇಷ ಪರಿಣಾಮಗಳನ್ನು ಸಾಧಿಸಿದ್ದಾನೆ. 1614ರಲ್ಲಿ ನಿಧನಹೊಂದಿದ.

ಒರಸ್ಕೋ ಜೋಸ್ ಕ್ಲೆಮೆಂಟ್

ಒರಸ್ಕೋ 1883ರಲ್ಲಿ ಜನಿಸಿದ್ದು, ಮೆಕ್ಸಿಕೋ ಚಿತ್ರಕಲಾವಿದ ಮತ್ತು ವಾಸ್ತು ಶಿಲ್ಪದಲ್ಲಿ ಶಿಕ್ಷಣ ಪಡೆದಿದ್ದ. ಆದರೆ 1909ರಲ್ಲಿ ಚಿತ್ರಕಲಾವಿನಾಗಿ, 1916ರಲ್ಲಿ ಮೆಕ್ಸಿಕೋ ಕ್ರಾಂತಿಯ ಬಗ್ಗೆ ಜಲವರ್ಣ ಚಿತ್ರಗಳನ್ನು ರಚಿಸಿದ್ದಾನೆ. ಅನಂತರ ಪ್ರಮುಖನಾದ ಭಿತ್ತಿಚಿತ್ರ ಕಲಾವಿದನಾಗಿ, ಮೆಕ್ಸಿಕೋ ಮತ್ತು ಅಮೆರಿಕಾಗಳಲ್ಲಿ ಅನೇಕ ಭಿತ್ತಿಚಿತ್ರಗಳನ್ನು ರಚಿಸಿದ್ದಾನೆ. ಅವು ಸಾಮಾನ್ಯವಾಗಿ ಸಾಮಾಜಿಕ ವಾಸ್ತವವಾದದ ಚಿತ್ರಗಳಾಗಿದ್ದು, ಅಲಂಕಾರಯುತವಾಗಿ, ಲಯಬದ್ಧವಾಗಿವೆ.

ಕ್ಲಾಡಾ ಮೊನೆ

ಕ್ಲಾಡಾಮೊನೆ ಪ್ಯಾರಿಸಿನಲ್ಲಿ 1840ರಲ್ಲಿ ಜನಿಸಿದ. ಚಿಕ್ಕ ವಯಸ್ಸಿನಲ್ಲೇ ಕಂಡ ವ್ಯಕ್ತಿಗಳ ಚಿತ್ರ ಮೊನೆ ಬರೆಯುತ್ತಿದ್ದು, ಪ್ಯಾರಿಸಿನಲ್ಲಿ ಕಲಾಶಿಕ್ಷಣ ಪಡೆದು, ಒಂದು ವಾತಾವರಣ ಇರುವವರೆಗೂ ತನ್ನ ಚಿತ್ರವನ್ನು ಮುಂದುವರೆಸುತ್ತಿದ್ದು, ಚಿತ್ರದಲ್ಲಿ ಸೂರ್ಯನ ಬೆಳಕು ಬದಲಾಗದೆಯಿರುವವರೆಗೆ ಚಿತ್ರ ರಚಿಸುತ್ತಿದ್ದ. ಸೂರ್ಯನ ಬೆಳಕು ಒಂದು ಪದಾರ್ಥದ ಮೇಲೆ ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾನದವರೆಗೆ ಬೇರೆ ಬೇರೆ ರೀತಿಯಲ್ಲಿ ಕಾಣುತ್ತದೆ, ಪರಿಣಾಮ ಬೀರುತ್ತದೆ ಎಂಬು ದನ್ನು ತನ್ನ ಅನೇಕ ಚಿತ್ರಗಳಲ್ಲಿ ಚಿತ್ರಿಸಿದ. ಬೇರೆ ಯಾವುದೇ ಕಲಾವಿದ ಈ ರೀತಿ ಚಿತ್ರಿಸಿಲ್ಲ. ಅವನು ಸಮಷ್ಟಿ ಪರಿಣಾಮವಾದಿ ಕಲಾವಿದರಲ್ಲಿ ಪ್ರಮುಖ. ಎದುರಿಗೆ ಕಾಣುವ ವಸ್ತುವನ್ನು ಯಥಾವತ್ತಾಗಿ ಚಿತ್ರಿಸಿ, ವರ್ಣಗಳನ್ನು ಬೆರಕೆ ಮಾಡದೆ ಅವು ಗಳನ್ನು ಒಂದರ ಪಕ್ಕ ಒಂದನ್ನು ಬಳಸಿ, ಬೆಳಕಿನ ಪರಿಣಾಮಗಳನ್ನು ಸೂಚಿಸಿ, ಒಂದೊಂದು ವರ್ಣ ಒಂದೊಂದು ಕಿರಣದ ಸೂಚಕವಾಗಿ ಚಿತ್ರಿಸಿದ್ದಾನೆ. 1926ರಲ್ಲಿ ನಿಧನನಾದ,

ಕ್ಯಾಡರ್ ಅಲೆಕ್ಸ್ಯಾಂಡರ್

ಬ್ರಿಟನ್ನಿನ ಶಿಲ್ಪಕಲಾವಿದನಾದ ಕ್ಯಾಡರ್ 1898ರಲ್ಲಿ ಜನಿಸಿದ. ಅವನು ಮೂಲತಃ ಎಂಜನಿಯರ್. 1930ರಲ್ಲಿ ಪ್ಯಾರಿಸಿನಲ್ಲಿ ಮಾಂಡ್ರಿಯಾನ್ ಮತ್ತು ಮಿರೋವಿನ ಚಿತ್ರಗಳಿಂದ ಪ್ರಭಾವಿತನಾಗಿ, ತಂತಿಯ ಶಿಲ್ಪದಲ್ಲಿ ಹೊಸ ಶೈಲಿಯನ್ನು ಸೃಷ್ಟಿಸಿದ. ಅಲ್ಲದೆ ತನ್ನ ಶಿಲ್ಪಗಳಲ್ಲಿ ಹೊಸ ಚಿಂತನೆ ಮತ್ತು ಸಂಚಲನವನ್ನು ನೀಡಿ ಒಂದು ನೆಲೆ ಕಂಡುಕೊಂಡ. ಈ ತರಹದ ಶಿಲ್ಪಗಳಲ್ಲಿ ಅತಿ ಕಷ್ಟಕರವಾದ ಮತ್ತು ಸೂಕ್ಷ್ಮವಾಗಿ ಲೋಹದ ತಟ್ಟೆಗಳ ಲಯಬದ್ಧವಾದ ರಚನಾಕ್ರಮದಿಂದ ಕಂಬಿ, ತಂತಿ, ಮುಂತಾದುವುಗಳನ್ನು ಕ್ರಿಯಾಶೀಲವನ್ನಾಗಿ ಮಾಡಿ, ಯಾವುದಾದರೂ ಗಾಳಿಯು ಸೆಳೆತಯಿರುವಂತೆ ರಚಿಸಿದ್ದಾನೆ. ಅವನು 1976ರಲ್ಲಿ ನಿಧನನಾದ.

ಕಾನ್‌ಸ್ಟೇಬಲ್ ಜಾನ್

ಕಾನ್‌ಸ್ಟೇಬಲ್ 1776ರಲ್ಲಿ ಇಂಗ್ಲೆಂಡಿನ ಬರ್ಗ್‌ಹಾಟ್‌ನಲ್ಲಿ ಜನಿಸಿದ್ದು ಅವನು ಪ್ರಕೃತಿ ಚಿತ್ರಕಲಾವಿದ. ರಾಯಲ್ ಕಾಲೇಜಿನಲ್ಲಿ ಶಿಕ್ಷಣ ಪಡೆದ. ಆಗಲೇ ಪ್ರಕೃತಿಚಿತ್ರ ಗಳಲ್ಲಿ ಆಸಕ್ತಿ ಬೆಳೆಯಿತು. ಪ್ರಕೃತಿಚಿತ್ರಗಳಲ್ಲಿ ಮೋಡಗಳನ್ನು ರಚಿಸುವುದರಲ್ಲಿ ವಿಶೇಷ ಪರಿಣತಿ ಪಡೆದಿದ್ದ. ರಾಯಲ್ ಅಕಾಡೆಮಿಯಲ್ಲಿ ಪ್ರತಿ ವರ್ಷವೂ ತನ್ನ ಪ್ರಕೃತಿ ಚಿತ್ರಗಳನ್ನು ಪ್ರದರ್ಶಿಸುತ್ತಿದ್ದಾಗ, ಅವನ ಚಿತ್ರಗಳಿಗೆ ಮನ್ನಣೆ ಸಿಕ್ಕಿತು. ಪ್ಯಾರಿಸಿಗೆ ತೆರಳಿ, ಅಲ್ಲಿನ ಚಿತ್ರಗಳಿಂದ ಪ್ರಭಾವಿತನಾದ. ಅನಂತರದ ಚಿತ್ರಗಳಲ್ಲಿ ಪ್ರಬಲವಾದ ವರ್ಣ ಸಂಯೋಜನೆ, ದೋಣಿಗಳು, ಬಂದರುಗಳ ಪ್ರಕೃತಿ ಚಿತ್ರಗಳನ್ನು ರಚಿಸುವುದರಲ್ಲಿ ಜಗತ್ತಿನಲ್ಲೇ ಮಹಾನ್ ಕಲಾವಿದ. 1937ರಲ್ಲಿ ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾರ್‌ಬೆಟ್ ಗುಸ್ಟಾವ್

ಕಾರ್‌ಬೆಟ್ ಗುಸ್ಟಾವ್ 1819ರಲ್ಲಿ ಜನಿಸಿದ್ದು, ಆವನ ಸಮಯದಲ್ಲಿ ಫ್ರೆಂಚ್ ವಾಸ್ತವಿಕ ಚಿತ್ರ ರಚಿಸುವುದರಲ್ಲಿ ಅತ್ಯಂತ ಪ್ರಮುಖ ಕಲಾವಿದ. ತನ್ನ ಕಲಾಶಿಕ್ಷಣವನ್ನು ಬಾಸ್ಟನ್ ಮತ್ತು ಪ್ಯಾರಿಸ್‌ಗಳಲ್ಲಿ ಶಿಕ್ಷಣ ಪಡೆದರೂ, ಸ್ವಂತಿಕೆಯಿಂದ ಕಲೆ ಕಲಿತಿದ್ದು ಹೆಚ್ಚು. ಆವನ ಮೊದಲ ಚಿತ್ರಗಳು ಪ್ಯಾರಿಸಿನ ಕಲಾವಿದರ ಸ್ಟುಡಿಯೋಗಳು ಮತ್ತು ಆವನ ಹಳ್ಳಿಯ ಪರಿಸರ, ಸಮುದ್ರ, ಪ್ರಕೃತಿ, ಪುಷ್ಪಗಳು, ಪ್ರಾಣಿಗಳು, ನಗ್ನ ಚಿತ್ರಗಳನ್ನು ರಚಿಸಿದ್ದಾನೆ. ಆವನು 1877ರಲ್ಲಿ ನಿಧನನಾದ.

ಕಾಸಟ್ಟ ಮೇರಿ

ಇಂಗ್ಲೆಂಡಿನಲ್ಲಿ 1844ರಲ್ಲಿ ಜನಿಸಿದ ಈಕೆ, ಫ್ರೆಂಚ್ ಇಂಪ್ರಷನಿಸ್ಟ್ ಸ್ಕೂಲಿನವಳು. ಪ್ಯಾರಿಸಿನಲ್ಲಿ ಕಲಾಶಿಕ್ಷಣ ಪಡೆದು, ಅಲ್ಲೇ ನೆಲೆಸಿ ಕಲಾವಿದ ಡಿಗಾಸ್‌ನ ಶಿಷ್ಯೆಯಾಗಿದ್ದಳು. ಆವಳು ರಚಿಸಿರುವ ಉತ್ತಮ ಕೃತಿಗಳಿಂದರೇ ತಾಯಿ ಮತ್ತು ಮಗು ಮತ್ತು ದಿನನಿತ್ಯದ ಜೀವನದಿಂದ ಆಯ್ದು ರಚಿಸಿದ ಡ್ರೈಪಾಯಿಂಟ್ ಮತ್ತು ಆಕ್ವಾಟಿಂಟ್ ಗ್ರಾಫಿಕ್ ಕೃತಿಗಳು ಮನ್ನಣೆ ಪಡೆದಿವೆ. ಅಲ್ಲದೆ ಜಪಾನಿ ಕಲೆಯ ಪ್ರಭಾವದಿಂದ ರಚಿಸಿರುವ ವರ್ಣಗಳ ಪ್ರಿಂಟ್‌ನ ಚಿತ್ರಗಳು ಉತ್ಕೃಷ್ಟವಾದ ಚಿತ್ರಗಳಾಗಿವೆ. ಆವಳು 1926ರಲ್ಲಿ ನಿಧನಳಾದಳು,

ಕಿತಾಜ್ ಆರ್. ಬಿ.

ಕಿತಾಜ್ ಇಂಗ್ಲೆಂಡಿನ ಕಲಾವಿದನಾದ ಆವನು 1932ರಲ್ಲಿ ಹುಟ್ಟಿದನು. ತನ್ನ ಕಲಾಶಿಕ್ಷಣವನ್ನು ವಿಯನ್ನಾ ಆಕಾಡೆಮಿಯಲ್ಲಿ ಮತ್ತು ಆಕ್ಸ್‌ಫರ್ಡ್ ರಸ್ಕಿನ್ ಸ್ಕೂಲ್ ಆಫ್ ಡ್ರಾಯಿಂಗ್ ಆಂಡ್ ಫೈನ್ ಆರ್ಟ್ಸ್‌ನಲ್ಲಿ ಹಾಗೂ ರಾಯಲ್ ಕಾಲೇಜ್ ಆಫ್ ಆಕಾಡೆಮಿಯಲ್ಲಿ ಪಡೆದನು. ಕಲಾವಿದ ಡೇವಿಡ್ ಹಾಕ್ನಿಯನ್ನು ಭೇಟಿಯಾಗಿ, ಆವರಿಬ್ಬರೂ ಉತ್ತಮ ಗೆಳೆಯರಾಗಿ, ಇಬ್ಬರೂ ಕಲೆಯಲ್ಲಿ ಪ್ರಭಾವಿತರಾದರು. ಕಿತಾಜ್‌ನ ಮನುಷ್ಯಾಕೃತಿಗಳು ಮತ್ತು ಸಮೃದ್ಧವಾದ ಸಾಹಿತ್ಯಿಕ ವಿಷಯಗಳು ಮತ್ತು ಬುದ್ಧಿಜೀವಿಗಳ ಸಂಬಂಧದಿಂದ, ಚಿತ್ರಕಲೆಗೆ ಹೊಸ ವಿಷಯಗಳತ್ತ ಗಮನ ಹರಿಸಿದನು. ಮನುಷ್ಯಾಕೃತಿ ಮತ್ತು ಪ್ರಕೃತಿ ಚಿತ್ರಗಳನ್ನು ಸಂಯೋಜಿಸಿ ಹೊಸ ಅಭಿವ್ಯಕ್ತಿಗೆ ಕಾರಣಕರ್ತನಾಗಿದ್ದಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕುಲಕರ್ಣಿ ಕೆ. ಎಸ್.

ಬೆಳಗಾಂನಲ್ಲಿ 1916ರಲ್ಲಿ ಜನಿಸಿದ ಅವರು 1942ರಲ್ಲಿ ಮುಂಬಯಿನ ಸರ್ ಜೆ. ಜೆ. ಕಲಾಶಾಲೆಯಿಂದ ಡಿಪ್ಲೊಮೊ ಪಡೆದು, 1945ರಲ್ಲಿ ದೆಹಲಿಯ ಪಾಲಿಟೆಕ್ನಿಕ್‌ನ ಕಲಾ ವಿಭಾಗದಲ್ಲಿ ಸೇವೆ ಸಲ್ಲಿಸಿದರು. 1947ರಲ್ಲಿ ದೆಹಲಿಯಲ್ಲಿ ಶಿಲ್ಪಚಕ್ರ ಎಂಬ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿ ಮತ್ತು ತ್ರಿವೇಣಿ ಕಲಾ ಸಂಘವನ್ನು 1948ರಲ್ಲಿ ಸ್ಥಾಪಿಸಿದರು. ಅಮೆರಿಕಾ, ಜರ್ಮನಿ, ರಷ್ಯಾ, ಇಂಗ್ಲೆಂಡ್ - ಮುಂತಾದ ದೇಶಗಳಿಗೆ ಭೇಟಿಯಿತ್ತಿರುವ ಅವರು, ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕಲಾ ವಿಭಾಗದ ಮುಖ್ಯಸ್ಥರಾಗಿ 1972-78 ರವರೆಗೆ ಸೇವೆ ಸಲ್ಲಿಸಿ, ಅನಂತರ ಉತ್ತರ ಪ್ರದೇಶ ಲಲಿತಕಲಾ ಅಕಾಡಮಿಯ ಅಧ್ಯಕ್ಷರಾಗಿದ್ದರು. 1955. 62, 65ರಲ್ಲಿ ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ ಮತ್ತು 1982ರಲ್ಲಿ ಫೆಲೋ ಪಡೆದಿದ್ದಾರೆ. ಪ್ರಾರಂಭದ ಚಿತ್ರಗಳಲ್ಲಿ ಪಿಕಾಸೋವಿನ ಪ್ರಭಾವ ಅವರ ಚಿತ್ರಗಳಲ್ಲಿ ಕಾಣಬಹುದು. ಭಾವಚಿತ್ರ ರಚಿಸುವುದರಲ್ಲಿ ಸಿದ್ಧಿ ಪಡೆದಿರುವ ಅವರು, ಕೆಲವು ಶಿಲ್ಪಗಳನ್ನು ರಚಿಸಿದ್ದು, ಅವುಗಳಲ್ಲಿ ಅಭಿವ್ಯಕ್ತಿತನ ಕಾಣಬಹುದು. ಅವರು ಸಮಕಾಲೀನ ಸಮಾಜಕ್ಕೆ ಸ್ಪಂದಿಸಿ ತಮ್ಮ ಕಲ್ಪನೆಗಳನ್ನು ದೃಶ್ಯ ಮಾಧ್ಯಮದಲ್ಲಿ ವ್ಯಕ್ತಪಡಿಸಿದರು. ವರ್ಣ ಮತ್ತು ವೀರ್ಯವತ್ತಾದ ರೇಖೆಗಳು, ಸಾಂಕೇತಿಕತೆ, ಆಕಾರಗಳ ಸಂಯೋಜನೆ ವಿಶಿಷ್ಟವಾಗಿರುತ್ತದೆ.

ಕ್ಯಾಮಿಲೆ ಪಿಸಾರೋ

ಪಿಸಾರೋ ಫ್ರೆಂಚ್ ಚಿತ್ರಕಲಾವಿದನಾಗಿದ್ದು, 1830ರಲ್ಲಿ ಜನಿಸಿದ. ಇಂಪ್ರೆಷನಿಸ್ಟ್ ಕಲಾವಿದನಾದ ಅವನು ಪ್ರಕೃತಿಯನ್ನು ನೆರಳು ಬೆಳಕುಗಳು ಮತ್ತು ವರ್ಣ ವಿನ್ಯಾಸದ ಮಹತ್ವವನ್ನು ಅರಿತು, ಚಿತ್ರಗಳನ್ನು ರಚಿಸಿದ್ದಾನೆ. ಇಂಪ್ರೆಷನಿಸ್ಟ್ ತಂಡದಲ್ಲಿ ಬಹಳ ಮುಖ್ಯನಾದವನು ಹಾಗೂ ತನ್ನ ಪ್ರಕೃತಿಯ ಚಿತ್ರಗಳ ತಂತ್ರವನ್ನು ಬದಲಿಸುತ್ತಿದ್ದು, ಅವನ ಚಿತ್ರಗಳಿಂದ ಅನೇಕ ಕಲಾವಿದರು ಪ್ರಭಾವಿತರಾಗಿದ್ದಾರೆ. ಅವನು 1903ರಲ್ಲಿ ನಿಧನನಾದ.

ಕಾಸ್ಟಾನೋ ಆಂಡ್ರೆಡೆಲ್

ಕಾಸ್ಟಾನೋ ಆಂಡ್ರೆಡೆಲ್ 1423ರಲ್ಲಿ ಜನಿಸಿದ್ದು, ಫ್ಲಾರೆಂಟೈನಿನ ಚಿತ್ರಕಲಾವಿದ. ಅವನ ಚಿತ್ರಗಳಲ್ಲಿ ಶಿಲ್ಪಕಲೆಯ ಗುಣಗಳಿದ್ದು, ಭಾವಪರವಶತೆಯ ಸಾದೃಶ್ಯ ಕಾಣಬಹುದು. ಅವನು ರಚಿಸಿರುವ 'ಲಾಸ್ಟ್‌ಸಫರ್' ಉತ್ಕೃಷ್ಟ ಕೃತಿ ಹಾಗೂ ರೇಖಾ ಚಿತ್ರದಲ್ಲಿ ಪ್ರಭುತ್ವ ಪಡೆದಿದ್ದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕ್ಲಿಮ್ ಗುಸ್ತಾವ್

ಕ್ಲಿಮ್‌ಗುಸ್ತಾವ್ ಆಸ್ಟ್ರೇಲಿಯಾ ದೇಶದ ಕಲಾವಿದನಾಗಿದ್ದು, 1862ರಲ್ಲಿ ಹುಟ್ಟಿದ. ಚಿತ್ರಕಲೆ ಮತ್ತು ಡಿಸೈನರ್ ಆಗಿದ್ದು, ಸಂಕೇತವಾದಿಗಳ ಚಳವಳಿಯಲ್ಲಿ ಭಾಗಿಯಾಗಿದ್ದ. ತನ್ನ ಹೆಚ್ಚು ಸಮಯವನ್ನು ವಾಸ್ತುಶಿಲ್ಪ ಅಲಂಕರಣದಲ್ಲೇ ತೊಡಗಿದ್ದರೂ. ಆಸ್ಟ್ರೇಲಿಯಾ ದೇಶದಲ್ಲಿ ಅಲಂಕರಣ ಕಲೆಗೆ ಸ್ಫೂರ್ತಿಯಾಗಿದ್ದ. ಅವನ ಚಿತ್ರಗಳು ರೂಪಕ ಕಥಾಚಿತ್ರಗಳು ಮತ್ತು ಸಮೃದ್ಧ ವರ್ಣ ಸಂಯೋಜನೆ ಹೊಂದಿದ್ದವು.

ಕ್ಲೆಲಿನಿ ಪ್ರಾಂಜ್

ಪ್ರಾಂಜ್ 1910ರಲ್ಲಿ ಜನಿಸಿದ್ದು, ಅಮೂರ್ತ ಅಭಿವ್ಯಕ್ತಿ ಕಲಾವಿದ. ಅವನ ಚಿತ್ರಗಳಲ್ಲಿ ಆಶ್ಚರ್ಯಕರವಾದ ಕಪ್ಪು ಬಿಳುಪಿನ ಸಂಯೋಜನಾ ಚಿತ್ರಗಳು ಪ್ರಬಲವಾಗಿ ನಿರೂಪಿತವಾಗಿವೆ. ಕೆಲವೊಮ್ಮೆ ಮಾತ್ರ ವರ್ಣಗಳನ್ನು ಉಪಯೋಗಿಸಿದ್ದಾನೆ.

ಕೃಷ್ಣಾರೆಡ್ಡಿ

ಕೃಷ್ಣಾರೆಡ್ಡಿ 1925ರಲ್ಲಿ ಆಂಧ್ರಪ್ರದೇಶದ ಚಿತ್ತೂರಿನಲ್ಲಿ ಜನಿಸಿದರು, 1946ರಲ್ಲಿ ಶಾಂತಿನಿಕೇತನದಲ್ಲಿ ಕಲೆಯಲ್ಲಿ ಡಿಪ್ಲೊಮೊ ಮತ್ತು 1952ರಲ್ಲಿ ಲಂಡನ್ನಿನ ಸ್ಲೆಡ್ ಸ್ಕೂಲ್ ಆಫ್ ಆರ್ಟ್, 1952 ಓ. ಜಡಕೀನ್ ಅವರ ಬಳಿ ಶಿಲ್ಪಕಲೆ 1952-55ರವರೆಗೆ ಮುರಿನೋ ಮುರಿನ ಅವರ ಬಳಿ ಶಿಲ್ಪಕಲೆ ಮತ್ತು 1956-57ರಲ್ಲಿ ಎನ್‌ಗ್ರೇವಿಂಗ್‌ನ್ನು ಪ್ಯಾರಿಸಿನ ಎಸ್. ಡಬ್ಲ್ಯು. ಹೈಯರ್ ಬಳಿ ಶಿಕ್ಷಣ ಪಡೆದಿದ್ದಾರೆ. ಗ್ರಾಫಿಕ್ ಮತ್ತು ಶಿಲ್ಪಕಲಾ ಮಾಧ್ಯಮಗಳೆರಡರಲ್ಲೂ ಕೆಲಸ ಮಾಡಿದ್ದರೂ, ಗ್ರಾಫಿಕ್ ಮಾಧ್ಯಮದಲ್ಲಿ ಅವರು ಹೆಸರು ಪಡೆದಿರುವ ಕಲಾವಿದ. ಕೃಷ್ಣಾರೆಡ್ಡಿ ಅವರ ಎಚಿಂಗ್ ಮತ್ತು ಎನ್‌ಗ್ರೇವಿಂಗ್‌ಗಳಲ್ಲಿ ಹೆಚ್ಚು ಪ್ರಭುತ್ವವನ್ನು ಪಡೆದಿದ್ದು, ಈ ಕೃತಿಗಳಲ್ಲಿನ ಆಕಾರಗಳು ಉಬ್ಬಚ್ಚು ಮಾಡಿದಂತಿರುವ ರೇಖೆಗಳಂತಿದ್ದು, ವರ್ಣ ವೈವಿಧ್ಯದಿಂದ ವ್ಯಾಪಿಸಿಕೊಂಡಿದ್ದು, ಸೂಕ್ಷ್ಮವಾಗಿ ಮತ್ತು ಸ್ಪಷ್ಟವಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೃಷ್ಣಾರೆಡ್ಡಿ

ಆಕಾರಗಳೇನೂ ನಮಗೆ ಗೂಢವಾಗಿರದೆ ಅವು ಸಾರ್ವತ್ರಿಕವಾದುವುಗಳಾಗಿವೆ. ಮನುಷ್ಯಾಕೃತಿಯ ಶಿಲ್ಪಗಳು ಹೆಚ್ಚು ಘನತ್ವದಿಂದಿದ್ದು, ಕೆಲವು ಅಮೂರ್ತ ರೂಪದಲ್ಲಿದ್ದು, ಅಭಿವ್ಯಕ್ತಿತನ ಪ್ರಧಾನವಾಗಿವೆ.

ಕೃಷನ್ ಖನ್ನಾ

ಕೃಷನ್ ಖನ್ನಾ 1925ರಲ್ಲಿ ಹುಟ್ಟಿದ್ದು, ಬಾಲ್ಯದಿಂದಲೇ ಕಲೆಯಲ್ಲಿ ಆಸಕ್ತಿ ಬೆಳೆದು, 1938ರಲ್ಲಿ ರೆಡ್‌ಯಾರ್ಡ್ ಕ್ಲೇಪಿಂಗ್ ಶಿಷ್ಯವೇತನದಿಂದ ಇಂಪೀರಿಯಲ್ ಸರ್ವಿಸ್ ಕಾಲೇಜ್, ವಿನ್ಸರ್, ಇಂಗ್ಲೆಂಡಿನಲ್ಲಿ 1938ರಲ್ಲಿ ಪದವಿ ಪಡೆದರು. ಇವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೊದಲ ಚಿತ್ರಗಳು ಭಾವಗೀತೆಯ ಶೈಲಿಯಲ್ಲಿದ್ದು, ಚಿತ್ರದ ಮನುಷ್ಯಕೃತಿಗಳ ಸರಳತೆಯಿಂದ ಮತ್ತು ಜಾನಪದ ಶೈಲಿಯಿಂದ ಕೂಡಿತ್ತು ಮತ್ತು ಬೆಳಕು ನೆರಳುಗಳ ವೈಪರೀತ್ಯ ಅನುಕ್ರಮವಾಗಿ ಪರಿವರ್ತನೆ ಹೊಂದಿತ್ತು. ಚಾಕುವಿನ್ನ ಮತ್ತು ಕುಂಚದ ಉದ್ದೇಶ ಕಾಣಬಹುದಿತ್ತು. ಅನಂತರ ಬೈಬಲ್ಲಿನ ವಿಷಯಗಳಿಗೆ ಸಂಬಂಧಿಸಿದ ವಿಷಯಗಳ ಆಧಾರ ಮೇಲೆ ಚಿತ್ರಿಸಿದ ಚಿತ್ರಗಳಲ್ಲಿ ಒಂದು ಘೋಷಣೆ ಮುಖ್ಯ. ಸಾಮಾಜಿಕ, ರಾಜಕೀಯ ಧೋರಣೆಯ ಚಿತ್ರಗಳ ಮಾಲಿಕೆಗಳಲ್ಲಿ ಕಣ್ಣಿಗೆ ಕಟ್ಟುವಂತ ತಮ್ಮ ಪರಿಸರದ ಅನುಭವಗಳನ್ನು ಮತ್ತು ವ್ಯವಸ್ಥೆಯ ವಿರುದ್ಧ, ಸರ್ವಾಧಿಕಾರ, ಯುದ್ಧ, ಬಡತನ, ಪ್ರತಿಕ್ರಿಯೆಯಾಗಿ ಚಿತ್ರದಲ್ಲಿ ಮೂಡಿಸಿದ್ದಾರೆ. ಅವರ ಚಿತ್ರದ ಸಂಯೋಜನೆಗಳು ಸಾಮಾಜಿಕ ವ್ಯಾಖ್ಯಾನಗಳು, ಸಂಯೋಜನೆಯ ಮಾಧ್ಯಮ ಮತ್ತು ಒರಟಾದ, ಗಟ್ಟಿಮುಟ್ಟಾದ ಆಕಾರಗಳಿಂದ ಕೂಡಿದ್ದು, ಶ್ರೇಷ್ಠ ಕಲಾಕೃತಿಗಳಾಗಿವೆ.

ತಂತ್ರ ಮತ್ತು ನೇರವಾಗಿ ರೇಖೆಗಳನ್ನು ಆಕ್ವಾಟಿಂಟ್ ಮೂಲಕ ಪ್ರಕೃತಿಯೊಡನೆ ಮಿಥುನಕ್ಕೆ ಸಂಬಂಧಿಸಿದ್ದು, ನಿಖರವಾದ ರೇಖೆಗಳು, ಭ್ರಮೆ ಹುಟ್ಟಿಸುವ ಆಕಾರಗಳಿಂದ ಅನೇಕ ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾರೆ.

ಕ್ಷಿತೀಂದ್ರನಾಥ ಮಜುಂದಾರ್

ಕ್ಷಿತೀಂದ್ರನಾಥರು 1891ರಲ್ಲಿ ಜನಿಸಿದ್ದು, ಅಬನೀಂದ್ರನಾಥ ಟಾಗೂರರ ಶಿಷ್ಯರು. ಅವರು ಹಳ್ಳಿಯ ವಾತಾವರಣದಲ್ಲಿ ಬೆಳೆದರು ಮತ್ತು ಹಳ್ಳಿಯ ಜಾತ್ರಾ ನಾಟಕಗಳು, ದೇಶಭಕ್ತಿಯ ಕೀರ್ತನೆಗಳು ಇವರ ಮೇಲೆ ಪ್ರಭಾವ ಬೀರಿದವು. ಇವರು ಹಿಂದೂ ಧರ್ಮ ಹಾಗೂ ಧರ್ಮನಿಷ್ಠೆಯ ಚಿತ್ರಗಳನ್ನು ರಚಿಸಿದ್ದು, ಅವುಗಳಲ್ಲಿ ಭಾವೋದ್ರೇಕವನ್ನು ಕಾಣಬಹುದು. ಅವುಗಳನ್ನು ವಾಶ್ ಮಾಧ್ಯಮದಲ್ಲಿ ರಚಿಸಿದ್ದು, ವೀರ್ಯವತ್ತಾದ ರೇಖೆಗಳು, ಲಯ ಹಾಗೂ ವರ್ಣಗಳಲ್ಲಿ ನೆರಳು ಬೆಳಕುಗಳ ಪ್ರಭಾವ, ಮನುಷ್ಯಾಕೃತಿಗಳು ಮತ್ತು ಆಕೃತಿಗಳಲ್ಲಿ ಸೂಕ್ಷ್ಮತೆ ಬಂಗಾಳ ಸಂತ ಚೈತನ್ಯರ ಬಗ್ಗೆ ಅನೇಕ ಚಿತ್ರಗಳನ್ನೂ ರಚಿಸಿದ್ದು, ವಿಶೇಷ ಲಕ್ಷಣವಾದ ಶೈಲಿಯಿಂದ ಕೂಡಿವೆ.

ಕ್ರೋಮ್ ಜಾನ್

ಕ್ರೋಮ್ ಜಾನ್ 1768ರಲ್ಲಿ ನಾರ್‌ವಿಚ್‌ನಲ್ಲಿ ಜನಿಸಿದ್ದು, ಇಂಗ್ಲಿಷ್ ಚಿತ್ರ ಕಲಾವಿದ. ತೈಲವರ್ಣ ಮತ್ತು ಜಲವರ್ಣ ಮಾಧ್ಯಮದಲ್ಲಿ ಅನೇಕ ಪ್ರಕೃತಿ ಚಿತ್ರಗಳನ್ನು ರಚಿಸಿದ್ದಾನೆ. ನಾರ್‌ವಿಚ್ ಸೊಸೈಟಿಯ ಸಂಸ್ಥಾಪಕನಾಗಿದ್ದು, ಅವನ ಮೇಲೆ ಡಚ್ ಪ್ರಕೃತಿ ಚಿತ್ರಗಳು ಪ್ರಭಾವ ಬೀರಿ, ಉಜ್ವಲ ವರ್ಣಗಳು, ಭಾವಪೂರ್ಣ ಚಿತ್ರ ಸಂಯೋಜನೆಗಳನ್ನು ರಚಿಸಿದ್ದಾನೆ. ಅವನು 1821ರಲ್ಲಿ ಮರಣಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಗೇಂದ್ರನಾಥ ಠಾಕೂರ್

ಠಾಗೂರ್ ಕುಟುಂಬಕ್ಕೆ ಸೇರಿದ ಗಗೇಂದ್ರರು, 1867ರಲ್ಲಿ ಜನಿಸಿದರು. ಅಬನೀಂದ್ರರ ಸೋದರರಾದ ಅವರಿಗೆ, ಮನೆಯಲ್ಲಿದ್ದ ಕಲಾ ವಾತಾವರಣವೇ ಕಲೆಗೆ ಸ್ಫೂರ್ತಿ. ಅವರು ತಮ್ಮ ಸ್ವಂತ ಆತ್ಮಸಂತೋಷಕ್ಕಾಗಿ ಚಿತ್ರಗಳನ್ನು ರಚಿಸಿದರು. ಗಗೇಂದ್ರರು ಭಾವನಾಪೂರ್ಣವಾದ ಮತ್ತು ಕಥೆಗಳು, ಸ್ಕೆಚ್‌ಗಳು, ಭಾವಚಿತ್ರ, ವ್ಯಂಗ್ಯಚಿತ್ರ ಮತ್ತು ಪ್ರಕೃತಿಚಿತ್ರ, ಅಮೂರ್ತ ಹಾಗೂ ಕ್ಯೂಬಿಸ್ಟ್ ಶೈಲಿಯ ಚಿತ್ರ ಗಳನ್ನು ರಚಿಸಿದ್ದಾರೆ. ಆ ವೇಳೆಯಲ್ಲಿ ಕಪ್ಪು ಮತ್ತು ಬಿಳುಪು ವರ್ಣಗಳಿಂದ ಚಿತ್ರ ಗಳನ್ನು ಅವರೊಬ್ಬರೇ ರಚಿಸಿರುವುದು. ಅಲ್ಲದೆ ಭಾರತದಲ್ಲಿ ಕ್ಯೂಬಿಸ್ಟ್ ಶೈಲಿಯ ಚಿತ್ರಗಳನ್ನು ರಚಿಸಿರುವುದು ಅವರೊಬ್ಬರೆ.

ಗಣೇಶ್ ಪೈನೆ

ಗಣೇಶ್ ಪೈನೆ 1937ರಲ್ಲಿ ಕಲ್ಕತ್ತದಲ್ಲಿ ಹುಟ್ಟಿದ್ದು, ತಮ್ಮ ಕಲಾಭ್ಯಾಸವನ್ನು ಸರ್ಕಾರಿ ಕಲಾಶಾಲೆಯಿಂದ 1959ರಲ್ಲಿ ಪಡೆದರು. ತಮ್ಮ ಚಿತ್ರಮಾಧ್ಯಮಕ್ಕೆ ವಿವಿಧ ಮಾಧ್ಯಮಗಳಲ್ಲಿ ಪ್ರಯೋಗ ನಡೆಸಿ, ಟೆಂಪರಾ ತಂತ್ರವೊಂದೇ ತಮ್ಮ ಅಭಿವ್ಯಕ್ತಿ ಮಾಧ್ಯಮಕ್ಕೆ, ಸೂಕ್ತವಾದುದೆಂದು 1967ರಲ್ಲಿ ಕಂಡುಕೊಂಡರು. ಚಿತ್ರಗಳು ಗಾತ್ರ ದಲ್ಲಿ ಚಿಕ್ಕವಾಗಿದ್ದು, ಚಿತ್ರದ ಅವಕಾಶದಲ್ಲಿ ಕಪ್ಪನೆಯ ಚಿತ್ರಾತ್ಮಕವನ್ನು ಸೃಜಿಸಿ, ಚಿತ್ರಗಳು ತೇಲುತ್ತಿರುವ ಭ್ರಮೆಯುಂಟುಮಾಡಿ, ಗೂಢಾರ್ಥವನ್ನುಂಟುಮಾಡುತ್ತದೆ. ಇವು ಅವರ ವೈಯುಕ್ತಿಕವಾದ ಕಲ್ಪನೆಗಳು, ಗೊಂಬೆಗಳ ಆಕಾರದಲ್ಲಿದ್ದು, ಊಹಾತೀತ ವಾಗಿರುತ್ತವೆ ಹಾಗೂ ತಾಂತ್ರಿಕ ಸಿದ್ಧಿಯಲ್ಲಿ ಪ್ರಭುತ್ವವನ್ನು ಪಡೆದಿದ್ದಾರೆ.

ಗಾಯತೊಂಡೆ ವಿ. ಎಸ್.

ಗಾಯತೊಂಡೆ 1924ರಲ್ಲಿ ಮುಂಬಯಿನಲ್ಲಿ ಹುಟ್ಟಿದ್ದು, ಸರ್ ಜೆ. ಜೆ. ಕಲಾ ಶಾಲೆಯಿಂದ ಡಿಪ್ಲೊಮೊ ಪಡೆದು, ಅಲ್ಲೇ ಸ್ವಲ್ಪಕಾಲ ಉಪನ್ಯಾಸಕರಾಗಿದ್ದರು. ಮುಂಬಯಿನ ಪ್ರೊಗ್ರೆಸೀವ್ ಆರ್ಟಿಸ್ಟ್ ಗ್ರೂಪ್‌ನ ಸಂಸ್ಥಾಪಕ ಸದಸ್ಯರಾಗಿದ್ದು, ಅನೇಕ ಕಲಾಪ್ರದರ್ಶನಗಳನ್ನು ರಾಷ್ಟ್ರ ಮತ್ತು ವಿದೇಶಗಳಲ್ಲಿ ನಡೆಸಿದ್ದಾರೆ. ಅವರ ಚಿತ್ರಗಳಲ್ಲಿ ವರ್ಣವೇ ಆಕಾರವಾಗಿದ್ದು, ಇನ್ನೊಂದು ಕಡೆ ಕ್ಯಾನವಾಸ್ ಒಂದು ಆಕಾರ ವಾಗಿರುತ್ತದೆ. ಮನಸ್ಸಿನ ಭಾವನೆಗಳನ್ನು ವರ್ಣಗಳ ಮೂಲಕ ಪ್ರತಿಫಲಿಸಿ, ಅವುಗಳ ಸಾಮರಸ್ಯದಿಂದ ಒಂದು ಭಾವನೆ ಬರುವಂತೆ ಮತ್ತು ಅವುಗಳು ಒಂದು ರೀತಿಯ ನಿಶ್ಯಬ್ದತೆಯಿಂದ ನೋಡುಗನನ್ನು ಚಿತ್ರದಲ್ಲಿ ಲೀನವಾಗಿ, ಅದರೊಡನೆ ಗ್ರಹಿಸುವಂತೆ ಮಾಡುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಾಂಟ್‌ವುಡ್

ಅಮೆರಿಕಾದ ಚಿತ್ರಕಲಾವಿದನಾದ ಗ್ರಾಂಟ್‌ವುಡ್ ಲೌವ ಪ್ರಾಂತ್ಯದಲ್ಲಿ 1892ರಲ್ಲಿ ಹುಟ್ಟಿದ. 1920ರಲ್ಲಿ ಯೂರೋಪಿಗೆ ಹೋದಾಗ, 15 ಮತ್ತು 16ನೇ ಶತಮಾನದ ಫ್ಲೆಮಿಕ್ ಮತ್ತು ಜರ್ಮನ್ ಚಿತ್ರಗಳು ; ಹೊಸ ಬಾಹ್ಯ ವಸ್ತುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವ ಚಳವಳಿ ಪ್ರಭಾವ ಬೀರಿ, ಹಳೆಯ ನೆನಪುಗಳಿಂದ ಕೂಡಿದ, ಒಂದು ರೀತಿಯ ವಿಡಂಬನೆ, ತಾಂತ್ರಿಕತೆ ಮತ್ತು ನಿಷ್ಕೃಷ್ಟತೆ, ಅವನ ಚಿತ್ರದ ವೈಶಿಷ್ಟ್ಯ. ಅಮೆರಿಕಾದ ಜಾನಪದ ಕಲೆಯ ಪ್ರಭಾವ ಅವನ ಚಿತ್ರಗಳ ಮೇಲೆ ಕಾಣಬಹುದು. ಅವನು 1924ರಲ್ಲಿ ತೀರಿಕೊಂಡ.

ಗುಲಾಮ್ ಮಹಮ್ಮದ್ ಷೇಕ್

1937ರಲ್ಲಿ ಸುರೇಂದ್ರನಗರದಲ್ಲಿ ಹುಟ್ಟಿದ ಷೇಕ್, ತಮ್ಮ ಕಲಾಶಿಕ್ಷಣವನ್ನು ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಿಂದ ಎಂ.ಎ. ಪದವಿ ಹಾಗೂ 66ರಲ್ಲಿ ಬ್ರಿಟಿಷ್ ಕೌನ್ಸಿಲ್‌ನ ಕಾಮನ್‌ವೆಲ್ತ್ ಶಿಷ್ಯವೇತನವನ್ನು ಪಡೆದಿದ್ದಾರೆ. ಚಿತ್ರ ಮತ್ತು ಆರ್ಟ್ ಹಿಸ್ಟರಿಗಳಲ್ಲಿ ಹೆಸರು ಪಡೆದಿರುವ ಷೇಕ್ ಅವರು ಪ್ಯಾರಿಸ್, ಟೋಕಿಯೋ, ಬಲ್ಗೇರಿಯಾ, ಬೆಲ್ಜಿಯಂ ಮತ್ತು ರಾಷ್ಟ್ರದ ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1962ರಲ್ಲಿ ಲಲಿತಕಲಾ ಆಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದು ; ಪ್ರಸ್ತುತ ಬರೋಡಾದ ಫೆಕಲ್ಟಿ ಆಫ್ ಆರ್ಟ್ಸ್‌ನಲ್ಲಿ ಚಿತ್ರಕಲಾ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರ ಅಭಿಪ್ರಾಯದಲ್ಲಿ ಪ್ರತಿಯೊಂದು ಚಿತ್ರವೂ ಆತ್ಮಚರಿತ್ರೆಯ ನಿರೂಪಣೆಯ ಒಂದು ಪ್ರಯತ್ನ ಹಾಗೂ ಪೂರ್ವಾನುಭವ, ಪರಿಸರದ ಸಂದರ್ಭವನ್ನು ಅಭಿವ್ಯಕ್ತಿಸಲು ಪ್ರೇರೇಪಿಸುತ್ತದೆ. ಅಲ್ಲದೆ ಅವರ ಚಿತ್ರಗಳು ಗತಕಾಲವನ್ನು ಪ್ರತಿಬಿಂಬಿಸುವಂತೆಯೇ ಪ್ರಸ್ತುತ ಕ್ಷಣದಲ್ಲಿ ನಮ್ಮನ್ನು ಏನಾಗಿದ್ದೇವೆ ಎಂಬುದನ್ನು ಪ್ರಕಟಿಸುತ್ತವೆ. ವರ್ಣಚಿತ್ರದ ಪ್ರತಿಯೊಂದು ಪ್ರಯತ್ನವೂ, ಅಪೇಕ್ಷಿತ ಬೇರುಗಳಿಗೆ ನಿರಂತರವಾಗಿ ಸಮಾಂತರದಲ್ಲಿರುವ ಆಸುವಂಶೀಯ ಬೇರುಗಳ ಮೂಲಕ ಮೂಲಕ್ಕೆ ನಮ್ಮನ್ನು ಕೊಂಡೊಯ್ಯುತ್ತವೆ. ವರ್ಣಚಿತ್ರವು ವಿಕಾಸವಾಗುತ್ತಿರುವಂತೆ, ಅದು ಎಲ್ಲ ಜೀವಂತ ಅನುಭವಗಳನ್ನು ಮರುರೂಪಿಸಲು ಒತ್ತಾಯಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗಿೀವ್ ಪಟೇಲ್

1940ರಲ್ಲಿ ಜನಿಸಿರುವ ಅವರು, ಸ್ವಂತವಾಗಿ ಚಿತ್ರಕಲೆ ಕಲಿತ್ತಿದ್ದು, 1976ರಲ್ಲಿ ಮೆಂಟಾನ್ ಬಿನಾಲೆಯಲ್ಲಿ ಕಲಾಕೃತಿಗಳು ಪ್ರದರ್ಶಿತವಾಗಿವೆ. ಆಲ್ಲದೆ ರಾಷ್ಟ್ರ ಮತ್ತು ವಿದೇಶಗಳಲ್ಲೂ ಕಲಾಕೃತಿಗಳು ಪ್ರದರ್ಶಿತವಾಗಿವೆ. ಅವರ ಮೊದಲ ಚಿತ್ರಗಳು ರಾಜ ಕೀಯ ಗಣ್ಯ ವ್ಯಕ್ತಿಗಳನ್ನು, ಅನಂತರದ ಚಿತ್ರಗಳಲ್ಲಿ ರೈಲ್ವೆ ನಿರ್ಮಾಣದ ಪ್ರಕೃತಿ ಚಿತ್ರ ಗಳು ಮತ್ತು ಅದರ ಪರಿಸರ, ನಗರಜೀವನದ ವಾತಾವರಣವನ್ನು ಕುರಿತು ತಮ್ಮ ಭಾವನೆಗಳನ್ನು ಅಭಿವ್ಯಕ್ತಪಡಿಸಿದ್ದಾರೆ.

ಗೈನ್ಸ್‌ಬರ್ಗ್ ಥಾಮಸ್

ಗೈನ್ಸ್‌ಬರ್ಗ್ 1729ರಲ್ಲಿ ಜನಿಸಿದ. ಅವನು ಇಂಗ್ಲೆಂಡ್ ದೇಶದವನು. ಪ್ರಕೃತಿಚಿತ್ರ ಮತ್ತು ಭಾವಚಿತ್ರ ಕಲಾವಿದ. ಲಂಡನ್ನಿನಲ್ಲಿ ಕಲಾಶಿಕ್ಷಣ ಪಡೆದು ಲಂಡನ್ನಿನಲ್ಲಿ ಪ್ರಮುಖ ಭಾವಚಿತ್ರ ಕಲಾವಿದನೆನಿಸಿ, ರಾಯಲ್ ಅಕಾಡೆಮಿಯ ಸ್ಥಾಪಕರಲ್ಲಿ ಒಬ್ಬನಾದ. ಅವನ ಆದರ್ಶದ ಪ್ರಕೃತಿಚಿತ್ರಗಳು 'ಫ್ಯಾನ್ಸಿಚಿತ್ರ'ಗಳೆನಿಸಿ, ಅಪೂರ್ವವಾದ ಬೆಳಕು ಮತ್ತು ಹಗುರವಾದ ಕುಂಚದ ಕೆಲಸ, ಭಾವಾತ್ಮಕ ಶೈಲಿ ಹಾಗೂ ದಟ್ಟವಾದ ವರ್ಣಸಂಯೋಜನೆಯ ಚಿತ್ರಗಳನ್ನು ರಚಿಸಿದ್ದಾನೆ.

ಗೋರ್ಕಿ ಅಸಿಲೆ

ಗೋರ್ಕಿ ಅಮೆರಿಕಾದ ಕಲಾವಿದನಾಗಿದ್ದು, 1904ರಲ್ಲಿ ಜನಿಸಿದ. ಅವನ ಮೊದಲ ಕೃತಿಗಳಲ್ಲಿ ಸಿಜನಿ ಮತ್ತು ಪಿಕಾಸೋವಿನ ಪ್ರಭಾವ ಕಾಣಬಹುದು. ಕುಟುಂಬಗಳಿಗೆ ಸಂಬಂಧಿಸಿದ ಭಾವಚಿತ್ರಗಳಲ್ಲಿ ವಾಸ್ತವಿಕತೆ ಹಾಗೂ ಅವನ ಸ್ವಂತಿಕೆ ಕಾಣಬಹುದು. ನಂತರದ ಚಿತ್ರಗಳಲ್ಲಿ ಕಲ್ಪನೆಗಳು ಚಪ್ಪಟೆಯಾಕೃತಿಯಲ್ಲಿದ್ದು, ಭ್ರಾಮಿಕತೆ ಹಾಗೂ ನಂತರದ ಚಿತ್ರಗಳು ಅಮೂರ್ತ ಅಭಿವ್ಯಕ್ತಿವಾದದ ಕೃತಿಗಳಾ ಗಿದ್ದು, ಈ ಪಂಥದ ಸ್ಥಾಪಕರಲ್ಲಿ ಒಬ್ಬ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗೋಯಾ

ಗೋಯಾ 1746ರಲ್ಲಿ ಸ್ಪೇನಿನಲ್ಲಿ ಜನಿಸಿದ. ಬಾಲ್ಯದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ ಬೆಳೆದು, ಇಟಲಿಯಲ್ಲಿ ಅನೇಕ ಚಿತ್ರಗಳನ್ನು ರಚಿಸಿ, ಪುನಃ ಸ್ಪೇನಿಗೆ ಹಿಂದಿರುಗಿ, ರಾಜಕುಮಾರನ ಅರಮನೆಯ ಅಲಂಕರಣಕ್ಕಾಗಿ ಇಪ್ಪತ್ತು ಚಿತ್ರಗಳನ್ನು ರಚಿಸಿದ. ಸ್ಪೇನಿನ ಹೊಲ, ಹಳ್ಳಿ, ತಾನು ಕಂಡ ಜನರ ಜೀವನಗಳನ್ನು ಚಿತ್ರಿಸಿದ. ಆಸ್ಥಾನ ಕಲಾವಿದನಾಗಿ, ರಾಜರು, ಅನೇಕ ಶ್ರೀಮಂತರ ಚಿತ್ರಗಳನ್ನು ರಚಿಸಿದ. ಫ್ರೆಂಚರು ಸ್ಪೇನನ್ನು ಮುತ್ತಿದಾಗ ಯುದ್ಧದ ದುಷ್ಪರಿಣಾಮಗಳ, ಅನೇಕ ಚಿತ್ರಗಳನ್ನು ಚಿತ್ರಿಸಿದ. ಇವುಗಳಲ್ಲಿ ಸತ್ತು ಬಿದ್ದಿರುವ ಜನ, ಭಯಭೀತರಾದ ಜನ, ಬಂದೂಕಿನೆದರು ನಿಂತಿರುವ ಪರು, ಮುಖ ಮುಚ್ಚಿಕೊಂಡಿರುವವರ ಚಿತ್ರಗಳನ್ನು ಚಿತ್ರಿಸಿ, ತನ್ನದೆ ಆದೇ ಸ್ವತಂತ್ರ ರೀತಿಯಲ್ಲಿ ಚಿತ್ರಿಸಿದ್ದಾನೆ. ಹತ್ತೊಂಬತ್ತನೆಯ ಶತಮಾನದ ಫ್ರಾನ್ಸಿನ ಚಿತ್ರಕಲೆ ಗೋಯಾನಿಂದ ಪ್ರಭಾವಿತವಾಗಿದೆ. ಚಿತ್ರ, ರೇಖಾಚಿತ್ರ, ಕೊರೆದ ಚಿತ್ರಗಳು, ಕಲ್ಲಚ್ಚಿನ ಚಿತ್ರಗಳು ಜನಪ್ರಿಯವಾಗಿದ್ದು, 1828ರಲ್ಲಿ ಗೋಯಾ ನಿಧನ ಹೊಂದಿದ.

ಗೋಪಾಲ್ ಘೋಷ್

ಗೋಪಾಲ್ ಘೋಷ್ ಕಲ್ಕತ್ತದಲ್ಲಿ 1913ರಲ್ಲಿ ಜನಿಸಿದರು. ಮಹರಾಜ ಸ್ಕೂಲ್ ಆಫ್ ಆರ್ಟ್ ಅಂಡ್ ಕ್ರಾಫ್ಟ್ಸ್‌ನಲ್ಲಿ ಕಲಾಶಿಕ್ಷಣ ಪಡೆದು, ಜಯಪುರವಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅನಂತರ ಮುದ್ರಾಸಿನ ಕಲಾಶಾಲೆಯಲ್ಲಿ ಡಿ.ಪಿ. ರಾಯ್ ಚೌಧುರಿಯವರ ಬಳಿ ಶಿಲ್ಪಕಲೆ ಕಲಿತರು. ಉತ್ತಮವಾದ ಕುಶಲತೆ ಮತ್ತು ಜಲವರ್ಣ, ಟೆಂಪರಾ ಮತ್ತು ಪೇಸ್ಟಲ್ ಮಾಧ್ಯಮಗಳಲ್ಲಿ ಪ್ರಕೃತಿ ಚಿತ್ರಗಳನ್ನು ರಚಿಸಿದ್ದಾರೆ. ಅವರ ಚಿತ್ರಗಳಲ್ಲಿ ವರ್ಣ ಪ್ರಧಾನವಾಗಿರುತ್ತದೆ. ಉತ್ಕೃಷ್ಟವಾದ ಸಂಯೋಜನೆ ಕಲ್ಕತ್ತದ ಇಂಡಿಯನ್ ಸೊಸೈಟಿ ಆಫ್ ಓರಿಯಂಟ್ ಆರ್ಟ್‌ನಲ್ಲಿ ಉಪನ್ಯಾಸಕರಾಗಿ, ಅನಂತರ ಸರ್ಕಾರಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಉಪನ್ಯಾಸಕರಾಗಿದ್ದರು.

ಚಾಂಪನಿ ಪಿಲಿಪ್ಪಿ ಡೇ

ಚಾಂಪನಿ 1602ರಲ್ಲಿ ಬ್ರುಸೆಲ್‌ನಲ್ಲಿ ಹುಟ್ಟಿದ್ದು, ಪ್ರಕೃತಿ ಚಿತ್ರಗಳನ್ನು ರಚಿಸುವುದರಲ್ಲಿ ತರಬೇತಿ ಪಡೆದಿದ್ದು, ಭಾವಚಿತ್ರ ಮತ್ತು ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚಿಸಿದ್ದಾನೆ ಹಾಗೂ ಸಾರ್ಬೊನ್ನಿ ಚರ್ಚಿನಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದ್ದಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿಂತಾಮಣಿಕರ್

ಕರ್ 1915ರಲ್ಲಿ ಪಶ್ಚಿಮ ಬಂಗಾಳದ ಕರಗಪುರದಲ್ಲಿ ಹುಟ್ಟಿದ್ದು ಮತ್ತು ಅಬನೀಂದ್ರನಾಥ ಟಾಗೂರರ ಸ್ಕೂಲ್ ಆಫ್ ಓರಿಯೆಂಟಲ್ ಆರ್ಟ್‌ನಲ್ಲಿ ಕ್ಷಿತೀಂದ್ರ ನಾಥ ಮಜುಮ್‌ದಾರ್‌ರ ಬಳಿ ಚಿತ್ರಕಲೆ ಹಾಗೂ ಬರಿಯಾದ ಸಾಂಪ್ರದಾಯಿಕ ಶಿಲ್ಪಿ ಗಿರಿಧಾರಿ ಮಹಾರಾಣ ಅವರ ಬಳಿ ಶಿಲ್ಪಕಲೆ ಕಲಿತು, 1938ರಲ್ಲಿ ಪ್ಯಾರಿಸಿನಲ್ಲಿ ಶಿಲ್ಪ ಕಲೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆದು, 1956–73ರ ವರೆಗೆ ಕಲ್ಕತ್ತಾದ ಸರ್ಕಾರಿ ಕಲಾ ಶಾಲೆಯ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಅವರು ವಾಸ್ ಮಾಧ್ಯಮದಿಂದ ರಚಿಸಿದ ಚಿತ್ರಗಳಲ್ಲಿ ಬಂಡಾಯದ ವಸ್ತುವುಳ್ಳ ಲಕ್ಷಣಗಳನ್ನು ಹಾಗೂ ಪ್ಯಾರಿಸಿಗೆ ಹೋದನಂತರ ತೈಲವರ್ಣದಲ್ಲಿ ಪ್ರಕೃತಿಚಿತ್ರ, ಭಾವಚಿತ್ರ ಮತ್ತು ನಗ್ನಚಿತ್ರಗಳನ್ನು ರಚಿಸಿದ್ದಾರೆ. ಪ್ಯಾರಿಸಿನಲ್ಲಿದ್ದಾಗ ಶಿಲ್ಪಕಲೆಯು ವಿವಿಧ ಮಾಧ್ಯಮಗಳಲ್ಲಿ ಪರಿಣತಿ ಪಡೆದು, ತಮ್ಮ ಸ್ವಂತಿಕೆ ಕಂಡುಕೊಂಡು, ಭಾರತೀಯ ಆಕಾರಗಳಿಂದ ಕೂಡಿದ್ದವು ಮತ್ತೆ ಕೆಲವು ಅಮೂರ್ತ ಶಿಲ್ಪಗಳನ್ನು ರಚಿಸಿದ್ದು, ಭಾರತೀಯ ಶಿಲ್ಪಕಲೆಗೆ ಹೊಸ ಚೇತನವನ್ನು ನೀಡಿದ್ದಾರೆ.

ಚಿರಿಕೋ ಜಿಯೋರ್ಜಿಯೋ ಡೇ

ಇಟಲಿಯ ಕಲಾವಿದನಾದ ಅವನು 1888ರಲ್ಲಿ ಗ್ರೀಸ್‌ನಲ್ಲಿ ಜನಿಸಿದ. ಅಥೆನ್ಸ್‌ನಲ್ಲಿ ಕಲೆಯನ್ನು ಕಲಿತು, ಪ್ಯಾರಿಸಿಗೆ ಬಂದನಂತರ ಅವಾಂಟ್–ಗರ್ದೆ ಚಳವಳಿಯವ ರೊಡನೆ ಸಂಪರ್ಕವಾಯಿತು. ಅವನು ಭೌತ – ಮಾರ್ಪಾಟಿನ ಚಿತ್ರಗಳನ್ನು ರಚಿಸಿದ್ದು, ವಿಸ್ಮಯಕರವಾದ, ಕೃತಕ ಪ್ರಾಚೀನ ಕಟ್ಟಡಗಳನ್ನು ಅತಿಶಯವಾದ ದೃಗ್ಧರ್ಶನ, ಖಾಲಿಯಾದ ಚಚೌಕದ ಮತ್ತು ಕನಸಿನ ಶಿಲ್ಪಗಳು ಹಾಗೂ ಈ ಕನಸಿನ ದೃಶ್ಯಗಳು ಅಸಮಂಜಸವಾಗಿದ್ದು, ನಿಶ್ಯಬ್ದ ವಸ್ತುಗಳಂತೆ ಕಾಣುತ್ತವೆ. ನಂತರದ ಕೃತಿಗಳು ಸರ್‌ರ್ರಿಯಲಿಸ್ಟ್ ಶೈಲಿಯವು. ಇವುಗಳಲ್ಲಿ ವಿಶೇಷ ಲಕ್ಷಣಗಳಿಂದ ಕೂಡಿದ ಉಡುಪುಗಾರರು, ಯಾಂತ್ರಿಕ ರೇಖಾಚಿತ್ರಗಳಿಂದ ಕೂಡಿದ ಸಾಧನಗಳು, ವಿಸ್ಮಯಕರ ವಾದ ಒಳಾಂಗಣದ ಸಂಚಾರ ಸ್ಥಳಗಳು. ಆಧುನಿಕ ಕಲೆಯ ಅತ್ಯುತ್ತಮ ಚಿತ್ರಾತ್ಮಕ ಚಿತ್ರಗಳಿಂದು ಮನ್ನಣೆ ಪಡೆದಿವೆ. ಅವನು 1974ರಲ್ಲಿ ತೀರಿಕೊಂಡ.

ಚುಗತ್ತಾಯಿ ಎ. ಆರ್.

ಚುಗತ್ತಾಯಿ 1899ರಲ್ಲಿ ಹುಟ್ಟಿದ್ದು. ಬೆಂಗಾಲ್ ಸ್ಕೂಲ್‌ನಲ್ಲಿ ಕಲಿತು, ಪರ್ಶಿಯನ್ ಮತ್ತು ಮೊಗಲ್ ಶೈಲಿಗಳ ಸಮ್ಮಿಶ್ರಣದಿಂದ ಹೊಸದಾದ ಭಾರತೀಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶೈಲಿಯಲ್ಲಿ ಚಿತ್ರ ರಚಿಸಿದ್ದು, ಕಲ್ಪನಾಶೀಲವಾದ ಚಿತ್ರಗಳಾಗಿವೆ. ಅವರು ರಚಿಸಿರುವ ಚಿತ್ರಗಳು, ಚಿಕಣಿ ಚಿತ್ರಗಳಿಗಿಂತ ದೊಡ್ಡದಾಗಿವೆ ಮತ್ತು ಇಸ್ಲಾಮ್‌ನ ಸಂಸ್ಕೃತಿಯ ವಾಸ್ತುಶಿಲ್ಪದ ಆಕಾರಗಳನ್ನು ಕಾಣಬಹುದು. ಕಾವ್ಯಾತ್ಮಕ ಚಿತ್ರಗಳಾಗಿದ್ದು, ಭಾವ ಮತ್ತು ಸೌಂದರ್ಯ ಮುಖ್ಯ. ಅವರ ವಾಶ್ ಚಿತ್ರದ ಮಾಧ್ಯಮದ ವರ್ಗೀಕರಣ, ವರ್ಣ ಗಳ ಪರಸ್ಪರ ಸಂಬಂಧ, ಸುಲಲಿತವಾದ ರೇಖೆಗಳು, ವೀರ್ಯವತ್ತಾದ ರೇಖೆ ಮತ್ತು ಅದರ ಲಯ ಇವು ಅವರ ವೈಶಿಷ್ಟ್ಯ. ಮೊಗಲ್ ಚಿತ್ರಕಲೆಯು ವಾಸ್ತುಶಿಲ್ಪವನ್ನು ಚಿತ್ರದ ಹಿನ್ನೆಲೆಗೆ ಉಪಯೋಗ ಮತ್ತು ಅಲಂಕರಣ, ಉದ್ದನೆಯ ವಸ್ತ್ರಗಳಿದ್ದು ಅವು, ನೆಲದ ಮೇಲೂ ಹರಡಿದ್ದು, ಅದರ ವೈಶಿಷ್ಟ್ಯವನ್ನು ಚಿತ್ರಿಸಿದ್ದಾರೆ.

ಚೆಲ್ಲಿನಿ

ಚೆಲ್ಲಿನಿ 1500ರಲ್ಲಿ ಇಟಲಿಯಲ್ಲಿ ಜನಿಸಿದ. ಅವನು ಜಗತ್ತಿನ ಅತ್ಯಂತ ಶ್ರೇಷ್ಠ ಲೋಹಶಿಲ್ಪಿ. ಕೆತ್ತನೆ ಕೆಲಸದಲ್ಲೂ ಕುಶಲತೆ ಪಡೆದಿದ್ದ ಅವನು, ಆಕರ್ಷಕ ಕೆತ್ತನೆ ಕೆಲಸ ಗಳನ್ನು ಮಾಡಿದ್ದಾನೆ. ಅವನ ಅತ್ಯಂತ ಉತ್ಕೃಷ್ಟ ಕೃತಿ ಫ್ಲಾರೆನ್ಸಿನಲ್ಲಿರುವ ಕಂಚಿನ ವಿಗ್ರಹವಾದ, ಪುರಾಣ ಪುರುಷನಾದ ಪರ್ಸಿಯಸ್. ಫ್ರಾನ್ಸಿನ ಅರಸ ಫ್ರಾನ್ಸಿಸ್‌ನ ಉಪಯೋಗಕ್ಕಾಗಿ ಚಿನ್ನದ ಉಪ್ಪಿನ ಕರಂಡಕವೊಂದನ್ನು ರಚಿಸಿದ. ಕರಂಡಕದ ಮೇಲೆ ಸಮುದ್ರದೇವತೆ ನೆಪ್ಚೂನ್ ಮತ್ತು ಭೂಮಿಯನ್ನು ಪ್ರತಿನಿಧಿಸುವ ಹೆಂಗಸಿನ ಪ್ರತಿಮೆ ಗಳಿವೆ. ಕಡಲ ಕುದುರೆ ಮತ್ತು ಅನೇಕ ಬಗೆಯ ಮೀನುಗಳು ನೀರಿನಲ್ಲಿ ಈಜಾಡು ವುದರ ಚಿತ್ರಣವಿದ್ದು, ಇದು ಅವನ ಶ್ರೇಷ್ಠ ಕೃತಿಗಳಲ್ಲಿ ಒಂದು. ಚೆಲ್ಲಿನಿ 1571ರಲ್ಲಿ ಮರಣ ಹೊಂದಿದ.

ಜತೀನ್‌ದಾಸ್

1941ರಲ್ಲಿ ಬಾರಿಪಾದದಲ್ಲಿ ಜನಿಸಿದ ಜತೀನ್‌ದಾಸ್, 1963ರಲ್ಲಿ ಮುಂಬಯಿನ ಜೆ. ಜೆ. ಕಲಾಶಾಲೆಯಿಂದ ಡಿಪ್ಲೊಮೊ ಮತ್ತು ಮುಂಬಯಿ, ದೆಹಲಿ, ವೆಸ್ಟ್ ಜರ್ಮನಿ, ಪ್ಯಾರಿಸ್ ಬಿನಾಲೆ, ಲಂಡನ್, ಫ್ರಾಂಕ್‌ಫರ್ಟ್ ಮುಂತಾದ ಪ್ರದರ್ಶನಗಳಲ್ಲಿ ಭಾಗ ವಹಿಸಿದ್ದು, 1964, 65ರ ಬಾಂಬೆ ಆರ್ಟ್ ಸೊಸೈಟಿ, ಐಪೆಕ್ಸ್ ಮುಂತಾದ ಕಡೆ ಪ್ರಶಸ್ತಿ ಗಳಿಸಿದ್ದಾರೆ. ರೇಖೆ ಮತ್ತು ತೈಲವರ್ಣ ಚಿತ್ರಗಳನ್ನು ರಚಿಸಿರುವ ಅವರ ಚಿತ್ರಗಳಲ್ಲಿ ವೀರ್ಯವತ್ತಾದ ರೇಖೆಗಳು ಮತ್ತು ಮನುಷ್ಯಾಕೃತಿಗಳಲ್ಲಿ ಚಲನೆ ಮುಖ್ಯ ವಾಗಿದ್ದು, ತಮ್ಮ ಆಂತರ್ಭಾವವಾದ ಕಲ್ಪನೆಗಳನ್ನು ಚಿತ್ರದ ಮೂಲಕ ಅಭಿವ್ಯಕ್ತಿಸು ವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜಾಕ್ಸನ್ ಪೊಲಾಕ್

ಜಾಕ್ಸನ್ ಪೊಲಾಕ್

ಪೊಲಾಕ್ 1912ರಲ್ಲಿ ಅಮೆರಿಕೆಯಲ್ಲಿ ಹುಟ್ಟಿದ. ಅವನ ಮೊದಲ ಕೃತಿಗಳು ಭಾವಪೂರ್ಣತೆಯಂ ಯಥಾರ್ಥವಾದ, ಉತ್ಸಾಹವುಳ್ಳ ಮಂದವಾದ ವರ್ಣಗಳು, ಅಭಿವ್ಯಕ್ತಿಯ ಸಮುದ್ರ ದೃಶ್ಯದ ಮತ್ತು ಪ್ರಕೃತಿ ಚಿತ್ರಗಳು. 1936ರಲ್ಲಿ ಸರ್‌ರಿಯಲಿಸಂನಿಂದ ಪ್ರಭಾವಿತನಾಗಿ ಚಿತ್ರಗಳನ್ನು ರಚಿಸಿದ. ಅವನ 'ಆಕ್ಷನ್ ಪೇಂಟಿಂಗ್' ಚಿತ್ರಗಳು ಮಹತ್ವವಾದುದು ಹಾಗೂ ಕುಂಚವನ್ನು ಬಣ್ಣದಲ್ಲಿ ಅದ್ದಿ, ಕ್ಯಾನವಾಸಿನ ಮೇಲೆ ಬಣ್ಣಗಳನ್ನು, ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಚಲನೆಯ ರೂಪದಲ್ಲಿ ಚಿತ್ರಿಸುವುದು. ಅಮೆರಿಕಾದಲ್ಲಿ ಚಲನಶೀಲ ಚಿತ್ರರಚನೆಗೆ ಹೊಸ ಆಯಾಮ ನೀಡಿದವನು ಪೊಲಾಕ್. ಅದು ಅಮೂರ್ತ ಅಭಿವ್ಯಕ್ತಿಯ ಪಂಥ. ಚಿತ್ರದಲ್ಲಿ ಕಲಾವಿದನ ಅಂತರಂಗದ ಸೃಷ್ಟಾತ್ಮಕ ತುಡಿತದಿಂದ ಬಂದು, ಭಾವನಾತ್ಮಕವಾಗಿದ್ದು ಮತ್ತು ಅಜಾಗ್ರತ ಮನಸ್ಸಿಗೆ ಸಂಬಂಧಿಸಿರುತ್ತದೆ. ಅವನು 1956ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾರ್ಜ್ ಕೀಟ್

ಜಾರ್ಜ್‌ಕೀಟ್ ಸಿಲೋನಿನವರಾದರೂ, ಅವರ ಚಿತ್ರಗಳು ಭಾರತದ ಸಂಸ್ಕೃತಿಯ ಪ್ರತೀಕ. ಅವರು ಯಾವ ಕಲಾಶಾಲೆಯಲ್ಲೂ ಕಲೆಯನ್ನು ಕಲಿತವರಲ್ಲ. ಮೊದಲ ಚಿತ್ರಗಳಲ್ಲಿ ವಾಸ್ತವಿಕತೆಯಲ್ಲಿ ಪ್ರಕೃತಿಚಿತ್ರ, ಸಂಯೋಜನೆ ಚಿತ್ರಗಳನ್ನು ಶೃಂಗಾರವಾಗಿ ಚಿತ್ರಿಸಿದ್ದಾರೆ. ನಮ್ಮ ದೇಶದ ಹಿಂದೂ ಪುರಾಣಗಳಲ್ಲಿ ಬರುವ ಸನ್ನಿವೇಶಗಳನ್ನು ಚಿತ್ರಿಸಿದ್ದು, ಈ ಚಿತ್ರಗಳ ರೇಖೆಗಳಲ್ಲಿ ತಮ್ಮದೇ ಆದ ಶೈಲಿಯನ್ನು ಬೆಳಸಿಕೊಂಡು, ರೇಖೆಗಳು ವೀರ್ಯವತ್ತಾಗಿ, ಲಾಲಿತ್ಯ ಮತ್ತು ಅಲಂಕಾರಿಕವಾಗಿರುತ್ತಿದ್ದವು. ಅವರ ಚಿತ್ರಗಳು ಕಾವ್ಯಗಳಿದ್ದಂತೆ, ಚಿತ್ರಗಳನ್ನು ನೋಡಿದರೆ ವಿಷಯ ವಸ್ತುವುಗಿಂತ ರೂಪಕಲ್ಪನೆಗೆ ಹೆಚ್ಚು ಪ್ರಾಧಾನ್ಯ. ಅವರು ಬೌದ್ಧಧರ್ಮಕ್ಕೆ ಸಂಬಂಧಿಸಿದ ಕೆಲವು ಚಿತ್ರಗಳನ್ನು ರಚಿಸಿದ್ದಾರೆ ಹಾಗೂ ರಾಧಾಕೃಷ್ಣರ ಚಿತ್ರಗಳಲ್ಲಿ ಪ್ರೇಮ, ಶೃಂಗಾರ ಚಿತ್ರಗಳಲ್ಲಿ ರೇಖಾಲಾಲಿತ್ಯವನ್ನು ಕಾಣಬಹುದು.

ಜಾರ್ಜಸ್ ಸ್ಯೂರತ್

ಸ್ಯೂರತ್ ಫ್ರೆಂಚ್ ಚಿತ್ರಕಲಾವಿದನಾಗಿದ್ದು, 1859ರಲ್ಲಿ ಪ್ಯಾರಿಸಿನಲ್ಲಿ ಹುಟ್ಟಿದ. 1878ರಲ್ಲಿ ಎಕಲೆ ಡೆಸ್ ಬ್ಯೂಯಾಕ್ಸ್ ಆರ್ಟ್ಸ್‌ಗೆ ಸೇರಿ, ಅಲ್ಲಿ ಕಲಾ ಶಿಕ್ಷಣ ಪಡೆದ. ಅವನ ಮೊದಲ ರೇಖಾಚಿತ್ರಗಳಲ್ಲಿ ಲೀನತೆ, ಅವು ನಿಯಮಬದ್ಧವಾಗಿದ್ದು, ಅತಿ ಶ್ರದ್ಧೆಯಿಂದ ರಚಿಸಿದ್ದಾನೆ. ಆಕಾರ, ವರ್ಣ ಮತ್ತು ರೇಖೆಗಳು ಅವನಿಗೆ ಸಂಶೋಧನೆಯ ವಸ್ತುಗಳಾಗಿದ್ದು, ಅಭಿವ್ಯಕ್ತಿವಾದದ ಅವನ ಚಿತ್ರಗಳಲ್ಲಿ ವರ್ಣಗಳ ಉಜ್ವಲತೆ ಮತ್ತು ಪಾಯಿಂಟಲಿಸಂ ತಂತ್ರದಿಂದ, ವರ್ಣವನ್ನು ವಿಶ್ರಮಾಡದೆ, ಚಿಕ್ಕಚಿಕ್ಕ ಚುಕ್ಕೆಗಳನ್ನಾಗಿ ಕ್ಯಾನವಾಸಿನ ಮೇಲಿಟ್ಟು, ದೂರದಿಂದ, ನೋಡಿದಾಗ ಕಣ್ಣುಗಳಿಗೆ ವಿಶ್ರಗೊಂಡಿರುವಂತೆ ಹಾಗೂ ಬೆಳಕು ನೆರಳುಗಳ ಭ್ರಮೆ, ಈ ಕಣಗಳ ಸಾಂದ್ರತೆಯನ್ನು ಅವಲಂಬಿಸಿರುತ್ತದೆ. ಆದರಿಂದ ವರ್ಣಗಳ ಶೋಭೆಯು ಸ್ವಚ್ಛವಾಗಿರುತ್ತದೆ. ಅವನು 1891ರಲ್ಲಿ ತೀರಿಕೊಂಡ.

ಜಾರ್ಜೋನೀ

ಜಾರ್ಜೋನೀ ಕಾಸಲ್ ಫ್ರಾಂಕೋದಲ್ಲಿ 1477ರಲ್ಲಿ ಜನಿಸಿದ. ವೆನಿಸಿನ ಕಲಾವಿದ ಜೋವಾನೇ ಬೆಲ್ಲಿನಿಯ ಬಳಿ ಶಿಷ್ಯವೃತ್ತಿಯನ್ನು ಪಡೆದು, ಅನಂತರ ತನ್ನ ಮನೆಯ ಮುಂಭಾಗವನ್ನು ಭಿತ್ತಿಚಿತ್ರಗಳಿಂದ ಅಲಂಕರಿಸಿ, ಎಲ್ಲರ ಗಮನ ಸೆಳೆದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಳಕು-ನೆರಳುಗಳ ಪರಿಣಾಮಕಾರಿ ವಿನ್ಯಾಸ ಅವನ ಚಿತ್ರಗಳಲ್ಲಿ ಕಾಣುತ್ತೇವೆ. ಸಮೃದ್ಧ ವರ್ಣಗಳಿದ್ದು, ಬೆಳಕು ನೆರಳುಗಳ ಪರಿಣಾಮದಿಂದ ಈ ವೈಶಿಷ್ಟ್ಯ ಎದ್ದು ಕಾಣುತ್ತದೆ. ಅವನು ರಚಿಸಿದ ಪ್ರಕೃತಿ ಚಿತ್ರಗಳಲ್ಲಿ ವ್ಯಕ್ತಿಗಳಿಗೂ, ಪ್ರಾಣಿಗಳಿಗೂ ಸ್ಥಾನ ದೊರೆತು. ಎಲ್ಲವೂ ಗಣ್ಯ ಎಂದು ಚಿತ್ರಿಸಿದ್ದಾನೆ. ಅವನು ಮೆನಿಸಿನ ಕಲೆಯನ್ನು ಪರಕಾಷ್ಠೆಗೆ ಏರಿಸಿ, 1511ರಲ್ಲಿ ಮರಣಹೊಂದಿದ.

ಜಾನಕೀರಾಂ ಪಿ. ಪಿ.

ಜಾನಕೀರಾಂ 1930ರಂದು ಮದ್ರಾಸಿನಲ್ಲಿ ಜನಿಸಿದ್ದು, ಮದ್ರಾಸಿನ ಸರ್ಕಾರಿ ಕಲಾಶಾಲೆಯಿಂದ ಚಿತ್ರ, ಶಿಲ್ಪ ಮತ್ತು ವಾಣಿಜ್ಯ ಕಲೆಗಳಲ್ಲಿ ಶಿಕ್ಷಣ ಪಡೆದಿದ್ದಾರೆ. ಅವರು ತಗಡಿನ ಶಿಲ್ಪಗಳಿಗೆ ಹೆಸರು ಪಡೆದಿದ್ದು. ಅನೇಕ ಉಬ್ಬುಶಿಲ್ಪಗಳು ಜನಪ್ರಿಯವಾಗಿವೆ. ಹಿಂದೂ ದೇವದೇವತೆಗಳು, ಕ್ರೈಸ್ತ ಮುಂತಾದುವನ್ನು ತಾಮ್ರದ ತಗಡಿನ ಮೇಲೆ ರೂಪಕೊಟ್ಟು. ತಂತ್ರಿಯಿಂದ ಬೇಕಾದ ಅಲಂಕಾರ ಮತ್ತು ಹಿತವ್ಯಳಿ, ಎನಾಮೆಲ್‌ಗಳನ್ನು ವಿಶೇಷವಾಗಿ ಬಳಸಿ, ಪ್ರಭಾವಯುತವಾಗಿ ಕಾಣುವಂತೆ ರಚಿಸುವರು. ಈ ಉಬ್ಬುಶಿಲ್ಪಗಳು ಅತಿ ಸೂಕ್ಷ್ಮತೆಯಿಂದ ಕೂಡಿದ್ದು. ಶಿಲ್ಪಕೃತಿಗಳ ಶೈಲಿ ಸಾಂಪ್ರದಾಯಿಕವಾಗಿದ್ದರೂ. ರಚನಾ ವಿನ್ಯಾಸ ಮತ್ತು ಸಂಕೇತಗಳಿಂದ ಕೂಡಿದ್ದು, ವೈವಿಧ್ಯಮಯವಾಗಿರುತ್ತವೆ. ಕೆಲವು ಆಕೃತಿಗಳು ಜಾನಪದ ಲಕ್ಷಣವನ್ನು ಹೊಂದಿವೆ ಹಾಗೂ ಶಿಲ್ಪಕೃತಿ ಹೆಚ್ಚು ಪರಿಣಾಮಕಾರಿಯಾಗಿ ಕಾಣುವಂತೆ ತಮಗೆ ಬೇಕಾದ ವರ್ಣದ ಎನಾಮೆಲ್‌ಅನ್ನು ಉಪಯೋಗಿಸುವುದು ಅವರ ಒಂದು ಪದ್ಧತಿಯಾಗಿದೆ. ಅನೇಕ ಉಬ್ಬು ಶಿಲ್ಪಗಳ ಭಿತ್ತಿಫಲಕಗಳನ್ನು ಸಹ ರಚಿಸಿದ್ದಾರೆ.

ಜಾನ್ ವೆರ್ಮೀರ್

ವೆರ್ಮೀರ್ 1632ರಲ್ಲಿ ನೆದರ್‌ಲೆಂಡ್ಸ್‌ನಲ್ಲಿ ಜನಿಸಿದ. ತಂದೆ ಕಲಾಕೃತಿಗಳ ವ್ಯಾಪಾರಿ. ಮುಂದೆ ಅವನೂ ಅದನ್ನೇ ಮುಂದುವರೆಸಿದ. ಕಲೆಯನ್ನು ಕಲಿತು ಚಿತ್ರರಚನೆಯಲ್ಲಿ ತುಂಬ ಶ್ರಮವಹಿಸುತ್ತಿದ್ದ. ಅವನ ಚಿತ್ರಗಳಲ್ಲಿ ನಯ ಹಾಗೂ ಗೃಹಜೀವನವೇ ಚಿತ್ರಗಳ ವಸ್ತು. ಚಿತ್ರದ ಪ್ರತಿ ವಿವರವೂ ಶಾಂತ ಭಾವ, ಪ್ರತಿ ವರ್ಣಚಿತ್ರ ಸರಳ, ಸುಂದರವಾಗಿದ್ದವು. ಅವನ ಚಿತ್ರಗಳಲ್ಲಿ ಒಬ್ಬಳೇ ಹೆಂಗಸಿನ ರೂಪವನ್ನು ಕಾಣಬಹುದು. ನೀಲಿ ಮತ್ತು ನಸು ಹಳದಿ ವರ್ಣಗಳನ್ನು ಹೆಚ್ಚಾಗಿ ತನ್ನ ಚಿತ್ರಗಳಲ್ಲಿ ಬಳಸಿದ್ದು, ಮನುಷ್ಯಾಕೃತಿಗಳ ಉಡುಪುಗಳಲ್ಲಿ ಈ ವರ್ಣಗಳನ್ನು ಕಾಣಬಹುದು. 17ನೆಯ ಶತಮಾನದ ವೆರ್ಮೀರ್ ತನ್ನ ಜೀವಿತ ಕಾಲದಲ್ಲೇ ಪ್ರಮುಖ ಕಲಾವಿದನಾಗಿದ್ದು, 1675ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಾಮಿನಿರಾಯ್

ಜಾಮಿನಿರಾಯ್

ಜಾಮಿನಿರಾಯ್ 1887ರಲ್ಲಿ ಬಂಗಾಲದ ಸುದೂರು ಗ್ರಾಮದಲ್ಲಿ ಹುಟ್ಟಿದರು. ಅವರ ಗ್ರಾಮದಲ್ಲಿದ್ದ ಸಮೃದ್ಧ ಜಾನಪದ ಕಲಾಪರಂಪರೆಯೇ ಅವರಿಗೆ ಕಲೆ ಕಲಿಯಲು ಆಸಕ್ತಿ. ಚಿಕ್ಕಂದಿನಲ್ಲೇ ಈ ಕಲಾವಿದರ ಕೃತಿಗಳನ್ನು ಅನುಕರಿಸುತ್ತಿದ್ದರು. ಅನಂತರ ಕಲ್ಕತ್ತೆಯ ಸರ್ಕಾರಿ ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಶಿಕ್ಷಣ ಪಡೆದು, ಟೆಂಪರಾ, ತೈಲವರ್ಣ ಮಾಧ್ಯಮದಲ್ಲಿ ಸರಾಗವಾಗಿ, ವೀರ್ಯವತ್ತಾಗಿ ಚಿತ್ರಗಳನ್ನು ರಚಿಸುತ್ತಿದ್ದರು. ಅವರು ಬಾಲ್ಯದಲ್ಲಿ ಗೊಂಬೆ ಮಾಡುವ ಕಲೆಯ ಆಕಾರಗಳು, ಚಿತ್ರಾಲಂಕಾರಗಳು ಮತ್ತು ವರ್ಣಗಳನ್ನು ಜೀವನದುದ್ದಕ್ಕೂ ಅನುಸರಿಸಿಕೊಂಡು ಬಂದರು. ಅವರ ಪಟದ ಚಿತ್ರಗಳಲ್ಲಿ ಜಾನಪದ ಕಲೆಯ ಪ್ರಭಾವ ಕಾಣಬಹುದು. ಅವರಿಗೆ ಜಾನಪದ ಕಲೆಯ ಸಂಸ್ಕೃತಿಯ ಬೇರುಗಳು ನೆಲಸಿರುವ ಜನಸಾಮಾನ್ಯರ ಜೀವಂತ ಅನುಭವಗಳೂ ಅವರ ಕಲೆಗೆ ಸ್ಫೂರ್ತಿ. ಅವರು ಒಂದು ಸರಳ ವೈಯಕ್ತಿಕ ಶೈಲಿಯನ್ನು ರೂಪಿಸಿಕೊಂಡು, ಭಾರತೀಯ ವಿಷಯಗಳ ಮೇಲೆ ಅವರು ರಚಿಸಿದ ಚಿತ್ರಗಳಲ್ಲಿ ಕಂಡುಬರುವ ಪ್ರಶಾಂತ, ಗಾಂಭೀರ್ಯ ಹಾಗೂ ಅನುಕಂಪದ ಭಾವನೆ, ಕ್ರಿಸ್ತನ ಜೀವನ ಕುರಿತ ವರ್ಣಚಿತ್ರಗಳಲ್ಲಿ, ವಿನ್ಯಾಸದಲ್ಲಿ ಸಮನ್ವಯಶೈಲಿ ಕಾಣಬಹುದು. ಜಲಮಿಶ್ರಿತ ಟೆಂಪರಾ ವರ್ಣದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜಿಯೊತ್ತೊ

ಜಿಯೊತ್ತೊ 1267ರಲ್ಲಿ ಫ್ಲಾರೆನ್ಸಿನ ಹಳ್ಳಿಯೊಂದರಲ್ಲಿ ಜನಿಸಿದ. ತನ್ನ ಕಲಾ ಶಿಕ್ಷಣವನ್ನು ಫ್ಲಾರಿನ್ಸಿನಲ್ಲಿ ಪಡೆದ. ಚಿತ್ರಕಲೆಯಲ್ಲಿ ಅಲಂಕರಣಕ್ಕೆ ಪ್ರಾಧಾನ್ಯವಿದ್ದ ಕಾಲದಲ್ಲಿ, ಸಂಪ್ರದಾಯ ಬಿಟ್ಟು, ಕಂಡದ್ದನ್ನು ಕಂಡ ಹಾಗೆ ಚಿತ್ರಿಸಿದ. ಕ್ರೈಸ್ತ ದೇವಾಲಯದ ಗೋಡೆಗಳಲ್ಲಿ, ಸಂತನ ಜೀವನವನ್ನು ಹಾಗೂ ಇಟಲಿಯ ಪಾದುವಾ ನಗರದ ಕ್ರೈಸ್ತ ಆರಾಧನಾ ಮಂದಿರದಲ್ಲಿ ಭಿತ್ತಿಚಿತ್ರಗಳನ್ನು ಚಿತ್ರಿಸಿದ. ಜಿಯೊತ್ತೊ ಚಿತ್ರಿಸಿದ ವ್ಯಕ್ತಿಚಿತ್ರಗಳಲ್ಲಿ ತ್ರಿ-ಆಯಾಮವಿರುತ್ತಿತ್ತು. ಈ ಚಿತ್ರಗಳ ವ್ಯಕ್ತಿಗಳ ಮುಖದಲ್ಲಿ ಸಿಟ್ಟು, ಹೆದರಿಕೆ, ಪ್ರೀತಿ ಭಾವಗಳು ಸ್ಪಷ್ಟವಾಗಿರುತ್ತಿದ್ದವು. ಅವನು ಚಿತ್ರ, ಶಿಲ್ಪ, ಕವಿ, ಸಂಗೀತ, ವಾಸ್ತುಶಿಲ್ಪಗಳಲ್ಲಿ ಪರಿಣತನಾಗಿದ್ದ. ಆತನ ಕಲಾ ಪ್ರತಿಭೆಗೆ ಮನಸೋತು, ಅನೇಕ ದೊರೆಗಳು ಅವನಿಗೆ ಆಹ್ವಾನಕೊಟ್ಟರು. ಕಲೆಯ ಕೀರ್ತಿಶಿಖರವನ್ನೇರಿದ ಆತ 1337ರಲ್ಲಿ ನಿಧನಹೊಂದಿದ.

ಜೆರಾಮ್ ಪಟೇಲ್

ಜೆರಾಮ್ ಪಟೇಲ್ 1930ರಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಮುಂಬಯಿನ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಿಂದ 1955ರಲ್ಲಿ ಪಡೆದಿದ್ದು, 1959 ರಲ್ಲಿ ಲಂಡನ್ನಿನ ಸೆಂಟ್ರಲ್ ಸ್ಕೂಲ್ ಆಫ್ ಆರ್ಟ್ ಅಂಡ್ ಕ್ರಾಫ್ಟ್‌ನಲ್ಲಿ ಟೈಪೋಗ್ರಾಫಿ, ಪಬ್ಲಿಸಿಟಿ, ಡಿಸೈನ್‌ನಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದಾರೆ. ರಾಷ್ಟ್ರದ ಮತ್ತು ಅಂತರ ರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1957 ರಿಂದ 1963 ರವರೆಗೆ ಮೂರು ಬಾರಿ ರಾಷ್ಟ್ರೀಯ ಕಲಾಪ್ರದರ್ಶನದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಅವರ ಮೊದಲ ಕೃತಿಗಳು ಲೈಂಗಿಕ ಚಿತ್ರಗಳಿಂದ ಕೂಡಿದ್ದವು. ಬ್ಲೋಟಾರ್ಚ್ ಮಾಧ್ಯಮ ದಲ್ಲಿ ಭಾರತದಲ್ಲಿ ಮೊದಲ ಬಾರಿಗೆ ಕೃತಿಗಳನ್ನು ರಚಿಸಿದವರು ಹಾಗೂ ಅವರ ಇತ್ತೀಚಿನ ಕೃತಿಗಳಲ್ಲಿ ಅವಕಾಶ, ವರ್ಣಗಳಿಗೆ ಸಂಬಂಧವಿರುವುದಿಲ್ಲ. ತಮ್ಮ ಚಿತ್ರಗಳಲ್ಲಿ ಆಕಾರ ಮತ್ತು ಅರ್ಥವನ್ನು ರೂಪಾಂತರದ ಪಾರದರ್ಶಕತ್ವದಿಂದ ಸೃಜಿಸುವರು. ಈ ಆಕಾರ ಗಳು ನೋಡುಗನಿಗೆ ಯಾವುದೇ ಅರ್ಥ ನೀಡಬಲ್ಲದು.

ಜೇಮ್ಸ್ ಎನ್ಸರ್

ಎನ್ಸರ್ 1860ರಲ್ಲಿ ಜನಿಸಿದ್ದು, ಬೆಲ್ಜಿಯನ್ ಚಿತ್ರಕಲಾವಿದ ಮತ್ತು ಎನ್ ಗ್ರೇವರ್. ತನ್ನ ಕಲಾಶಿಕ್ಷಣವನ್ನು ಬ್ರುಸೆಲ್ಸ್ ಅಕಾಡೆಮಿಯಲ್ಲಿ ಪಡೆದ. ಎಕ್ಸ್‌ಪ್ರೆಸ ನಿಸಮ್ ಮತ್ತು ಅಬಸ್ಟ್ರಾಕ್ಟ್ ಎಕ್ಸ್‌ಪ್ರೆಸನಿಸಮ್ ಪಂಥದ ಮೂಲಕರ್ತೃ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಂತರ್ಗತವಾದ ನಿರುತ್ಸಾಹ, ಭಾವಚಿತ್ರಗಳು, ಪ್ರಕೃತಿಚಿತ್ರ. ಸ್ಟಿಲ್‌ಲೈಫ್ ಚಿತ್ರಗಳನ್ನು ರಚಿಸಿದ್ದಾ, ಉಜ್ವಲವಾದ ವರ್ಣಗಳ ವ್ಯತ್ಯಾಸ ತೋರಿಸಿರುವುದರಲ್ಲಿ ಸಿದ್ಧಿ ಪಡೆದಿದ್ದ. ಎನ್‌ಗ್ರೇವಿಂಗ್ಸ್ ತಂತ್ರದಲ್ಲಿ ಉತ್ತಮ ಪ್ರಭುತ್ವ ಪಡೆದಿದ್ದ, ಅವನು 1949ರಲ್ಲಿ ತೀರಿಕೊಂಡ.

ಜೆಹಂಗೀರ್ ಸಭಾವಾಲ

ಸಭಾವಾಲ 1922ರಲ್ಲಿ ಮುಂಬಯಿನಲ್ಲಿ ಹುಟ್ಟಿದು, ತಮ್ಮ ಕಲಾಶಿಕ್ಷಣವನ್ನು ಸರ್ ಜೆ. ಜೆ. ಕಲಾಶಾಲೆಯಲ್ಲಿ 1944ರಲ್ಲಿ ಮತ್ತು ಲಂಡನ್, ಪ್ಯಾರಿಸಿನ ಕಲಾಶಾಲೆಗಳಲ್ಲಿ ಹೆಚ್ಚಿನ ಕಲಾಶಿಕ್ಷಣ ಪಡೆದಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಪ್ರಕೃತಿಚಿತ್ರಗಳಲ್ಲಿ ಹೊಸತನ ರೂಪಿಸಿ, ಇಂಗ್ಲೆಂಡಿನಿಂದ ಬಂದ ನಂತರ ಕ್ಯೂಬಿಸಂ ಶೈಲಿಯಲ್ಲಿ ಚಿತ್ರಗಳ ರಚನೆ, ತಮ್ಮ ವೈಯಕ್ತಿಕವಾದ ಕನಸುಗಳನ್ನು ಗೂಢವಾಗಿ, ಸುಸಂಗತವಾಗಿ, ಸೌಂದರ್ಯಯುತವಾಗಿ ಮನಸ್ಸಿನ ಭಾವನೆಗಳನ್ನು ಕೂಡಲೇ ವಿಚಾರಮಾಡಿ, ಅವ ಲೋಕಿಸಿ, ಚಿತ್ರದಲ್ಲಿ ಮೂಡಿಸುವರು. ತೆಳುವಾದ ವರ್ಣಗಳಿಂದ ಹೊಸ ಕಳೆ ತುಂಬಿದಂತೆ, ಮಸುಕಾಗಿರುವಂತೆ ರಚಿಸುವರು. ಚಿತ್ರದಲ್ಲಿ ಮನುಷ್ಯಾಕೃತಿಗಳು ಶೈಲಿಯುಕ್ತವಾಗಿದ್ದು, ಆಕಾರಗಳು ಭ್ರಮೆ ಬರುವಂತೆ ಸೃಷ್ಟಿಸಿ, ದೂರ ದೂರವಾಗಿರುವಂತೆ ರಚಿಸುವರು.

ಜೋಗೆನ್ ಚೌಧುರಿ

1939ರಲ್ಲಿ ಫರಿದಾಪುರದಲ್ಲಿ ಜನಿಸಿದ ಚೌಧುರಿ, ಕಲ್ಕತ್ತಾದ ಸರ್ಕಾರಿ ಕಲಾಶಾಲೆಯಿಂದ ಡಿಪ್ಲೊಮೊ ಮತ್ತು ಫ್ರೆಂಚ್ ಸರ್ಕಾರದ ಶಿಷ್ಯವೇತನ ಪಡೆದು ಪ್ಯಾರಿಸಿನಲ್ಲಿ ಕಲೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದಾರೆ. ವಿದೇಶದ ಹಾಗೂ ರಾಷ್ಟ್ರದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿರುವ ಅವರಿಗೆ, 1959ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ ಬಂದಿದೆ. ಅವರ ಚಿತ್ರಗಳು ಭ್ರಾಮಕತೆಯಿಂದ ಕೂಡಿದ್ದು, ದೈನಂದಿನ ಜೀವನದಿಂದ ವಿಷಯಗಳನ್ನು ಆರಿಸಿಕೊಂಡು, ಸಂಯೋಜನೆಗಳನ್ನು ಸಮತಲ ಮೇಲ್ಮೈಯ ಮೇಲೆ ಸೃಷ್ಟಿಸುತ್ತಾರೆ. ಅವರು ಸಂಯೋಜನೆಗಳನ್ನು ಸೃಷ್ಟಿಸಲು ತರಕಾರಿ ಮತ್ತು ಮೀನುಗಳನ್ನು ಆರಿಸಿಕೊಳ್ಳುತ್ತಾರೆ. ಮಾನವನ ಕೈಗಳು ಅಥವಾ ಹೆಣ್ಣಿನ ಸ್ತನಗಳು, ಬಳ್ಳಿ, ಹೂವು, ಚಿಟ್ಟೆಯನ್ನು ಸೇರಿಸಿ ಪ್ರತಿನಿಧಿತವಾಗಿರುತ್ತವೆ ಹಾಗೂ ವಸ್ತುಗಳು ತಮ್ಮವೇ ಆದ ರಹಸ್ಯವಾದ ಪ್ರಾಣಿಜೀವನ ಹೊಂದಿದಂತೆ ಕಾಣುತ್ತವೆ. ಅವರ ಆಂತರ್ಭಾವವು ಚಿತ್ರವಾಗಿರುವುದಕ್ಕಿಂತಲೂ ರೇಖೆಗಳಿಂದ ಬರೆದಂತೆ ಇರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಜೋನ್ ಮೀರೋ

ಮೀರೋ ಸ್ಪಾನಿಷ್ ದೇಶದವನಾಗಿದ್ದು, 1893ರಲ್ಲಿ ಜನಿಸಿದ. ಚಿತ್ರಕಲೆಯನ್ನು ಸ್ಕೂಲ್ ಆಫ್ ಫೈನ್ ಆರ್ಟ್ಸ್, ಬಾರ್ಸಿಲೋನಾದಲ್ಲಿ ಕಲಿತು, 1920ರಲ್ಲಿ ಪ್ಯಾರಿಸಿನಲ್ಲಿದ್ದಾಗ, ಪಿಕಾಸೋ ಮತ್ತು ಗ್ರಿಸ್ ಅವರ ಸಂಪರ್ಕ ಹಾಗೂ ಸರ್‌ರಿಯಲಿಸ್ಟ್ ತಂಡದೊಂದಿಗೆ ನಿಕಟವಾಗಿ, ಕಲಾಪ್ರದರ್ಶನದಲ್ಲಿ ಭಾಗವಹಿಸಿದ್ದ. ಅವನ ಸುಲಲಿತವಾದ ಕ್ಯಾಲಿಗ್ರಾಫಿ ಮತ್ತು ವರ್ಣಗಳ ಆಕಾರಗಳು ಚಿತ್ರದಲ್ಲಿ ಮುಖ್ಯವಾಗಿದ್ದವು. ಆನಂತರದ ಚಿತ್ರಗಳಲ್ಲಿ ವೈಯಕ್ತಿಕವಾದ ಭಾವನೆಯ ಆಕಾರಗಳನ್ನು ಚಿತ್ರಿಸಿದ.

ಜ್ಯೋತಿಭಟ್

ಜ್ಯೋತಿಭಟ್ 1934ರಲ್ಲಿ ಜನಿಸಿದ್ದು. ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದು, 1954ರಲ್ಲಿ ಇಟಲಿ ಮತ್ತು ಪ್ಯಾರಿಸ್‌ಗಳಲ್ಲಿ ಪ್ರಿಂಟ್ ಮೇಕಿಂಗ್‌ನಲ್ಲಿ ಹೆಚ್ಚಿನ ತರಬೇತಿ ಪಡೆದಿದ್ದಾರೆ. ಅವರ ಮೊದಲ ಚಿತ್ರಗಳು ಕ್ಯೂಬಿಸ್ಟ್ ಶೈಲಿಯಿಂದಿದ್ದು, ಅವುಗಳಲ್ಲಿ ವಿರೂಪತೆ ಕಾಣಬಹುದು. ಭಾವನಾತ್ಮಕತೆ ಮತ್ತು ಲಾಲಿತ್ಯ ಮುಖ್ಯವಾಗಿದ್ದು, ವೀರ್ಯವತ್ತಾದ ಬಾಹ್ಯರೇಖೆಗಳು ಹಾಗೂ ಚಪ್ಪಟೆಯಾದ ಆಕಾರಗಳು ಸುಲಲಿತವಾಗಿ ಹಾರಾಡುತ್ತಿದ್ದು. ಅವು ಒಂದರ ಮೇಲೆ ಒಂದಿದ್ದು, ಅಲ್ಲಲ್ಲಿ ವರ್ಣಗಳನ್ನು ಬಳಸುವರು. ಈ ಚಿತ್ರಗಳಲ್ಲಿ ಭಾವನಾತ್ಮಕ ಸೌಂದರ್ಯ ಮತ್ತು ಕುಶಲತೆಯ ಅಲಂಕರಣ ಕಾಣಬಹುದು.

ಆನಂತರದ ಚಿತ್ರಗಳು ಕೊಲಾಜ್ ಚಿತ್ರಗಳು. ಚಿತ್ರಗಳಲ್ಲಿ ವಿವಿಧ ಬಗೆಯ ವಸ್ತುಗಳ ಬಳಕೆಯಿಂದ ಆಸಕ್ತಿಯುತವಾಗಿರುವಂತೆ ರಚಿಸಿದ್ದಾರೆ. ಅವರ ಎಚ್ಚಿಂಗ್ ಕೃತಿಗಳಲ್ಲಿ ಕಲ್ಪನೆ ಮತ್ತು ಸಂಕೇತಗಳಿದ್ದು, ಪರಿಸರದ ಪ್ರಭಾವಗಳನ್ನು ಕಾಣಬಹುದು.

ಜೋಸೆಫ್ ವಿಲ್ಟನ್

ವಿಲ್ಟನ್ ಇಂಗ್ಲಿಷ್ ಶಿಲ್ಪಿಯಾಗಿದ್ದು, 1722ರಲ್ಲಿ ಜನಿಸಿದ. ರಾಯಲ್ ಅಕಾಡೆಮಿಯ ಸಂಸ್ಥಾಪಕ ಸದಸ್ಯ. ನೆದರ್‌ಲ್ಯಾಂಡ್, ಪ್ಯಾರಿಸ್, ರೋಮ್ ಮತ್ತು ಫ್ಲಾರೆನ್ಸ್‌ಗಳಲ್ಲಿ ತನ್ನ ಕಲಾಶಿಕ್ಷಣ ಪಡೆದು, ತನ್ನ ಶಿಲ್ಪಕೃತಿಗಳನ್ನು ವೆಸ್ಟ್‌ಮಿನಿಸ್ಟರ್‌ನಲ್ಲಿ ರಚಿಸಿದ್ದಾನೆ. ಅಲ್ಲದೆ ಭಾವಶಿಲ್ಪ ಮತ್ತು ಅಲಂಕಾರಿಕ ಕೆತ್ತನೆಯಲ್ಲಿ ಕುಶಲನಾಗಿದ್ದು 1803ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಟರ್ನರ್

ಜೋಸೆಫ್ ಟರ್ನರ್ 1775ರಂದು ಲಂಡನ್ನಿನಲ್ಲಿ ಜನಿಸಿದ. ಅವನ ತಂದೆ ಅಂಗಡಿಯಲ್ಲಿ ಮಾರಾಟ ಮಾಡಲು ನಿಯತಕಾಲಿಕಗಳನ್ನಿಟ್ಟಿದ್ದ, ನಿಯತಕಾಲಿಕಗಳಲ್ಲಿದ್ದ ಚಿತ್ರಗಳನ್ನು ಬಾಲ್ಯದಲ್ಲೇ ನಕಲು ಮಾಡಿದ. ಅನಂತರ ರಾಯಲ್ ಅಕಾಡೆಮಿಯಲ್ಲಿ ಚಿತ್ರಕಲೆ ಕಲಿತು, ಸ್ವಚಿತ್ರಗಳನ್ನು ಚಿತ್ರಿಸಿದ. ತಾನು ಸಂಚಾರ ಮಾಡಿದ ಕಡೆಯಲ್ಲೆಲ್ಲಾ ನೋಡಿದ ದೃಶ್ಯಗಳನ್ನು ಸ್ಕೆಚ್ ಮಾಡಿಕೊಳ್ಳುತ್ತಿದ್ದ. ರಾಯಲ್ ಅಕಾಡೆಮಿಯಲ್ಲಿ 'ಸಮುದ್ರದಲ್ಲಿ ಬೆಸ್ತರು' ಪ್ರದರ್ಶಿತವಾದುದಲ್ಲದೆ, ಅದರ ಸದಸ್ಯತ್ವವನ್ನು ಪಡೆದ. ತನ್ನ ಚಿತ್ರಗಳಲ್ಲಿ ತೀವ್ರ ವರ್ಣಗಳನ್ನು ಉಪಯೋಗಿಸಿದ. ಅನಂತರದ ಚಿತ್ರಗಳಲ್ಲಿ ಸೂಕ್ಷ್ಮತೆ ಹೆಚ್ಚಾಯಿತು. ಅಲ್ಲದೆ ಪ್ರಸಿದ್ಧ ಪ್ರಕೃತಿ ಚಿತ್ರಕಲಾವಿದನೆಂದು ಹೆಸರು ಪಡೆದ. ಟರ್ನರ್‌ನ ಚಿತ್ರಗಳಲ್ಲಿ ಬೆಳಕು, ವರ್ಣ ಮತ್ತು ವಾತಾವರಣಗಳ ವಿಶಿಷ್ಟತೆ ಪಡೆದಿದ್ದ. ಸಮುದ್ರವನ್ನು ಚಿತ್ರಿಸುವುದರಲ್ಲಿ ಅವನದು ಪಳಗಿದ ಕೈ. 1851ರಲ್ಲಿ ಮರಣಹೊಂದಿದ.

ಟೂಲೂ ಲಾತ್ರೆಕ್

ಲಾತ್ರೆಕ್ 1864ರಲ್ಲಿ ದಕ್ಷಿಣ ಫ್ರಾನ್ಸಿನ ಆಲ್ಬೀಯಲ್ಲಿ ಹುಟ್ಟಿದ. ಬಾಲ್ಯದಲ್ಲೇ ಚಿತ್ರ ಬರೆಯುವುದರಲ್ಲಿ ಆಸಕ್ತಿ. ತಾನು ಸಂದರ್ಶಿಸಿದ ಸ್ಥಳಗಳನ್ನು ಚಿತ್ರಿಸುತ್ತಿದ್ದ ಹಾಗೂ ತಾನು ಕಂಡ ವ್ಯಕ್ತಿಗಳನ್ನು ಚಿತ್ರಿಸುತ್ತಿದ್ದ. ತೈಲವರ್ಣ, ಜಲವರ್ಣ ಮುಂತಾದುವುಗಳಲ್ಲಿ ಪರಿಣತಿ ಪಡೆದಿದ್ದು, ಅವನ ಕಲೆಯ ಮೇಲೆ ಜಪಾನಿನ ಮರ ಕೆತ್ತನೆ ಮತ್ತು ದಗಾನ ಪ್ರಭಾವ ಕಾಣಬಹುದು. ಉಪಹಾರ ಮಂದಿರವೊಂದರ ಜಾಹೀರಾತಿಗಾಗಿ ಭಿತ್ತಿಚಿತ್ರಗಳನ್ನು ಬರೆದುಕೊಟ್ಟ. ಅವು ಮುದ್ರಣವಾದ ನಂತರ ಹೆಸರು ಪಡೆದವು. ಚಿತ್ರಲೇಖನ ಕಲೆಯನ್ನು ರೂಪಿಸುವುದರಲ್ಲಿ ಜನಪ್ರಿಯನಾದ. ಆರೋಗ್ಯ ಚೆನ್ನಾಗಿಲ್ಲದೆ ಚಿಕಿತ್ಸೆ ಪಡೆಯುತ್ತಿದ್ದಾಗ ಸರ್ಕಸ್ಸಿನ ಚಿತ್ರಗಳನ್ನು ಬರೆದು, 1901ರಲ್ಲಿ ಮರಣಹೊಂದಿದ.

ಟಿಷನ್

ಟಿಷನ್ 1477ರಲ್ಲಿ ಇಟಲಿಯಲ್ಲಿ ಜನಿಸಿದ. ಅವನು ವೆನಿಸ್‌ನಲ್ಲಿ ಕಲೆಯನ್ನು ಕಲಿತ. ಅವನು ರಚಿಸಿರುವ ಚಿತ್ರಗಳು ಯೂರೋಪಿನ ಅರಮನೆ, ಭವನ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಸ್ತುಸಂಗ್ರಹಾಲಯಗಳಲ್ಲಿವೆ. ಪ್ರಕೃತಿಚಿತ್ರಗಳು ಮತ್ತು ಪೌರಾಣಿಕ ವ್ಯಕ್ತಿಗಳ ಚಿತ್ರಣದಲ್ಲಿ ವಿಶೇಷ ಪರಿಣತಿ ಪಡೆದಿದ್ದ ಟಿಷನ್. ಅವನು ರಚಿಸಿದ ನಗ್ನಚಿತ್ರಗಳು ಪ್ರಖ್ಯಾತವಾಗಿವೆ. ಅವನಿಗೆ ಬೇಕಾದ ಪರಿಣಾಮ ಕಂಡುಬರುವವರೆಗೂ ವರ್ಣ ಪ್ರಯೋಗ ನಡೆಸುತ್ತಲೇ ಇದ್ದ. ವಿಶಿಷ್ಟ ರೀತಿಯಲ್ಲಿ ಬೆಳಕನ್ನು ಹೀರುವಂತೆ ಪ್ರತಿ ಫಲಿಸುವಂತೆ ಮಾಡಲು ಪಾರದರ್ಶಕ ಪದರಗಳನ್ನು ಕೂಡಿಸುತ್ತಿದ್ದ. ಟಿಷನನು ಚಿತ್ರ ರಚಿಸುವಾಗ, ನೇರವಾಗಿ ವರ್ಣವನ್ನು ಎತ್ತಿಕೊಂಡು ಕುಂಚದಿಂದ ಅದಕ್ಕೆ ಬೇಕಾದ ಆಕಾರ ಕೊಡುತ್ತಿದ್ದ. ಅವನ ಚಿತ್ರಗಳಲ್ಲಿನ ಮುಖಗಳು ಸಜೀವವಾಗಿರು ವಂತೆ, ಮನುಷ್ಯರ ದೇಹದ ಚಿತ್ರಗಳಲ್ಲಿ ಉಬ್ಬಿ ಕಾಣುವ ರಕ್ತನಾಳಗಳು, ಮುಂತಾದವು ಗಳಿಗೆ ಹೆಚ್ಚು ಮಹತ್ವ ಕೊಟ್ಟಿದ್ದಾನೆ. ಅವನು 1576ರಲ್ಲಿ ಮರಣಹೊಂದಿದ.

ದಗಾ

ದಗಾ 1834ರಲ್ಲಿ ಪ್ಯಾರಿಸಿನಲ್ಲಿ ಜನಿಸಿದ. ಚಿತ್ರಕಲೆಯಲ್ಲಿ ಶಾಸ್ತ್ರೀಯ ರೀತಿಯ ತರಬೇತಿ ಪಡೆದು ಇಟಲಿಯಲ್ಲಿ ಶಿಕ್ಷಣ ಮುಗಿಸಿ ಹಿಂದಿರುಗಿ ಬಂದು, ಪ್ಯಾರಿಸಿನಲ್ಲಿ ಸಮಷ್ಟಿ ಪರಿಣಾಮವಾದಿಗಳಿಂದ ಪ್ರಭಾವಿತನಾಗಿ, ಅವರೊಡನೆ ಕಲೆಯ ವಿಷಯ ಚರ್ಚಿಸುತ್ತಿದ್ದ. ವಸ್ತು ಯಾವುದೇ ಆಗಿರಲಿ, ಅದರ ಮೇಲೆ ಬೆಳಕು ಬೀಳುತ್ತಿದ್ದರೆ ಅದು ಚಿತ್ರರಚನೆಗೆ ಯೋಗ್ಯವಾಗುತ್ತದೆ. ರಂಗದ ಮೇಲೆ ನರ್ತಿಸುತ್ತಿರುವ ಬ್ಯಾಲೆ ಕಲಾವಿದೆಯರು, ಹೊಳೆಯುವ ಮೈಕಟ್ಟಿನ ಕುದುರೆಗಳು, ಹೆಂಗಸರ ವಿವಿಧ ಭಂಗಿಗಳು ಇವು ಅವನ ಚಿತ್ರದ ವಸ್ತುಗಳು. ಅವನ ಚಿತ್ರಗಳಲ್ಲಿ ಕುಂಚ ಅತಿ ಸಮರ್ಥವಾಗಿ ಕೆಲಸ ಮಾಡುತ್ತಿತ್ತು. ಚಿತ್ರಗಳಲ್ಲಿ ಚಟುವಟಿಕೆ ಹಾಗೂ ಕ್ಷಣಿಕ ಚಲನೆಗೆ ಮಹತ್ವದ ಸ್ಥಾನ. ಬಣ್ಣದ ಕಡ್ಡಿ, ಇದ್ದಲು, ತೈಲವರ್ಣಗಳಲ್ಲಿ ಪ್ರಭುತ್ವ ಪಡೆದಿದ್ದ ದಗಾ 1917ರಲ್ಲಿ ಮರಣಹೊಂದಿದ.

ಧರ್ಮನಾರಾಯಣ ದಾಸಗುಪ್ತ

ದಾಸಗುಪ್ತ ತ್ರಿಪುರಾದಲ್ಲಿ 1939ರಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು 1961ರಲ್ಲಿ ಶಾಂತಿನಿಕೇತನದಿಂದ ಪಡೆದಿದ್ದಾರೆ. ಮನುಷ್ಯಾಕೃತಿಗಳು ಗೊಂಬೆಗಳಂತಿದ್ದು, ಚಿತ್ರಾತ್ಮಕವಾದ ಕಲ್ಪನೆಗಳನ್ನು ಶಕ್ತಿಯುತವಾದ ದೃಶ್ಯಮಾಧ್ಯಮದಲ್ಲಿ ಸ್ವಾಭಾವಿಕವಾದ ರೂಪಗಳಿದ್ದು, ಇವುಗಳಿಂದ ಒಂದು ರೀತಿಯ ಸಂದೇಶ ಅವರ ಚಿತ್ರಗಳಲ್ಲಿರುತ್ತದೆ. ಪಟಚಿತ್ರಗಳಿಂದ ಸ್ಫೂರ್ತಿ ಪಡೆದಿದ್ದರೂ, ನಿರ್ದಿಷ್ಟವಾದ ರಚನೆಯಿಂದ ಕೂಡಿದ್ದು, ಹೊಸ ಅನುಭವ ನೀಡುತ್ತದೆ ಮತ್ತು ನಮ್ಮ ಪುರಾತನವಾದ ಸಂಸ್ಕೃತಿಯಿಂದ, ಹೊಸದನ್ನು ನಿರೂಪಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದಾವಿರ್‌ವಾಲ ಎ ಎಂ.

ದಾವಿರ್‌ವಾಲಾ 1922ರಲ್ಲಿ ಮುಂಬಯಿನಲ್ಲಿ ಜನಿಸಿದ್ದು, ಸ್ವಇಚ್ಛೆಯಿಂದ ಶಿಲ್ಪವನ್ನು ಕಲಿತು, ಮರ, ಕಲ್ಲು, ಅಮೃತಶಿಲೆಯ ಕೆತ್ತನೆ ಮುಂತಾದ ಮಾಧ್ಯಮಗಳಲ್ಲಿ ಪ್ರಭುತ್ವವನ್ನು ಪಡೆದಿದ್ದ ಅವರು, ಭಾರತದ ಸಮಕಾಲೀನ ಶಿಲ್ಪಕಲೆಯಲ್ಲಿ ತಮ್ಮ ಸ್ಥಾನವನ್ನು ಪಡೆದಿದ್ದರು. ಮನುಷ್ಯಾಕೃತಿಗಳ ಆಕಾರದ ಶಿಲ್ಪಗಳು ನಿಂತಿರುವಂತೆ, ಎತ್ತರವಾಗಿ, ತೇಲಾಡುತ್ತಿರುವಂತೆ, ಮಲಗಿರುವಂತೆ ಇರುತ್ತವೆ. ವಿವಿಧ ಮಾಧ್ಯಮಗಳಲ್ಲಿ ಪ್ರಯೋಗ ನಡೆಸಿ, ಬಹಳಷ್ಟು ಶಿಲ್ಪಗಳಲ್ಲಿ ಚಲನೆ ಮುಖ್ಯವಾಗಿದ್ದು, ಅಲ್ಯೂಮಿನಿಯಂನಿಂದ ರಚಿಸಿದ ಶಿಲ್ಪಕೃತಿಗಳಲ್ಲಿ ಜಾಮಿತಿಯ ಆಕಾರಗಳು ಮತ್ತು ಕಬ್ಬಿಣದ ತುಣುಕುಗಳನ್ನು ಸಂಯೋಜಿಸಿ ರಚಿಸಿದ ಶಿಲ್ಪಗಳಲ್ಲಿ ಹೊಸ ಅಭಿವ್ಯಕ್ತಿಯನ್ನು ಕಾಣಬಹುದು.

ಡಿರೈನ್ ಆಂಡ್ರೆ

ಫ್ರೆಂಚ್ ಕಲಾವಿದನಾದ ಅವನು 1880ರಲ್ಲಿ ಹುಟ್ಟಿದ. ತನ್ನ ಕಲಾಶಿಕ್ಷಣವನ್ನು ಅಕಾಡೆಮಿ ಕ್ಯಾರಿಯರ್‌ನಲ್ಲಿ ಪಡೆದ. ಫಾವಿಸಂ ಪಂಥದವರಲ್ಲಿ ಒಬ್ಬ ಹಾಗೂ ಮಾಟಿಸ್‌ನ ಚಿತ್ರಗಳಿಂದ ಪ್ರಭಾವಿತನಾಗಿದ್ದು, ಕೆಲವು ಕ್ಯೂಬಿಸ್ಟ್ ಚಿತ್ರಗಳನ್ನು ರಚಿಸಿದ್ದಾನೆ. ಅವನು 1954ರಲ್ಲಿ ತೀರಿಕೊಂಡ.

ಡಿವಾಕ್ಸ್‌ಪಾಲ್

ಬೆಲ್ಜಿಯನ್ ಚಿತ್ರಕಲಾವಿದನಾದ ಅವನು 1897ರಲ್ಲಿ ಜನಿಸಿದ್ದು, ಸರ್‌ರಿಯಲಿಸ್ಟ್ ಚಳವಳಿಯಲ್ಲಿ ಭಾಗವಹಿಸಿದ್ದ ಹಾಗೂ ಮೊದಲು ವಾಸ್ತುಶಿಲ್ಪ ಅಭ್ಯಾಸಮಾಡಿ; ಅನಂತರ ಬ್ರುಸೆಲ್‌ನ ಕಲಾಶಾಲೆಯಲ್ಲಿ ಕಲೆ ಕಲಿತ. ಪ್ರಾರಂಭದ ಚಿತ್ರಗಳು ಅಭಿವ್ಯಕ್ತಿ ಪಂಥಕ್ಕೆ ಸೇರಿವೆ. ನಂತರದ ಚಿತ್ರಗಳು ಸರ್‌ರಿಯಲಿಸ್ಟ್ ಶೈಲಿಯಲ್ಲಿ ರಚಿತವಾಗಿವೆ, ವಾಸ್ತುಶಿಲ್ಪದ ಕಟ್ಟಡಗಳಲ್ಲಿ ನಗ್ನ ಮಹಿಳೆಯರು, ಕೆಲವರಿಗೆ ಪೋಷಾಕು, ಅಸಮಂಜಸತೆ, ಸ್ವಪ್ನವಿರುವಂತೆ ಚಿತ್ರಗಳನ್ನು ರಚಿಸಿದ್ದಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ದೇವರಾಜ ಡಿ.

1944ರಲ್ಲಿ ಆಂಧ್ರಪ್ರದೇಶದ ದರ್ಮೋಗುಡಂನಲ್ಲಿ ಹುಟ್ಟಿದ ದೇವರಾಜು ಅವರು 1959ರಲ್ಲಿ ಹೈದ್ರಾಬಾದಿನ ಸರ್ಕಾರಿ ಕಲಾಶಾಲೆ ಸೇರಿದರು. 1966-68 ರಲ್ಲಿ ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿಯ ಶಿಷ್ಯವೇತನ ಪಡೆದು, ಬರೋಡಾದಲ್ಲಿ ಕಲಾಭ್ಯಾಸ. 1975ರಲ್ಲಿ ಬ್ರಿಟಿಷ್ ಕೌನ್ಸಿಲ್ ಶಿಷ್ಯವೇತನ ಪಡೆದು ಲಂಡನ್ನಿನ ಚೇಲಿಸೀ ಕಲಾಶಾಲೆಯಲ್ಲಿ ಕಲಿತರು. 1977ರಲ್ಲಿ ದೆಹಲಿಯ ಲಲಿತಕಲಾ ಅಕಾಡೆಮಿಯ ಗ್ರಹಿ ಸ್ಟುಡಿಯೋದಲ್ಲಿ ಗ್ರಾಫಿಕ್ ವಿಭಾಗದ ಮುಖ್ಯಸ್ಥರಾಗಿದ್ದಾರೆ. ತೈಲ ಮತ್ತು ಗ್ರಾಫಿಕ್ ಮಾಧ್ಯಮದಲ್ಲಿ ಕೃತಿಗಳನ್ನು ರಚಿಸಿದ್ದು, ಅವರು ಪ್ರಾರಂಭದಲ್ಲಿ ಹೈದ್ರಾಬಾದಿನ ಬಗ್ಗೆ ಪ್ರಕೃತಿಚಿತ್ರಗಳನ್ನು ರಚಿಸಿದ್ದಾರೆ. ಲಂಡನ್, ಬರ್ಮಿಂಗ್‌ಹ್ಯಾಂ, ಅಂತರ ರಾಷ್ಟ್ರೀಯ ಬಿನಾಲೆ - ಯಗೋಸ್ಲೋವಿಯಾ, ನಾರ್ವೆ, ಇಟಲಿ ಹಾಗೂ ಐದನೆ ಟ್ರಿನಾಲೆ - ಇಂಡಿಯಾ ಹಾಗೂ ಅನೇಕ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಹೆಚ್ಚಾಗಿ ಗ್ರಾಫಿಕ್ ಕೃತಿಗಳಿಗೆ ಹೆಸರು ಪಡೆದಿದ್ದಾರೆ. 1983ರಲ್ಲಿ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಅವರು ತಮ್ಮ ಇತ್ತೀಚಿನ ಚಿತ್ರಗಳಲ್ಲಿ 'ಪ್ರಣಾಮ' ಮಾಲಿಕೆಯಲ್ಲಿ ಬಂಡೆ, ಪಕ್ಷಿ, ಪ್ರಾಣಿಗಳು, ಗಣೇಶ ಮುಂತಾದುವುಗಳನ್ನು ಸಾಂಕೇತಿಕವಾಗಿ ಉಪಯೋಗಿಸಿದ್ದಾರೆ.

ಡೇವಿಸ್ ಸೂರತ್

ಡೇವಿಡ್ ಸೂರತ್ 1894ರಲ್ಲಿ ಜನಿಸಿದ್ದು ಅಮೆರಿಕಾದ ಚಿತ್ರ ಮತ್ತು ಗ್ರಾಫಿಕ್ ಕಲಾವಿದ. ಆವನ ಮೊದಲ ಚಿತ್ರಗಳು ವಾಸ್ತವಿಕವಾಗಿದ್ದು, ಅನಂತರದ ಚಿತ್ರಗಳಲ್ಲಿ ಕ್ಯೂಬಿಸ್ಟ್ ಪ್ರಭಾವ ಕಾಣಬಹುದು. ಸ್ಟಿಲ್‌ಲೈಫ್ ಚಿತ್ರಗಳನ್ನು ಅಮೂರ್ತವಾಗಿ ರಚಿಸಿ, ಅವುಗಳಲ್ಲಿ ಚಪ್ಪಟೆ, ಉಜ್ವಲ ವರ್ಣಗಳು ಮುಖ್ಯವಾಗಿದ್ದವು.

ಡೇ ಕೂನಿಂಗ್

ಡೇ ಕೂನಿಂಗ್ 1904ರಲ್ಲಿ ಜನಿಸಿದ, ಡಚ್ ಚಿತ್ರಕಲಾವಿದ. ಡೇ ಸ್ಟಿಲ್ ಮತ್ತು ಪ್ಲೆಮಿಷ್ ಅಭಿವೃದ್ಧಿ ಕಲೆಯಿಂದ ಪ್ರಭಾವಿತನಾಗಿ 1926ರಲ್ಲಿ ಅಮೆರಿಕಾಕ್ಕೆ ಬಂದು, ಅಮೂರ್ತ ಅಭಿವ್ಯಕ್ತ ಚಿತ್ರಕಲಾವಿದರ ಸಮೂಹವನ್ನು ಸೇರಿ, ಅದರ ಪ್ರಮುಖ ಸದಸ್ಯನಾಗಿದ್ದ. ಆವನ ಮಹಿಳೆ ಮಾಲಿಕೆಯ ಚಿತ್ರಗಳಲ್ಲಿ ಹಿಂಸಾತ್ಮಕವಾದ ಕಲ್ಪನೆಗಳು ಮತ್ತು ತಂತ್ರದಲ್ಲಿ ಸಂವೇದನೆಗಳನ್ನು ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡೆಲಾಕ್ರಾಕ್ಸ್

ಡೆಲಾಕ್ರಾಕ್ಸ್ 1798ರಲ್ಲಿ ಹುಟ್ಟಿದ್ದು, ಫ್ರೆಂಚ್ ದೇಶದ ರೊಮ್ಯಾಂಟಿಕ್ ಚಿತ್ರ, ಲಿಥೋಗ್ರಾಫರ್, ಬರಹಗಾರ ಮತ್ತು ಕಲಾವಿಮರ್ಶಕ. ಪ್ರಕೃತಿ ಮತ್ತು ವಾಸ್ತವ ದಿಂದ ಕೂಡಿದ ಹಾಗೂ ಸಾಹಿತ್ಯ ವಿಷಯಗಳ ಮೇಲೆ ಚಿತ್ರ ರಚಿಸಿದ್ದು, ಗ್ರಾಫಿಕ್ ಮತ್ತು ಚಿತ್ರದಲ್ಲಿ ವರ್ಣದ ಬಳಕೆ ಮುಖ್ಯ. ಪ್ರಾಣಿಗಳ ಸಂಯೋಜನೆಯ ಚಿತ್ರ ಗಳು, ಭಿತ್ತಿಚಿತ್ರ ಜಲವರ್ಣ ಚಿತ್ರಗಳನ್ನು ರಚಿಸಿದ್ದಾನೆ.

ಡೇವಿಡ್ ಆಲ್‌ಪಾರೋ ಸಿಕ್ಯೂಯಿರ್ಸ್

ಡೇವಿಡ್ 1896ರಲ್ಲಿ ಜನಿಸಿದ್ದು, ಮೆಕ್ಸಿಕನ್ ಚಿತ್ರಕಲಾವಿದ ಹಾಗೂ ಸಮ ಕಾಲೀನ ಭಿತ್ತಿಚಿತ್ರರಚನೆಯ ಪ್ರಸಿದ್ಧ ಕಲಾವಿದ. ಅವನು ಮೆಕ್ಸಿಕೋ ದೇಶದ ಸೇನೆಯು ನಡೆಸುತ್ತಿದ್ದ ಬಲಾತ್ಕಾರ, ಬಂಧನ, ಪ್ರಕ್ಷುಬ್ಧದ ವಿರುದ್ಧ ದಂಗೆಯೆದ್ದಿರುವ ಚಿತ್ರಗಳನ್ನು ರಚಿಸಿದ್ದಾನೆ ಹಾಗೂ ಜನರ ಆಕ್ರಂದನ, ನೋವು ಮುಂತಾದ ಸಾಮಾಜಿಕ ವಿಷಯಗಳನ್ನು ಚಿತ್ರಗಳಲ್ಲಿ ಮೂಡಿಸಿದ್ದಾನೆ. ದಂಗೆಯೆದ್ದ ಸಮೂಹ ಜನರ ಅತಿ ದೊಡ್ಡ ಭಿತ್ತಿಚಿತ್ರಗಳನ್ನು ರಚಿಸಿದ್ದು, ವಿವಿಧ ಮಾಧ್ಯಮ ಮತ್ತು ಶೈಲಿಗಳನ್ನು ಬಳಸಿದ್ದಾನೆ. ಅವನು 1974ರಲ್ಲಿ ತೀರಿಕೊಂಡ.

ದೇವಿಪ್ರಸಾದ್‌ರಾಯ್ ಚೌಧುರಿ

ಚೌಧುರಿಯವರು ಜಮೀನ್ದಾರ್ ಕುಟುಂಬದಲ್ಲಿ 1899ರಲ್ಲಿ ತಾಜ್‌ತ್, ಬಂಗಾಳ ದಲ್ಲಿ ಜನಿಸಿದ್ದು, ಕಲ್ಕತ್ತಾದ ಖೀಲತ್ ಚಂದ್ರ ಸಂಸ್ಥೆಯಲ್ಲಿ ಚಿತ್ರ ಮತ್ತು ಶ್ಲೇ ಮಾಡ ಲಿಂಗ್‌ನಲ್ಲಿ ತರಬೇತಿ ಹಾಗೂ ಅನಂತರ ಅಬನೀಂದ್ರನಾಥ ಟಾಗೂರರ ಶಿಷ್ಯರಾದರು, ಶಿಲ್ಪಕಲೆಯಲ್ಲಿ ಸ್ವಂತಿಕೆಯನ್ನು ರೂಪಿಸಿಕೊಂಡರು, ಮದ್ರಾಸಿನ ಸರಕಾರಿ ಕಲಾಶಾಲೆಯ ಪ್ರಿನ್ಸಿಪಾಲರಾಗಿದ್ದರು. 1953ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿ ನೇಮಕವಾದರು. ಚಿತ್ರ, ಶಿಲ್ಪಕಲೆಯಲ್ಲಿ ಪ್ರಭುತ್ವ ಪಡೆದಿದ್ದು, ಶಿಲ್ಪಗಳಲ್ಲಿ ವಾಸ್ತವಿ ಕತೆಯ ಸಂಪ್ರದಾಯದ ಲಕ್ಷಣಗಳನ್ನು ಕಾಣಬಹುದು. ಚಿತ್ರಗಳಲ್ಲಿ ನಯ, ಸೂಕ್ಷ್ಮ ವಿಚಾರ ಹಾಗೂ ಜೀವನ ಸೌಂದರ್ಯ, ವಿಲಾಸ, ಮಾರ್ದವತೆಗಳನ್ನು ಕಾಣಬಹುದು. ತಮ್ಮ ಶಿಲ್ಪಗಳನ್ನು ವಾಸ್ತುಶಿಲ್ಪಕ್ಕೆ ಸಂಬಂಧವನ್ನು ಕಲ್ಪಿಸುತ್ತಾ ಪ್ರತಿಮಾ ಕಲೆಯಲ್ಲಿ ಪ್ರಭುತ್ವ ಪಡೆದಿದ್ದರು. ಶಿಲ್ಪಗಳಲ್ಲಿ ವ್ಯಕ್ತಿತ್ವ, ಸೃಷ್ಟಿ ನೈಪುಣ್ಯ, ಭಾವಾವೇಷ ಮತ್ತು ಜೀವಂತ ಕಳೆಯನ್ನು ಸೃಜಿಸಿದ್ದಾರೆ. ಅವರ ಪ್ರಧಾನ ಭಾವಶಿಲ್ಪಗಳಲ್ಲಿ ವ್ಯಕ್ತಿಯ ಭಾವ, ಉಡುಗೆ ತೊಡುಗೆ ಹಾಗೂ ಅಭಿವ್ಯಕ್ತಿ ಮುಖ್ಯವಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡೇವಿಡ್ ಹಾಕ್ನಿ

ಹಾಕ್ನಿ 1937ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದ್ದು, ಲಂಡನ್ನಿನ ರಾಯಲ್ ಕಾಲೇಜ್ ಆಫ್ ಆರ್ಟ್ ಅಕಾಡೆಮಿಯಲ್ಲಿ ಶಿಕ್ಷಣ ಪಡೆದ. ಅಲ್ಲಿ ಕಲಾವಿದ ಆರ್. ಬಿ. ಕಿತಾಜ್‌ನ ಭೇಟಿಯಿಂದ ಪ್ರಭಾವಿತನಾಗಿ, ಮನುಷ್ಯಾಕೃತಿ ಮತ್ತು ಸಾಹಿತ್ಯದ ಮೂಲದಿಂದ ಚಿತ್ರಗಳನ್ನು ರಚಿಸಿದ. ಎಚ್ಚಿಂಗ್ ಮಾಧ್ಯಮದಲ್ಲೂ ಕೃತಿಗಳನ್ನು ರಚಿಸಿ, ಅನಂತರ ಹಾಕ್ನಿಯ ಬೆಳವಣಿಗೆಯಲ್ಲಿ ಪಿಕಾಸೋವಿನ ಪ್ರಭಾವವಾಯಿತು. ಕ್ಯಾಲಿಫೋರ್ನಿಯಾದಲ್ಲಿ ನೆಲಸಿದ ಮೇಲೆ, ಅಲ್ಲಿನ ಪರಿಸರ ಆವನ ಚಿತ್ರದ ವಸ್ತುಗಳಾಗಿ, ಯಥಾರ್ಥ ನಿರೂಪಣಾ ಪದ್ಧತಿಯಲ್ಲಿ ಚಿತ್ರಗಳನ್ನು ರಚಿಸಿದ. ಛಾಯಾಚಿತ್ರಗಳೆನ್ನು ತೆಗೆದು ಕಲೆಯಲ್ಲಿ ಸಂಕೀರ್ಣತೆಯ ಪ್ರಯೋಗಗಳನ್ನು ನಡೆಸಿದ, ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದ ಕಲಾವಿದ.



ಡೇವಿಡ್ ಹಾಕ್ನಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಡೊನಾಟೆಲೋ

ಡೊನಾಟೆಲೋ ಫ್ಲಾರೆನ್ಸಿನಲ್ಲಿ 1386ರಲ್ಲಿ ಹುಟ್ಟಿದ. ಹದಿನೈದನೆ ಶತಮಾನದ ಶ್ರೇಷ್ಠ ಶಿಲ್ಪಿ. ತನ್ನ ಇಪ್ಪತ್ತನೆಯ ವಯಸ್ಸಿಗೆ ಫ್ಲಾರೆನ್ಸಿನ ಇಗರ್ಜಿಗೆ ಅಮೃತಶಿಲೆಯ ವಿಗ್ರಹಗಳನ್ನು ರಚಿಸಿದ, ಜೀವ ತಳೆದಂತೆ ತೋರುವ ಅವನ ಶಿಲ್ಪಗಳು ಎಲ್ಲರ ಗಮನ ಸೆಳೆದವು. ಅವನ ಕಲ್ಪನಾಶಕ್ತಿ ಅದ್ಭುತ, ಸ್ವತಂತ್ರವಾದ ಶೈಲಿ, ಅವನ ಕಾಲದ ತದ್ರೂಪ ನಿರೂಪಣೆಯ ವಿಧಾನದಿಂದ ಅವನು ಪ್ರಭಾವಿತನಾಗಿದ್ದ. ಅವನ ಅನೇಕ ಶಿಲ್ಪಗಳು ಇಗರ್ಜಿಗಳಲ್ಲಿದ್ದು, ಏಸುಕ್ರಿಸ್ತ, ಸಂತ ಜಾನ್, ಸಂತ ಪೀಟರ್ ಮುಂತಾದುವು ಅವನ ಕೆಲವು ಪ್ರಸಿದ್ಧ ಶಿಲ್ಪಗಳು, ಕುದುರೆ ಸವಾರ 'ಗಟಾಮಲಾಟೊ' ಎಂಬ ಕಂಚಿನ ಶಿಲ್ಪ ಜಗತ್ಪ್ರಸಿದ್ಧವಾಗಿದೆ. ಉಲ್ಲಾಸಭರಿತ ಶಿಲ್ಪಗಳನ್ನು ರಚಿಸಿದ್ದು, ಮಾನವೀಯ ಹೃದಯದ ವ್ಯಕ್ತಿಯಾಗಿದ್ದ. ಅವನ ಶಿಲ್ಪಗಳು ಇತರ ಕಲಾವಿದರಿಗೆ ಮೇಲ್ಪಂಕ್ತಿಯಾಗಿ, ಚಿತ್ರಕಾರರು ಅವನ ರೀತಿಯನ್ನಷ್ಟೇ ಅಲ್ಲ, ಅವನ ವಿಗ್ರಹದ ಪ್ರತಿರೂಪವನ್ನೇ ತಮ್ಮ ಚಿತ್ರಗಳಲ್ಲಿ ಬಳಸುತ್ತಿದ್ದರು. ಅವನು 1466ರಲ್ಲಿ ನಿಧನ ಹೊಂದಿದ.

ಡ್ಯೂರೆರ್

ಆಲ್‌ಬ್ರೆಕ್ಟ್ ಡ್ಯೂರೆರ್ 1471ರಲ್ಲಿ ಜರ್ಮನಿಯ ನ್ಯೂರೆನ್‌ಬರ್ಗ್‌ನಲ್ಲಿ ಜನಿಸಿದ. ವ್ಯಕ್ತಿಚಿತ್ರ, ಪ್ರಕೃತಿಚಿತ್ರ, ಜಲವರ್ಣ, ಮರದ ಕೆತ್ತನೆ ಮತ್ತು ತಾಮ್ರ ಫಲಕದ ಕೊರೆತದ ಕೆಲಸಗಳಲ್ಲಿ ಡ್ಯೂರೆರ್ ಪರಿಣತನಾಗಿದ್ದ. ಬಾಲಕನಿಗೆ ಚಿತ್ರಕಲೆಯಲ್ಲಿ ಆಸಕ್ತಿಯಿದ್ದುದನ್ನು ಕಂಡ ಅವನ ತಂದೆ, ಅವನಿಗೆ ಪ್ರೋತ್ಸಾಹ ನೀಡಿದ. ಇಟಲಿಗೆ ಬಂದು, ಇಟಲಿಯ ಕಲೆಯಿಂದ ಪ್ರಭಾವಿತನಾಗಿ, ಕೆತ್ತನೆ ಕೆಲಸ ಪ್ರಾರಂಭಿಸಿ, ವೈಶಿಷ್ಟ್ಯವಾದ ಸೂಕ್ಷ್ಮತೆಯನ್ನು ತನ್ನ ಕೆತ್ತನೆಗಳಲ್ಲಿ ಚಿತ್ರಿಸಿದ. ತ್ರಾಮ ಫಲಕಗಳ ಮೇಲೆ ಕೊರೆದ ಚಿತ್ರಗಳು ಅಮೂಲ್ಯವಾದುವು. ಚಿತ್ರಗಳಲ್ಲಿರುವ ಕಲ್ಪನಾಶಕ್ತಿ ಮತ್ತು ಸೂಕ್ಷ್ಮ ವಿವರಗಳು ಗಮನಾರ್ಹವಾದುದು. ಅವನ ಸ್ವಚಿತ್ರಗಳು ಶ್ರೇಷ್ಠ ಕೃತಿಗಳಾಗಿವೆ. ಆತ ಪ್ರಕೃತಿಯ ಕಲಾವಿದ. 1528ರಲ್ಲಿ ಮರಣ ಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಂದಲಾಲ್ ಬೋಸ್

ನಂದಲಾಲರು 1882ರಂದು ಬಿಹಾರದ ಖಿರಗ್ಪುರದಲ್ಲಿ ಜನಿಸಿದರು. ತಾಯಿ ಕುಶಲಕಲೆಯಲ್ಲಿ ಪಳಗಿದವರು. ಗೊಂಬೆಗಳನ್ನು ಮಾಡಿ ಅವುಗಳಿಗೆ ಚಿತ್ತಾರಗಳನ್ನು ಬರೆದು ಅಲಂಕರಿಸುತ್ತಿದ್ದರು. ಬಹುಶಃ ನಂದಲಾಲರಿಗೆ ಕಲೆಯ ಬಗ್ಗೆ ಆಸಕ್ತಿ ಬೆಳೆಯಲು ತಾಯಿಯೇ ಕಾರಣ. ಶಾಲೆಯಲ್ಲಿ ಪುಸ್ತಕಗಳಲ್ಲಿ ಗೀಚುವುದು ಮತ್ತು ರೇಖಾಚಿತ್ರಗಳನ್ನು ರಚಿಸುತ್ತಿದ್ದರು. ಅವರು ಕಲ್ಕತ್ತಾ ಕಲಾಶಾಲೆಗೆ ಸೇರಿ, ಅಲ್ಲಿ ಅಬನೀಂದ್ರರ ಶಿಷ್ಯರಾದರು. ಅವರ ಪ್ರಾರಂಭದ ಕೃತಿಗಳಲ್ಲಿ ಅಲಂಕರಣದ ಮತ್ತು ನೇರವಾಗಿ ಅನುಭವಿಸಿದ ಅನುಭವಗಳು, ಗುಣಗಳು ಅವರ ಕೃತಿಗಳಲ್ಲಿ ಪೈತಳೆದಿವೆ. ಅವರ ಕಲೆ ಹಿಂದೂ ಧರ್ಮದ ಪ್ರತಿರೂಪ. ಅವರ ಬಹುತೇಕ ಕಲಾಕೃತಿಗಳು ಪ್ರಾಚೀನ ಶಿಲ್ಪಗುಣಗಳನ್ನು ಮೈಗೂಡಿಸಿಕೊಂಡು ಗಂಭೀರ ಮುದ್ರೆಯ ಭಾವದಲ್ಲಿವೆ. ಪೌರಾಣಿಕಕ್ಕೆ ಸಂಬಂಧಿಸಿದ ಶಿವನರೂಪ, ವಿಷ್ಣು, ಲಕ್ಷ್ಮಿ ಮುಂತಾದ ಚಿತ್ರಗಳಲ್ಲಿ ಭಾವ, ಕೋಮಲತೆ ಮತ್ತು ವರ್ಣಸಂಯೋಜನೆಗಳು ಭಾರತೀಯ ಕಲೆಯ ನೆನಪು ತರುತ್ತವೆ. ಶಾಂತಿನಿಕೇತನದ ಮುಖ್ಯಸ್ಥರಾಗಿ, ಅಲ್ಲಿನ ಕಲಾಭವನ ವಿಶ್ವದ ಗಮನ ಸೆಳೆಯಲು ಕಾರಣರಾದರು. ನಂದಲಾಲರು ಭಿತ್ತಿಚಿತ್ರ ರಚನೆಯಲ್ಲೂ ಪಳಗಿದವರು. ಕಾಂಗ್ರೆಸ್ ಅಧಿವೇಶನ ನಡೆದಾಗ, ಅರವತ್ತಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿ, ಅವುಗಳಲ್ಲಿ ಭಾರತೀಯ ಜೀವನವನ್ನು ಪ್ರತಿಬಿಂಬಿಸಿದ್ದಾರೆ.

ನಂದಗೋಪಾಲ್ ಎಸ್.

ನಂದಗೋಪಾಲ್ 1946ರಲ್ಲಿ ಬೆಂಗಳೂರಿನಲ್ಲಿ ಜನಿಸಿದ್ದು, ಭೌತಶಾಸ್ತ್ರದಲ್ಲಿ ಪದವಿ ಪಡೆದಿರುವ ಅವರು 1971ರಲ್ಲಿ ಮದ್ರಾಸಿನ ಸರ್ಕಾರಿ ಕಲಾಶಾಲೆಯಿಂದ ಡಿಪ್ಲೊಮೊ ಪಡೆದಿದ್ದಾರೆ. ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ತಮ್ಮ ಶಿಲ್ಪ ಕೃತಿಗಳನ್ನು ಪ್ರದರ್ಶಿಸಿರುವ ಅವರಿಗೆ 1978ರಲ್ಲಿ ಕೇಂದ್ರ ಲಲಿತ ಕಲಾ ಅಕಾಡೆಮಿ ಮತ್ತು ಕೇಂದ್ರ ಲಲಿತಕಲಾ ಅಕಾಡೆಮಿ ಸಂಘಟಿಸಿದ್ದ 4ನೇ ಟ್ರಿನಾಲೆ ಪ್ರಶಸ್ತಿಗಳು ಲಭಿಸಿವೆ. 1980-82ರಲ್ಲಿ ಹೋಮಿ ಭಾಭಾ ಫೆಲೋಷಿಪ್ ಸಹ ಪಡೆದಿರುವ ಅವರು ತಮ್ಮ ಪ್ರತಿಮೆಗಳನ್ನು ಸಾಂಪ್ರದಾಯಿಕವಾದ ಸಂಕೇತಗಳಿಂದ ಮತ್ತು ಅದಮ್ಯವಾದ ಕೌಶಲದಿಂದ ರಚಿಸುವರು. ಲೋಹದಿಂದ ರಚಿಸಿರುವ ಶಿಲ್ಪಗಳು ಅಲಂಕಾರಿಕವಾಗಿ, ತಾಂತ್ರಿಕವಾಗಿ, ಉತ್ತಮ ಮಟ್ಟದಿಂದ ಕೂಡಿದ್ದು, ತಾಂತ್ರಿಕತೆ ಇವರ ಶಿಲ್ಪಗಳ ವೈಶಿಷ್ಟ್ಯ. ಶಿಲ್ಪದ ಲೋಹದಲ್ಲಿ ಬೇಕಾದ ಆಕಾರಗಳು ಮತ್ತು ರಚನೆ, ತಂತಿಯಿಂದ ಪಟ್ಟಿಗಳು, ಕ್ಯಾಲಿಗ್ರಾಫಿಯ ಬಳಕೆ, ಆಕಾರಗಳ ಸರಳತೆ ಇವು ಮುಖ್ಯವಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಳಿನಿ ಮಲ್ಹಾನಿ

ನಳಿನಿ ಮಲ್ಹಾನಿ 1946ರಲ್ಲಿ ಹುಟ್ಟಿದ್ದು, ತಮ್ಮ ಕಲಾಭ್ಯಾಸವನ್ನು ಮುಂಬಯಿನ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಿಂದ 1969ರಲ್ಲಿ ಪಡೆದು. ಆಕೆ ಫ್ರೆಂಚ್ ಸರ್ಕಾರದ ಶಿಷ್ಯವೇತನವನ್ನು 1970 ರಿಂದ 72ರವರೆಗೂ ಪಡೆದು, ಪ್ಯಾರಿಸಿನಲ್ಲಿ ಕಲೆಯಲ್ಲಿ ಉನ್ನತ ಶಿಕ್ಷಣ ಪಡೆದಿದ್ದಾರೆ. ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಆಕೆಯ ಚಿತ್ರಗಳ ವ್ಯಕ್ತಿಗಳು ಅಂತರ್ಭಾವನೆಯಿಂದ ಕೂಡಿರುತ್ತವೆ ಮತ್ತು ಇತ್ತೀಚಿನ ಚಿತ್ರಗಳಲ್ಲಿ ಪ್ಯಾಂಟಸಿಯ ಕಲ್ಪನೆಗಳನ್ನು ಕಾಣಬಹುದು.

ನಸರೀನ್ ಮೊಹಮ್ಮೆದಿ

1937ರಲ್ಲಿ ಕರಾಚಿಯಲ್ಲಿ ಜನಿಸಿದ ನಸರೀನ್ ತಮ್ಮ ಕಲಾಶಿಕ್ಷಣವನ್ನು 1957ರಲ್ಲಿ ಲಂಡನ್ನಿನ ಸೇಂಟ್ ಮಾರ್ಟಿನ್ ಸ್ಕೂಲ್ ಆಫ್ ಆರ್ಟ್‌ನಿಂದ ಹಾಗೂ 1961-63ರಲ್ಲಿ ಫ್ರೆಂಚ್ ಶಿಷ್ಯವೇತನ ಪಡೆದು, ಪ್ಯಾರಿಸಿನಲ್ಲಿ ಗ್ರಾಫಿಕ್‌ಕಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಹಾಗೂ 1975, 1978ರ ಟ್ರಿನಾಲೆ, 1985ರಲ್ಲಿ ಪ್ಯಾರಿಸಿನಲ್ಲಿ ನಡೆದ 'ಭಾರತ ಉತ್ಸವ' ಮುಂತಾದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1976ರಲ್ಲಿ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಮತ್ತು 1981ರಲ್ಲಿ ಅತುಲ್ ಅವರು ಏರ್ಪಡಿಸಿದ್ದ ಅಖಿಲ ಭಾರತ ಕಲಾ ಪ್ರದರ್ಶನ ದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಅವರ ರೇಖಾ ಚಿತ್ರಗಳಲ್ಲಿ ಒಂದು ಶಿಸ್ತು ಮತ್ತು ವೈಯಕ್ತಿಕತೆ. ತಮ್ಮ ಅನುಭವಗಳನ್ನು ಚಿತ್ರದ ಅವಕಾಶದಲ್ಲಿ ಜಾಮಿತಿಯ ಆಕಾರ ಗಳಾದ, ತ್ರಿಕೋನಗಳು, ಆಯಾ, ಜಿಗ್‌ಜಾಗ್, ಚೌಕಗಳು, ಅಡ್ಡಪಟ್ಟಿ ಮುಂತಾದುವು ಗಳನ್ನು ರೇಖಾಚಿತ್ರದ ಮೂಲಕ ಚಿತ್ರಿಸಿ, ಲಯ ಮತ್ತು ಚಲನೆ ಕಾಣಬಹುದು.

ನಿಕೋಲಸ್ ರೋರಿಕ್

ರೋರಿಕ್ 1874ರಲ್ಲಿ ರಷ್ಯಾದ ಪೀಟರ್ಸ್‌ಬರ್ಗ್‌ನಲ್ಲಿ ಜನಿಸಿದ್ದು, ಕಾನೂನು ಪದವಿ ಓದುತ್ತಿದ್ದರೂ, ಕಲೆಯ ಕಡೆ ಗಮನ ಬಂದು, ಕಲಾಶಾಲೆಯಲ್ಲಿ ಶಿಕ್ಷಣ ಪಡೆದರು. ಕೆಲವು ಕಾಲ ಪ್ಯಾರಿಸಿನ ಕಲಾಶಾಲೆಯಲ್ಲಿ ವಿಶೇಷ ತರಬೇತಿ ಪಡೆದ ಅವರು ಜಲವರ್ಣ, ಟೆಂಪೆರಾ ಮಾಧ್ಯಮಗಳಲ್ಲಿ ಪರಿಣತಿ ಹೊಂದಿದ್ದು, ಹಿಮಾಲಯದ ಬಗ್ಗೆ ಅನೇಕ ಪ್ರಕೃತಿಚಿತ್ರಗಳನ್ನು ರಚಿಸಿದ್ದಾರೆ. ವರ್ಣ ಸಂಯೋಜನೆಯಲ್ಲಿ ವಿಶೇಷತೆ ಪಡೆದಿದ್ದ ಅವರು 1947ರಲ್ಲಿ ತೀರಿಕೊಂಡರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಿರೋಡೆ ಮಜುಮ್‌ದಾರ್

ಮಜುಂಮ್‌ದಾರ್ 1916ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ್ದು, ಬಾಲ್ಯದಲ್ಲೇ ಕಲೆಯಲ್ಲಿ ಆಸಕ್ತಿ ಮತ್ತು ಮನೆಯವರಿಂದ ಪ್ರೋತ್ಸಾಹ. 1929ರಲ್ಲಿ ಅಬನೀಂದ್ರನಾಥ ಟಾಗೂರರ ಓರಿಯಂಟಲ್ ಸೊಸೈಟಿ ಆಫ್ ಆರ್ಟ್‌ಗೆ ದಾಖಲಾದರು. 1946-48 ರಲ್ಲಿ ಫ್ರೆಂಚ್ ಸರ್ಕಾರದ ಶಿಷ್ಯವೇತನ ಪಡೆದು, ಹೆಚ್ಚಿನ ಕಲಾಶಿಕ್ಷಣಕ್ಕಾಗಿ ಫ್ರಾನ್ಸ್‌ಗೆ ತೆರಳಿ, ಅಲ್ಲಿ ಕಲೆಯ ವಿವಿಧ ತಂತ್ರಗಳನ್ನು ಕಲಿತು, ತಮ್ಮ ಕಲ್ಪನೆಗಳನ್ನು ಅಮೂರ್ತ ಮತ್ತು ಮನುಷ್ಯಾಕೃತಿಗಳ ಮೂಲಕ ಅಭಿವ್ಯಕ್ತಿಸಿ, ಅವುಗಳಲ್ಲಿ ರೇಖೆಗಳು ಪ್ರಧಾನವಾಗಿದ್ದು, ಲಯ ಹಾಗೂ ಚಲನೆ ಪ್ರಮುಖವಾಗಿದೆ.

ನೀಲೀಮಾ ಷೇಕ್

ನೀಲೀಮಾ 1945ರಲ್ಲಿ ದೆಹಲಿಯಲ್ಲಿ ಜನಿಸಿದ್ದು, ದೆಹಲಿ ವಿಶ್ವವಿದ್ಯಾನಿಲಯದಿಂದ 1965ರಲ್ಲಿ ಬಿ.ಎ. ಪದವಿಯನ್ನು, ಅನಂತರ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಿಂದ 1971ರಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿರುವ ಆಕೆ, ಪ್ರಸ್ತುತ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನ ಬರೋಡಾದಲ್ಲಿ ಉಪನ್ಯಾಸಕಿಯಾಗಿದ್ದಾರೆ. ತಮ್ಮ ಚಿತ್ರಗಳಲ್ಲಿ ಪರಿಸರದ ಚಿತ್ರಣವನ್ನು ಚಿಪ್ಪಿಸುವ ಆಕೆಯ ಇತ್ತೀಚಿನ ಚಿತ್ರಗಳು ಟೆಂಪರಾ ಮಾಧ್ಯಮದಿಂದ ರಚಿತವಾಗಿದ್ದು ಹಾಗೂ ರಾಜಸ್ತಾನಿ ಚಿಕಣಿ ಚಿತ್ರಗಳ ಪ್ರಭಾವ, ರೇಖೆ ಮತ್ತು ವರ್ಣ ಭಾವನೆಗಳನ್ನು ಅಭಿವ್ಯಕ್ತಿಸುವರು.

ಪಂಡಿತ್ ಎಸ್. ಎಂ.

1916ರಲ್ಲಿ ಗುಲ್ಬರ್ಗಾದಲ್ಲಿ ಜನಿಸಿದ್ದು, 1931ರಲ್ಲಿ ಮದರಾಸಿನ ಸರಕಾರಿ ಕಲಾಶಾಲೆಯಿಂದ ಡಿಪ್ಲೊಮೊ, ಅನಂತರ ಜೆ. ಜೆ. ಕಲಾಶಾಲೆಯಲ್ಲಿ ಡಿಪ್ಲೊಮೊ ಪಡೆದರು. ಭಾರತದಲ್ಲಿ ಪೋಸ್ಟರ್ ವರ್ಣಗಳ ಬಳಕೆಯಲ್ಲಿ ವಿಶೇಷ ಪರಿಣತಿ ಪಡೆದಿರುವವರಲ್ಲಿ ಅಗ್ರಗಣ್ಯರು. 1946ರಲ್ಲಿ ಕೆನಡಾದ ಟೊರೆಂಟೋದಲ್ಲಿ ನಡೆದ ಅಂತರರಾಷ್ಟ್ರೀಯ ಪ್ರದರ್ಶನದಲ್ಲಿ ಪಂಡಿತರು ರಚಿಸಿದ ರಕ್ಷಾಪುಟ ವಿನ್ಯಾಸಕ್ಕೆ ಪ್ರಶಸ್ತಿ ಪಡೆದಿದ್ದಾರೆ. ಅವರು ರಚಿಸಿರುವ ಪೌರಾಣಿಕ ಚಿತ್ರಗಳು ಬಹಳ ಜನಪ್ರಿಯವಾಗಿವೆ ಮತ್ತು ಭಾವಚಿತ್ರದಲ್ಲೂ ಸಿದ್ಧಿ ಪಡೆದಿದ್ದಾರೆ. 1968ರಲ್ಲಿ ಕನ್ಯಾಕುಮಾರಿಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸ್ಥಾಪಿಸಲು ಸ್ವಾಮಿ ವಿವೇಕಾನಂದರ ತೈಲಚಿತ್ರವನ್ನು ರಚಿಸಿಕೊಟ್ಟಿದ್ದಾರೆ. ಲಂಡನ್ ಮತ್ತು ಭಾರತದ ಪ್ರಮುಖ ಸ್ಥಳಗಳಲ್ಲಿ ಕಲಾಪ್ರದರ್ಶನಗಳನ್ನು ಮಾಡಿದ್ದು, ಜಲನ ಚಿತ್ರ ಪ್ರಪಂಚದ ದೃಶ್ಯಗಳ ಪ್ರಚಾರಕ್ಕೆ ಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ರಾಜ್ಯ ಸರ್ಕಾರ ಮತ್ತು 1982ರಲ್ಲಿ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ ಗಲ್ಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿವೆ.

ಫರ್ನಾಂಡ್ ಲೀಗರ್

ಲೀಗರ್ ಫ್ರೆಂಚ್ ಕಲಾವಿದನಾಗಿದ್ದು 1881ರಲ್ಲಿ ಹುಟ್ಟಿದ. ವಾಸ್ತುಶಿಲ್ಪದ ಅಲಂಕರಣದಲ್ಲಿ ತರಬೇತಿ ಪಡೆದಿದ್ದರೂ, ಪ್ಯಾರಿಸಿನ ಅನೇಕ ಸ್ಟುಡಿಯೋಗಳಲ್ಲಿ ಕಲೆ ಕಲಿತ. ಅವನ ಕ್ಯೂಬಿಸ್ಟ್ ಚಿತ್ರಗಳಲ್ಲಿ ವಿಕಾಗ್ರತೆ, ರಚನಾಕ್ಷಮದ ಸಾಮರ್ಥ್ಯ ಕಾಣ ಬಹುದು. ಸುರುಳಿ ಸುತ್ತಿಕೊಂಡಿರುವ ಘನತೆಯಲ್ಲಿ ದೀರ್ಘವಾದ ಸ್ಥಳ ಮತ್ತು ಯಾಂತ್ರಿಕ ವಸ್ತುಗಳಲ್ಲಿ ಸೌಂದರ್ಯ ಹಾಗೂ ಉಜ್ವಲವಾದ ವರ್ಣಗಳ ಬಳಕೆ ಕಾಣಬಹುದು. ಅವನು 1955ರಲ್ಲಿ ಮರಣಹೊಂದಿದ.

ಪಣಿಕ್ಕರ್ ಕೆ. ಸಿ. ಎಸ್.

ಪಣಿಕ್ಕರ್ ಅವರು ಕೊಯಮತ್ತೂರಿನಲ್ಲಿ 1911ರಲ್ಲಿ ಜನಿಸಿದರು. ಬಾಲ್ಯ ದಲ್ಲೇ ಅವರ ಮೇಲೆ ಪ್ರಭಾವ ಬೀರಿದ್ದು ಕೇರಳದ ನಿಸರ್ಗ ಸೌಂದರ್ಯ. ಕೆಲವು ಕಾಲದ ನಂತರ ಮದ್ರಾಸಿನ ಆರ್ಟ್ ಸ್ಕೂಲಿನಿಂದ ಶಿಕ್ಷಣ ಪಡೆದರು. ಜಲವರ್ಣದಲ್ಲಿ ಪಳಗಿದ ಅವರಿಗೆ ಬಣ್ಣದೊಡನೆ ಕುಂಚವನ್ನು ಆಡಿಸಿದಷ್ಟು ಸಂತೋಷ ಮತ್ತು ಬಣ್ಣ ಗಳ ಬಳಕೆಯಲ್ಲಿ ಅಗಾಧವಾದ ಪ್ರಗತಿ ಮತ್ತು ಪ್ರಯೋಗ ನಡೆಸಿದ್ದಾರೆ. ಅವರ ಮೊದಲ ಚಿತ್ರಗಳಲ್ಲಿ ವಿಕ್ಟೋರಿಯನ್ ಕಾಲದ ಭಾವನಾಪೂರ್ಣವಾದ ವಿಷಯಗಳು, ಕೆಲವು ಚಿತ್ರಗಳಲ್ಲಿ ಅಜಂತೆಯ ಭಿತ್ತಿಚಿತ್ರಗಳಲ್ಲಿ ಕಾಣುವ ವರ್ಣಸಂಯೋಜನೆ, ಸಮೃದ್ಧತೆ, ವೀರ್ಯವತ್ತಾದ ರೇಖೆಗಳು ಹಾಗೂ ಚಿಕಣಿ ಚಿತ್ರಗಳ ಪ್ರಭಾವ ಕಾಣ ಬಹುದು. ನಮ್ಮ ದೇಶದ ಪರಂಪರೆಯೊಂದಿಗೆ ಸಮಕಾಲೀನ ಕಲೆಯನ್ನು ರೂಪಿಸಿ ಕೊಂಡು ಚಿತ್ರಗಳಲ್ಲಿ ವರ್ಣಸಂಯೋಜನೆ, ತಂತ್ರವಿಧಾನ, ಮಿತವಾದ ಬಣ್ಣಗಳ ಬಳಕೆ ಮತ್ತು ಸಂಯೋಜನೆ ಇವುಗಳಲ್ಲಿ ವೈಯಕ್ತಿಕ ಮುದ್ರೆಯನ್ನು ಕಾಣಬಹುದು. ಅವರ ಕಲಾಕೃತಿಗಳಲ್ಲಿ ಮನುಷ್ಯರ ಚಿತ್ರಗಳು ಕುಬ್ಜಾಕೃತಿಯಲ್ಲಿದ್ದು, ತಲೆ ದೊಡ್ಡದಾಗಿದ್ದು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೀಳವಾದ ಕಣ್ಣುಗಳಿರುತ್ತವೆ ಮತ್ತು ಭಾರತೀಯ ಸಂಸ್ಕೃತಿಯಲ್ಲಿರುವ ಸಂಕೇತ, ಪ್ರತಿಮೆಗಳು, ಅಲಂಕರಣಗಳ ಅನ್ವೇಷಕ. ತಮ್ಮ ಜೀವಮಾನದ ಕೊನೆಯ ಕಾಲ ದಲ್ಲಿ ಆಧ್ಯಾತ್ಮದ ಕಡೆ ಹೆಚ್ಚು ಮನಸೋತು, ಅಮೂರ್ತ ಭಾವಗಳು, ಪ್ರತಿಮೆಗಳು, ಅಕ್ಷರಗಳನ್ನು ಚಿತ್ರಗಳಲ್ಲಿ ಬಳಸಿದ್ದಾರೆ. ನಮ್ಮ ದೇಶದ ತಾಂತ್ರಿಕ ಕಲೆಯನ್ನು ಮತ್ತೆ ಬೆಳಕಿಗೆ ತಂದು ಹೊಸ ಆಯಾಮ ನೀಡಿದವರು.

ಪರಮಜಿತ್ ಸಿಂಗ್

ಪರಮಜಿತ್ ಸಿಂಗ್ 1935ರಲ್ಲಿ ಅಮೃತಸರದಲ್ಲಿ ಜನಿಸಿದ್ದು, 1958ರಲ್ಲಿ ದೆಹಲಿಯ ಫೈನ್ ಆರ್ಟ್ ಪಾಲಿಟೆಕ್ನಿಕ್‌ನಿಂದ ಕಲೆಯಲ್ಲಿ ಪದವಿ ಪಡೆದಿದ್ದಾರೆ. ಅವರ ಪ್ರಕೃತಿಯ ಚಿತ್ರಗಳಲ್ಲಿ ವಾತಾವರಣವು ಕ್ರಿಯೆ ಮತ್ತು ಸಂಯೋಜನೆ ಸರಳವಾಗಿರುತ್ತವೆ ಹಾಗೂ ಪ್ರಕೃತಿ ಚಿತ್ರಗಳನ್ನು ಚಿಪ್ರಿಸುವ ಶೈಲಿ ಕುತೂಹಲಕಾರಿಯಾಗಿದ್ದು, ಆಸಕ್ತಿ ಯನ್ನುಂಟುಮಾಡುವ ವರ್ಣಗಳ ಬಳಕೆಯಿಂದ, ಒಂದು ರೀತಿಯ ವಾತಾವರಣವುಂಟು ಮಾಡುವರು. ಅವರ ಇತ್ತೀಚಿನ ಕೃತಿಗಳಲ್ಲಿ ವಸ್ತುವು, ಹೆಚ್ಚಾಗಿ ಶಿಲೆಗಳುಳ್ಳ ಪ್ರಕೃತಿ ದೃಶ್ಯಗಳಾಗಿದ್ದು, ಭ್ರಾಮಕತೆಯ ಭಾವನೆ ಕಾಣಬಹುದು. ಅವರಿಗೆ 1970ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಬಂದಿದೆ. ಅನೇಕ ಏಕವ್ಯಕ್ತಿ, ಸಮೂಹ ಕಲಾಪ್ರದರ್ಶನಗಳನ್ನು ನಡೆಸಿದ್ದಾರೆ. 'THE UNKNOWN' ಸಂಸ್ಥೆಯ ಸ್ಥಾಪಕರು.

ಪರಿತೋಷ್ ಸೇನ್

ಪರಿತೋಷ್ ಸೇನ್ 1918ರಲ್ಲಿ ಢಾಕ್ಕಾದಲ್ಲಿ ಹುಟ್ಟಿದ್ದು, ಮದ್ರಾಸಿನ ಕಲಾ ಶಾಲೆಯಿಂದ ಡಿಪ್ಲೊಮೊವನ್ನು ಪಡೆದಿದ್ದು, 'ಕಲ್ಕತ್ತಾ ಗ್ರೂಪ್'ನ ಸಂಸ್ಥಾಪಕ. ಪ್ಯಾರಿಸಿನ ಕಲಾಶಾಲೆಯಿಂದ ಚಿತ್ರ ಮತ್ತು ಭಿತ್ರಿಚಿತ್ರದಲ್ಲಿ ವಿಶೇಷ ತರಬೇತಿ ಪಡೆ ದಿದ್ದಾರೆ. ರಾಷ್ಟ್ರದ ಮತ್ತು ಅನೇಕ ವಿದೇಶಗಳ ಕಲಾಪ್ರದರ್ಶನಗಳಲ್ಲಿ ಭಾಗವಹಿ ಸಿರುವ ಅವರ ಚಿತ್ರಗಳಲ್ಲಿ ಮನುಷ್ಯಾಕೃತಿಗಳು ಪ್ರಧಾನವಾಗಿದ್ದು, ಪಟುವಾ ಚಿತ್ರ ಗಳಿಂದ ಪ್ರಭಾವಿತರಾಗಿದ್ದಾರೆ. ಚಿತ್ರಗಳಲ್ಲಿ ಸರಳವಾದ ಆಕಾರಗಳು ಮತ್ತು ಅಭಿ ವ್ಯಕ್ತಿತನ ಕಾಣಬಹುದು. ಮಾನವನಿಗೆ ಅವನ ಪರಿಸರದಲ್ಲಿ ಆಗುತ್ತಿರುವ ಸಾಮಾಜಿಕ ದುರಂತದ ವಿಷಯಗಳತ್ತ ಅವರ ಗಮನವಿದ್ದು, ಇದಕ್ಕೆ ಪ್ರತಿಕ್ರಿಯೆಯಾಗಿ ತಮ್ಮ ಕಲ್ಪನೆಗಳನ್ನು ಚಿತ್ರದಲ್ಲಿ ಮೂಡಿಸುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ರಭಾಕರ ಭಾರ್ವೆ

ಭಾರ್ವೆ 1936ರಲ್ಲಿ ಜನಿಸಿದ್ದು, 1959ರಲ್ಲಿ ಸರ್ ಜೆ. ಜೆ. ಕಲಾಶಾಲೆಯಿಂದ ಶಿಕ್ಷಣ ಪಡೆದಿದ್ದು, ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 1976ರಲ್ಲಿ ರಾಷ್ಟ್ರೀಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ 1980ರಲ್ಲಿ ಅದರ ಸದಸ್ಯ ರಾಗಿದ್ದರು. ಅವರು ತಮ್ಮ ಕಲ್ಪನೆಗಳನ್ನು ನಿಗೂಢವಾಗಿ, ಆಳವಾದ ಪದರಗಳ ಮೂಲಕ ಹಾಗೂ ಅಂತರ್ಭಾವಗಳನ್ನು ಗಾಳಿಪಟ, ಮೀನು, ಜಾಮಿತಿ ಆಕಾರಗಳು ತೇಲಾಡುತ್ತಿರುವಂತ, ಸಂಕೇತಗಳು, ವರ್ಣಗಳ ಮೂಲಕ ಅಭಿವ್ಯಕ್ತಿಸುತ್ತಾರೆ.

ಪ್ರದೋಷ್ ದಾಸಗುಪ್ತ

ದಾಸಗುಪ್ತ ಢಾಕ್ಕಾದಲ್ಲಿ 1912ರಲ್ಲಿ ಜನಿಸಿದ್ದು, 1932ರಲ್ಲಿ ಕಲ್ಕತ್ತಾ ವಿಶ್ವ ವಿದ್ಯಾನಿಲಯದಿಂದ ಪದವಿ ಪಡೆದು, ಎಚ್. ರಾಯ್ ಚೌಧುರಿ, ಲಕ್ಕೋ ಮತ್ತು ದೇವಿಪ್ರಸಾದ್‌ರಾಯ್ ಚೌಧುರಿ, ಮದ್ರಾಸು ಅವರಿಂದ ಶಿಲ್ಪಕಲೆಯಲ್ಲಿ ತರಬೇತಿ ಪಡೆದು, 1937ರಲ್ಲಿ ಲಂಡನ್ನಿನ ರಾಯಲ್ ಕಾಲೇಜಿನಲ್ಲಿ ಶಿಲ್ಪಕಲೆಯಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದಾರೆ. ಪ್ರಾರಂಭದ ಶಿಲ್ಪಗಳು ಯಥಾರ್ಥವಾದದ ಭಾವನೆಗಳಿಂದ ಕೂಡಿತ್ತು. ಭಾವಶಿಲ್ಪಗಳ ರಚನೆಯ ಪೈವಳಿಕೆ ಒರಟಾಗಿದ್ದು, ವ್ಯಕ್ತಿಯ ಭಾವನೆಗೆ ಪ್ರಾಧಾನ್ಯ. ಭಾವ, ಜಲನೆಗಳಿಗೆ ಪ್ರಾಧಾನ್ಯವಿರುವ ಕೆಲವು ಶಿಲ್ಪಗಳ ಆಕಾರಗಳಲ್ಲಿ ಸರಳತೆ ಹಾಗೂ ನಂತರದ ಶಿಲ್ಪಗಳು ಅಮೂರ್ತ ಭಾವನೆಗಳಿಂದ ಕೂಡಿವೆ ಹಾಗೂ ಕೆಲವು ಶಿಲ್ಪಗಳು ನಮಗೆ ಸ್ಮಾರಕದ ಶಿಲ್ಪಗಳಂತೆ ಕಾಣುತ್ತವೆ.

ಪಾಬ್ಲೊ ಪಿಕಾಸೋ

ಪಿಕಾಸೋ 1881ರಲ್ಲಿ ಸ್ಪೇನ್ ದೇಶದ ಮೊಲಗಾದಲ್ಲಿ ಹುಟ್ಟಿದ. ಬಾಲ್ಯ ದಲ್ಲೇ ತನ್ನ ಪರಿಸರವೇ ಅವನಿಗೆ ಚಿತ್ರ ನಿರ್ಮಿಸಲು ಸ್ಫೂರ್ತಿ. ಅನಂತರದ ಮಾಡ್ರಿಡ್ ನಲ್ಲಿರುವ ರಾಯಲ್ ಅಕಾಡೆಮಿಗೆ ಸೇರಿ ಕಲಾ ಶಿಕ್ಷಣ ಪಡೆದನು. ಪಿಕಾಸೋ ನೈಜ ಚಿತ್ರಗಳನ್ನು ಪ್ರಾರಂಭದಲ್ಲಿ ರಚಿಸಿದರೂ, ನಂತರ ಭಾವನಾತ್ಮಕ ಚಿತ್ರಗಳನ್ನು ರಚಿಸಿದನು. ಇದಾದ ನಂತರ ನೀಲಿ ಬಣ್ಣ ತನ್ನ ಚಿತ್ರಗಳಲ್ಲಿ ಪ್ರಧಾನವಾಗಿರುತ್ತಿತ್ತು. ಈ ಕಾಲವನ್ನು ಬ್ಲೂ ಪಿರಿಯಡ್ ಎಂದು ಕರೆಯುವರು. ಅವನ ವೈಯಕ್ತಿಕ ಜೀವನ ಏಕಾಂಗಿತನ, ಬಡತನಗಳ ಚಿತ್ರಣ ಕಾಣಬಹುದು. ಸರ್ಕಸ್ ಜನರನ್ನು ಚಿತ್ರಿಸಿದ. ಈ ಚಿತ್ರಗಳನ್ನು 'ರೋಸ್ ಪಿರಿಯಡ್' ಎನ್ನುವರು. ಅವನ ಮುಂದಿನ ಚಿತ್ರಗಳು ಮುಖಗಳಲ್ಲಿ ವಿರೂಪತೆ, ಸರಳರೇಖೆ, ಘನಗಳ ಸಂಯೋಜನೆ, ಪ್ರಖರವಾದ ಬಣ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪಿಕಾಸೋ

ಗಳು ಮತ್ತು ಸತ್ವ, ನಿಷ್ಪ್ರಯೋಜಕತೆ ಇವು ಕ್ಯೂಬಿಸಂನ ಗುಣಗಳಾಗಿದ್ದು, ಆಫ್ರಿಕನ್ ಶಿಲ್ಪಗಳಿಂದ ಪ್ರಭಾವಿತನಾದ ಪಿಕಾಸೋ ಕೂಬಿಸಂ ಕಲೆಯ ಪ್ರವರ್ತಕರಲ್ಲಿ ಒಬ್ಬ. ಜಾಮಿತಿಯ ಆಕೃತಿಗಳಲ್ಲಿ ಅವನು ಪ್ರಕೃತಿಯ ಸೌಂದರ್ಯವನ್ನು ತನ್ನ ಚಿತ್ರಗಳಲ್ಲಿ ಚಿತ್ರಿಸಿದ್ದಾನೆ. 1920ರ ಚಿತ್ರಗಳಲ್ಲಿ ಮನುಷ್ಯನ ಆಕೃತಿಯನ್ನು ರೂಪಾಂತರ ಮಾಡಿದ್ದು ಹಾಗೂ ಅನೇಕ ಶಿಲ್ಪಗಳನ್ನು ರಚಿಸಿದ. 1937ರಲ್ಲಿ ಸ್ಪೇನ್‌ನಲ್ಲಿ ಆದ ಯುದ್ಧದ ಭೀಕರತೆಯ ಚಿತ್ರಣ 'ಗೆರ್ನಿಕಾ', ಜರ್ಮನರ ದಾಳಿ ಮತ್ತು ಹೋರಿಗಳು, ನರಳುತ್ತಿರುವ ಕುದುರೆಗಳು, ಹೆಣ್ಣೊಬ್ಬಳು ಕಿಟಕಿಯ ಮೇಲೆ ದೀಪ ಹಿಡಿದು ಬಾಗಿದ ಮತ್ತು ಅನೇಕ ಸಂಕೀತಗಳನ್ನು ಬಳಸಿದ್ದು, ಗೆರ್ನಿಕಾ ಅವನ ಅತ್ಯುತ್ತಮ ಕೃತಿ ಗಳಲ್ಲಿ ಒಂದಾಗಿದೆ. ಅನಂತರದ ಚಿತ್ರಗಳಲ್ಲಿ ಸಾಮಾನ್ಯ ವಸ್ತುಗಳಾದ ತಾಯಿ, ಮಕ್ಕಳು, ಮನೆಯ ದೃಶ್ಯಗಳು, ಹೆಣ್ಣುಮಕ್ಕಳನ್ನು ಚಿತ್ರಿಸಿದ್ದು, 1973ರಲ್ಲಿ ನಿಧನ ನಾದ. ಅವನು ಈ ಶತಮಾನದ ಮಹಾನ್ ಕಲಾವಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಲ್‌ಕ್ಲೀ

1879ರಲ್ಲಿ ಪಾಲ್‌ಕ್ಲೀ ಸ್ವಿಜರ್‌ಲೆಂಡಿನ ಬರ್ನಿಯಲ್ಲಿ ಹುಟ್ಟಿದ್ದು, ಮ್ಯೂನಿಚ್‌ನಲ್ಲಿ ಕಲಾಶಿಕ್ಷಣ ಪಡೆದ. ಅವನ ಮೊದಲ ಬಹಳಷ್ಟು ಕಪ್ಪುಬಿಳುಪಿನ ಗ್ರಾಫಿಕ್ ಮಾಧ್ಯಮದ ಚಿತ್ರಗಳಲ್ಲಿ ಕರಾರುವಾಕ್ಕಾದ ಕುಶಲತೆ ಮತ್ತು ಅಭಿವ್ಯಕ್ತಿವಾದ ಕಾಣಬಹುದು. 1911ರಲ್ಲಿ ಬ್ಲೂರೈಟರ್ ಕಲಾವಿದರ ಸಂಪರ್ಕವಾಗಿ, ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ, ಅನಂತರ ಏಕವರ್ಣಚಿತ್ರಗಳನ್ನು ತ್ಯಜಿಸಿ ಜಲವರ್ಣದಲ್ಲಿ ಚಿತ್ರಗಳ ರಚನೆ, ನವಿರಾದ ವ್ಯವಸ್ಥೆ ಮತ್ತು ಅವಕಾಶದಲ್ಲಿ ಪ್ರಕಾಶ ಬೇಧ್ಯವಾದ ವರ್ಣದ ಉಜ್ವಲತೆ ಕಾಣಬಹುದು. ಅವನ ಕೊನೆಯ ಹಂತದ ಚಿತ್ರಗಳು ಅಮೂರ್ತವಾಗಿದ್ದು, ವರ್ಣಗಳ ಜೌಕ, ಜಾಮಿತಿಯ ಆಕಾರಗಳಿಂದ ಕೂಡಿದ್ದು, ಪಾರದರ್ಶಕ ವರ್ಣಗಳು, ರೇಖೆ, ವರ್ಣ, ವಿವಿಧ ಛಾಯೆಗಳು ಮುಖ್ಯವಾಗಿದ್ದು, ಅಂತರಂಗದ ಭಾವನೆಗಳು ಅಮೂರ್ತವಾಗಿ ಆಕೃತಿಗಳಲ್ಲಿ ಅಭಿವ್ಯಕ್ತವಾಗಿವೆ.



ಪಾಲ್‌ಕ್ಲೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಲ್ ಗೋಗಿನ್

ಪಾಲ್‌ಗೋಗಿನ್ 1848ರಲ್ಲಿ ಪ್ಯಾರಿಸಿನಲ್ಲಿ ಜನಿಸಿದ. ವಿರಾಮವಿದ್ದಾಗಲೆಲ್ಲ ಚಿತ್ರ ಬರೆಯುತ್ತಿದ್ದ. ಸಮಷ್ಟಿ ಪರಿಣಾಮ ಪದ್ಧತಿಯಲ್ಲಿ ಅನೇಕ ಚಿತ್ರಗಳನ್ನು ರಚಿಸಿ, ಬ್ರಿಟನ್ನಿಗೆ ತೆರಳಿದ. ಅಲ್ಲಿನ ಪ್ರವಾಸದ ಅನುಭವಗಳು, ನೋಡಿದ ಸ್ಥಳಗಳು ಅವನ ಮೇಲೆ ಪರಿಣಾಮ ಬೀರಿ, ತನ್ನದೇ ಆದ ಶೈಲಿ ಬೆಳೆಸಿಕೊಂಡ. ತೀವ್ರವಾದ ವರ್ಣಗಳು, ಕಪ್ಪು ಹೊರ ರೇಖೆಗಳು ಅವನ ಚಿತ್ರಕ್ಕೆ ಸರಳತೆ, ಚಿತ್ತಾಕರ್ಷತೆ ತಂದುಕೊಟ್ಟವು. ತಾಹಿತಿ ದ್ವೀಪಕ್ಕೆ ತೆರಳಿ, ಸಮಷ್ಟಿಪರಿಣಾಮ ಪದ್ಧತಿಯಲ್ಲಿ ಅನೇಕ ಚಿತ್ರ ರಚಿಸಿ, ಆ ಶೈಲಿಯ ಆದ್ಯಪ್ರವರ್ತಕನಾದ. ಸರಳ ರಚನೆ, ವರ್ಣ ಸಂಯೋಜನೆ, ವರ್ಣಗಳ ಉಪಯೋಗ ಅವನ ಚಿತ್ರಗಳ ವೈಶಿಷ್ಟ್ಯ. ಅವನು ತಾಯಿತಿಯಲ್ಲಿ ರಚಿಸಿದ ಚಿತ್ರಗಳು ಶ್ರೇಷ್ಠ ಕೃತಿಗಳಾಗಿದ್ದು 1903ರಲ್ಲಿ ನಿಧನ ಹೊಂದಿದ.

ಫ್ರಾನ್ಸಿಸ್ ಬೇಕನ್

ಬೇಕನ್ 1909ರಲ್ಲಿ ಜನಿಸಿದ್ದು. ಮೊದಲಿಗೆ ಇಂಟೀರಿಯರ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದ. ಯಾವುದೇ ಕಲಾಶಿಕ್ಷಣವಿಲ್ಲದೆ, 1930ರಲ್ಲಿ ಚಿತ್ರಗಳನ್ನು ರಚಿಸಲು ಪ್ರಾರಂಭಿಸಿದ. ಬ್ರಿಟಿಷ್ ಚಿತ್ರಕಲೆ ಮತ್ತು ವಿಶ್ವದಲ್ಲಿ ಮನುಷ್ಯಾಕೃತಿಗಳ ಚಿತ್ರರಚನೆಯಲ್ಲಿ ಮುಖ್ಯವಾದ ಸ್ಥಾನವನ್ನು ಪಡೆದಿದ್ದಾನೆ. ಆತನ ಬಹುಪಾಲು ಚಿತ್ರಗಳಲ್ಲಿ ಹೆಣ್ಣು ಮತ್ತು ಗಂಡಿನ ಪ್ರತಿಮೆಗಳನ್ನು ಅವಕಾಶದಲ್ಲಿ ಸಂಯೋಜಿಸಿ ಹಾಗೂ ದೃಶ್ಯವನ್ನು ವಿರೂಪಗೊಳಿಸಿ, ಮೂರು ಆಯಾಮಗಳನ್ನು ಚಿತ್ರಿಸಿದ್ದಾನೆ.

ಫ್ರಾನ್ಸಿಸ್ ನ್ಯೂಟನ್ ಸೌಜ

ಸೌಜ 1924ರಲ್ಲಿ ಗೋವಾದ ರೋಮನ್ ಕ್ಯಾಥೋಲಿಕ್ ಕುಟುಂಬದಲ್ಲಿ ಜನಿಸಿದ. 1940ರಲ್ಲಿ ಜೆಮ್‌ಶೆಟ್‌ಜೀ ಜೀಜಾಬಾಯಿ ಸ್ಕೂಲ್ ಆಫ್ ಆರ್ಟ್‌ಗೆ ಸೇರಿ, ಅಕಾಡೆಮಿಕ್ ಶೈಲಿಯಲ್ಲಿ ಶಿಕ್ಷಣ ಹಾಗೂ 1949ರಲ್ಲಿ ಮುಂಬಯಿನಲ್ಲಿ 'ಪ್ರೊಗ್ರೆಸೀವ್ ಆರ್ಟಿಸ್ಟ್ಸ್ ಗ್ರೂಪ್'ನ ಮುಂದಾಳತ್ವ ವಹಿಸಿ, ಭಾರತದಲ್ಲಿ ಆಧುನಿಕ ಕಲೆಗೆ ಹೊಸ ತಿರುವು ನೀಡಿದವನು. ಅವನ ಮೊದಲ ಚಿತ್ರಗಳಲ್ಲಿ ವೀರಲಕ್ಷಣವಾದ ಶೈಲಿ ಮತ್ತು ಭಾವನೆಗಳು. ಕಮ್ಯೂನಿಸ್ಟ್ ಪಾರ್ಟಿಯಲ್ಲಿದ್ದುದರಿಂದ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಕೀಯ ದೃಷ್ಟಿಯ ಚಿತ್ರಗಳ ರಚನೆ ಹಾಗೂ ಅವನು ಕ್ಯಾಥೋಲಿಕ್ ಧರ್ಮಕ್ಕೆ ಸೇರಿದವನಾದುದರಿಂದ ಸಹಜವಾಗಿ ಬೈಬಲಿನ ಹಳೆಯ ಮತ್ತು ಹೊಸ ಒಡಂಬಡಿಕೆಯ ವಿಷಯಗಳಿಂದ ಚಿತ್ರಗಳ ರಚನೆ. ಅದರಲ್ಲೂ ಕ್ರಿಸ್ತನ ಬಗ್ಗೆ ರಚಿಸಿರುವ ಚಿತ್ರಗಳಲ್ಲಿ, ಶಿಲ್ಪದ ಗುಣಗಳನ್ನು ಹೊಂದಿದ್ದು, ಹಣೆಯ ಎದುರಿನ ಮೇಲೆ ಹದವಾಗಿ ವರ್ಣಗಳನ್ನು ಪದಕಗಳಾಗಿ ಹರಿಸಿ, ದಟ್ಟವಾದ ಕಪ್ಪು ರೇಖೆಗಳನ್ನು ಕಾಣಬಹುದು. ಅವನ ಮಹಿಳೆಯ ಚಿತ್ರಗಳು ಅಭಿವ್ಯಕ್ತವಾದದಿಂದ ಕೂಡಿದ್ದು ಹಾಗೂ ಮಥುರಾ ಖಿಜುರಾಹೋ ಶಿಲ್ಪಗಳು ಪ್ರಭಾವ ಬೀರಿವೆ. ಮಹಿಳೆಯ ಚಿತ್ರಗಳು ಗಮನಾರ್ಹವಾದ, ಸಂಕ್ಷಿಪ್ತ ಆಕಾರ ಮತ್ತು ಭಿನ್ನವಾದ ಶೈಲಿಯಲ್ಲಿವೆ ಹಾಗೂ ಕೆಲವು ಚಿತ್ರಗಳು ಶೃಂಗಾರ ಸಂಬಂಧದಿಂದ ಕೂಡಿವೆ. ಭಾವಚಿತ್ರ, ಸ್ಟಿಲ್‌ಲೈಫ್ ಮತ್ತು ಪ್ರಕೃತಿ ಚಿತ್ರಗಳನ್ನು ರಚಿಸಿದ್ದಾನೆ.

ಫ್ರಾನ್ಸಿಸ್ ಫ್ರಾನ್ಸ್‌ವಾ ರೊಡಿನ್

ರೊಡಿನ್ 1840ರಲ್ಲಿ ಪ್ಯಾರಿಸಿನಲ್ಲಿ ಜನಿಸಿದ. ಪ್ಯಾರಿಸಿನ ಕಲಾಶಾಲೆಯಲ್ಲಿ ಶಿಕ್ಷಣ ಪಡೆದು, ಅನಂತರ ಶಿಲ್ಪಿಯೊಬ್ಬನ ಹತ್ತಿರ ಕೆಲಸಕ್ಕೆ ಸೇರಿ, ಶಿಲ್ಪ ರಚನೆಯಲ್ಲಿ ಪರಿಣತಿ ಪಡೆದ. ಇಟಲಿಗೆ ಹೋಗಿ ಅಲ್ಲಿ ಮೈಕೆಲೆಂಜಲೋ ಶಿಲ್ಪಗಳನ್ನು ನೋಡಿ ಬಂದ ಮೇಲೆ, ಅವನ ಪ್ರಭಾವ ರೊಡಿನ್ ಶಿಲ್ಪಗಳ ಮೇಲೆ ಕಾಣಿಸಿತು. ಅವನ ಮೊದಲ ನೈಜಗಾತ್ರದ ಪ್ರತಿಮೆ 'ಕಂಚಿನ ಯುಗ' ಪ್ಯಾರಿಸಿನ ಅಲಂಕಾರಿಕ ಕಲೆಗಳ ವಸ್ತುಸಂಗ್ರಹಾಲಯಕ್ಕೆ ಬಾಗಿಲನ್ನು ನಿರ್ಮಿಸಿ, ಬಾಗಿಲಿನ ಮೇಲೆ ದಾಂತೆಯ 'ಡಿವೈನ್ ಕಾಮಿಡಿ'ಯ ದೃಶ್ಯಗಳನ್ನು ಕೆತ್ತಿ 'ನರಕದ ಬಾಗಿಲು' ಎಂದು ಹೆಸರಿಟ್ಟ. ಹೊಸ ತಂತ್ರಗಳನ್ನು ಪ್ರಯೋಗ ಮಾಡುತ್ತಿದ್ದ. ಬರೀ ಕೈಯನ್ನಷ್ಟೆ ಕೆತ್ತುವುದು, ಒಂದೇ ಕಲ್ಲಿನ ತುಂಡಿನಲ್ಲಿ ದೇಹದ ಒಂದು ಭಾಗವನ್ನು ಮಾತ್ರ ಕೆತ್ತಿ ಬಹುಭಾಗ ಕಲ್ಲನ್ನು ಕೆತ್ತದಿರುವುದು, ಶಿಲ್ಪಕ್ಕೆ ಮೆರಗನ್ನು ಕೊಡದೆ ಇರುವುದು, ಮನುಷ್ಯಾಕೃತಿಯ ಶಿಲ್ಪಗಳು ನೈಜವಾಗಿರುವಂತೆ, ಉಬ್ಬುತಗ್ಗುಗಳಿರುವಂತೆ ಶಿಲ್ಪಗಳನ್ನು ರಚಿಸುತ್ತಿದ್ದ. ವಿಹಾರಿ, ಚುಂಬನ - ಪ್ರಸಿದ್ಧ ಶಿಲ್ಪಗಳು. ಅವನು ಆಧುನಿಕ ಶಿಲ್ಪಕಲೆಯ ಪಿತಾಮಹನಾಗಿ 1917ರಲ್ಲಿ ನಿಧನನಾದ. ರೊಡಿನ್‌ನ ಶಿಲ್ಪ, ರೇಖಾಚಿತ್ರ ಮತ್ತು ವರ್ಣಚಿತ್ರಗಳಿರುವ ವಸ್ತುಸಂಗ್ರಹಾಲಯವಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪ್ಯಾರೋ

ಪ್ಯಾರೋ 1416ರಲ್ಲಿ ಇಟಲಿಯ ಬೋರ್ಗೊ ಸಾನ್ ಸೆಪೋಲ್‌ಕ್ರೋನಲ್ಲಿ ಜನಿಸಿ, ಫ್ಲಾರೆನ್ಸಿಗೆ ಬಂದು ಚಿತ್ರಕಲೆಯನ್ನು ಕಲಿತು, ರೋಮಿಗೆ ಹೋದಾಗ ಅಲ್ಲಿನ ವ್ಯಾಟಿಕನ್‌ನಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದ. ಅರಜೋದಲ್ಲಿರುವ ಸಂತ ಫ್ರಾನ್ಸಿಸ್ಕೊ ಚರ್ಚಿನಲ್ಲಿ ಭಿತ್ತಿಚಿತ್ರಗಳನ್ನು ರಚಿಸಿ, ಅಲ್ಲಿ ಏಸುಕ್ರಿಸ್ತನ ಜೀವನವನ್ನು ಚಿತ್ರಿಸಿದ. ಜಾಮಿತಿಯ ಸರಳತೆ, ಸೌಮ್ಯ ಶೀತಲ ವಾತಾವರಣ, ನಿಖರತೆ, ವ್ಯಕ್ತಿಚಿತ್ರಗಳಲ್ಲಿ ಗ್ರೀಕರ ಶರೀರ ಸೌಷ್ಟವ ಕಾಣಬಹುದು. ಅವನು ರಚಿಸಿರುವ ಭಿತ್ತಿಚಿತ್ರಗಳು ಮೇರು ಕೃತಿಗಳಾಗಿದ್ದು ನವೋದಯ ಕಾಲದ ಅತ್ಯಂತ ಮೇಧಾವಿ ಕಲಾವಿದನಾಗಿದ್ದು 1492ರಲ್ಲಿ ತೀರಿಕೊಂಡ.

ಪ್ರಾಣನಾಥ ಮಾಗೋ

ರಾವಲ್‌ಪಿಂಡಿಯಲ್ಲಿ ಜನಿಸಿದ ಮಾಗೋ, ಜೆ. ಜೆ. ಕಲಾಶಾಲೆಯಿಂದ ಡಿಪ್ಲೊಮೊ ಪಡೆದಿದ್ದು, ಆಗಲೇ ಕಲೆಯಲ್ಲಿ ಪ್ರತಿಭಾನ್ವಿತರೆನಿಸಿದ್ದು, ಲಾಹೋರಿನಲ್ಲಿರುವ ಮಾಯೋ ಸ್ಕೂಲ್ ಆಫ್ ಆರ್ಟ್‌ಗೆ ಸೇರಿ ಅಲ್ಲಿ ಚಿಕಣಿ ಚಿತ್ರಗಳ ತಂತ್ರವನ್ನು ಹಾಗೂ ಅನಂತರ ಭಿತ್ತಿಚಿತ್ರದಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ, ತಮ್ಮ ಸ್ವಂತಿಕೆ ಕಂಡುಕೊಂಡಿದ್ದರು. ವೀರ್ಯವತ್ತಾದ ರೇಖೆಗಳು, ಶಕ್ತಿಯುತವಾದ ವರ್ಣಗಳ ಬಳಕೆ, ಮೈವಳಿಕೆಗಳ ಸೃಷ್ಟಿಯಲ್ಲಿ ವಿಶೇಷತೆ ಕಾಣಬಹುದು.

ಪೀಟ್ ಮಾಂಡ್ರಿಯಾನ್

ಮಾಂಡ್ರಿಯಾನ್ 1892ರಲ್ಲಿ ಜನಿಸಿದ ಡಚ್ ಚಿತ್ರಕಲಾವಿದ. ಅಮ್‌ಸ್ಟರ್‌ಡ್ಯಾಮ್ ಅಕಾಡೆಮಿಯಲ್ಲಿ ಕಲಾಶಿಕ್ಷಣ ಪಡೆದಿದ್ದು, ಮೊದಲ ಚಿತ್ರಗಳು ಪ್ರಕೃತಿಚಿತ್ರಗಳಾಗಿದ್ದು, ಮಸುಕಾದ ವರ್ಣಗಳಿಂದ ರಚಿತವಾಗಿದ್ದು, ಡಚ್ ಚಿತ್ರಕಲಾ ಸಂಪ್ರದಾಯವನ್ನು ಹಾಗೂ ನಂತರದ ಪ್ರಕೃತಿಚಿತ್ರಗಳಲ್ಲಿ ಶೈಲಿಯುಕ್ತವಾದ, ಉಜ್ವಲ ವರ್ಣಗಳ ಬಳಕೆ ಕಾಣಬಹುದು. 1909ರಲ್ಲಿ ಪ್ಯಾರಿಸಿಗೆ ಬಂದನಂತರ ಕ್ಯೂಬಿಸಂ ಶೈಲಿಯ ಪ್ರಭಾವವಾಯಿತು. ಅವನ ಕೊನೆಯ ಹಂತದ ಚಿತ್ರಗಳು ಪಕ್ವವಾದ ಶೈಲಿ, ಗಾಢತೆ ಹಾಗೂ ನಡುನಡುವೆ ಸ್ಥಳಬಿಟ್ಟು ಜೋಡಿಸಿದ ಸಮಾಂತರ ಸರಳುಗಳ ಚೌಕಟ್ಟುಗಳು, ಅವಕಾಶದಲ್ಲಿ ಪ್ರತ್ಯೇಕವಾಗಿದ್ದು, ಭಾವ ಪ್ರೇರಣೆಯಿಂದ ಕೂಡಿವೆ. ವರ್ಣದ ಆಕಾರಗಳು, ಹದವಾದ ಚೌಕಟ್ಟುಗಳನ್ನು ವಿಭಜಿಸಿ, ಕಪ್ಪು ರೇಖೆಗಳಿಂದ ರಚಿತವಾಗಿದ್ದು, ಪಕ್ವವಾದ ವರ್ಣಗಳ ಬಳಕೆಯಿಂದ ಅಮೂರ್ತವಾಗಿ ಚಿತ್ರಿಸಿದ್ದು ಜಾಮಿತಿಯ ಆಕಾರಗಳನ್ನು ಕಾಣಬಹುದು. ಅವನ ಚಿತ್ರಗಳಲ್ಲಿ ಆಕಾರಗಳು ರೇಖೆಗಳು, ವರ್ಣಗಳು ಅವುಗಳದೇ ಆದ ಸಮಗ್ರತೆ, ಸ್ವತಂತ್ರತೆ, ಮಹತ್ವ ಮತ್ತು ಸಂಬಂಧಗಳನ್ನು ಹೊಂದಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಿಲೂ ಆರ್. ಪೋಚಕನವಾಲ

1923ರಲ್ಲಿ ಜನಿಸಿದ ಪೋಚಕನವಾಲ ಮುಂಬಯಿ ವಿಶ್ವವಿದ್ಯಾಲಯದ ವಾಣಿಜ್ಯ ಪದವೀಧರೆ ಮತ್ತು ಸ್ವಂತವಾಗಿ ಶಿಲ್ಪಕಲೆಯನ್ನು ಕಲಿತಿದ್ದಾರೆ. ತಮ್ಮ ಸೃಜನಶೀಲ ಶಿಲ್ಪಗಳಿಂದ ರಾಷ್ಟ್ರ ಮತ್ತು ವಿದೇಶಗಳಲ್ಲಿ ಜನಪ್ರಿಯರಾಗಿದ್ದಾರೆ. ಪ್ರಮುಖವಾಗಿ ಮುಂಬಯಿ, ದೆಹಲಿ, ಲಂಡನ್, ಟೋಕಿಯೋ, ಬೆಲ್ಜಿಯಂ, ಅಮೆರಿಕಾ ಮುಂತಾದ ಕಡೆ ಶಿಲ್ಪಗಳು ಪ್ರದರ್ಶಿತವಾಗಿದ್ದು, 1954ರಲ್ಲಿ ಬಾಂಬೆ ಆರ್ಟ್ ಸೊಸೈಟಿ, 1979 ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ.ಅನೇಕ ಭಿತ್ತಿಚಿತ್ರಗಳನ್ನು ರಚಿಸಿದ್ದಾರೆ ಮತ್ತು ಅನೇಕ ನಾಟಕಗಳಿಗೆ ರಂಗಸಜ್ಜಿಕೆಯ ವಿನ್ಯಾಸಕಿಯಾಗಿ ಕೆಲಸ ಮಾಡಿದ್ದು, ಸಿಮೆಂಟ್, ಅಲ್ಯೂಮಿನಿಯಂ, ಕಲ್ಲು ಮುಂತಾದ ಮಾಧ್ಯಮಗಳಲ್ಲಿ ಅಮೂರ್ತ ಶಿಲ್ಪಗಳನ್ನು ರಚಿಸಿದ್ದು, ಪೈವಳಿಕೆ ಮುಖ್ಯವಾಗಿರುತ್ತದೆ. ಪ್ರಕೃತಿಯ ಆಕಾರಗಳಿಂದ ಸ್ಫೂರ್ತಿ ಪಡೆದು, ಸೃಜನಾತ್ಮಕವಾಗಿ ಶಿಲ್ಪಗಳನ್ನು ರಚಿಸಿದ್ದಾರೆ.

ಫಿಡಿಯಾಸ್

ಫಿಡಿಯಾಸ್ ಅಥೆನ್ಸ್ ನಗರದ ಚಿತ್ರಕಲಾವಿದನೊಬ್ಬನ ಮಗ. ಅವನು ಪ್ರಾಚೀನ ಗ್ರೀಸ್ ದೇಶದ ಶಿಲ್ಪಿ. ಪ್ರಾರಂಭದಲ್ಲಿ ತನ್ನ ಕಲಾಜೀವನವನ್ನು ಪ್ರಾರಂಭಿಸಿದ್ದು ಚಿತ್ರಕಾರನಾಗಿ, ಅನಂತರ ಶಿಲ್ಪಕಲಾವಿದನಾದ. ಫಿಡಿಯಾಸ್‌ನ ಕುಶಲತೆಯಿಂದ ಅಥೆನ್ಸ್ ಪ್ರಾಚೀನ ಗ್ರೀಸ್‌ನ ಕಲಾಭವನವಾಯಿತು. ಅವನ ಪ್ರಾರಂಭದ ಶಿಲ್ಪಗಳು ಗ್ರೀಕ್ ದೇವತೆಗಳ ಕಂಚಿನ ವಿಗ್ರಹ. ಜ್ಯೂಸ್ ದೇವತೆಯ ವಿಗ್ರಹಗಳು ಅವನ ಹೆಸರನ್ನು ಅಮರಗೊಳಿಸಿವೆ. ಅವನ ಬೃಹತ್ ವಿಗ್ರಹಗಳಲ್ಲಿ ಭವ್ಯತೆ, ಗಂಭೀರವಾದ ನಿಲುವು, ಶಾಂತ ಮುಖಮುದ್ರೆಗಳು ಅವನ ಶಿಲ್ಪಗಳ ವೈಶಿಷ್ಟ್ಯಗಳಾಗಿವೆ.

ಪೀರ್ ಆಗಸ್ಟ್ ರೆನ್ವಾ

ರೆನ್ವಾ 1841ರಲ್ಲಿ ಫ್ರಾನ್ಸಿನಲ್ಲಿ ಜನಿಸಿದ. ಬಾಲ್ಯದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ. ಪ್ಯಾರಿಸಿನಲ್ಲಿ ಕಲಾಶಿಕ್ಷಣ ಪಡೆದು, ಆಕೃತಿ, ಪ್ರಕೃತಿ ಚಿತ್ರಗಳಲ್ಲಿ ಬೆಳಕು ಉಂಟು ಮಾಡುವ ಬದಲಾವಣೆ ಚಿತ್ರಿಸುವುದರಲ್ಲಿ ಹೊಸ ಹಾದಿ ಹಿಡಿದ. ಇದನ್ನು ಸಮಷ್ಟಿ ಪರಿಣಾಮ ಪದ್ಧತಿ ಎಂದು ಕರೆಯುವರು. ಅನಂತರ ಸಮಷ್ಟಿ ಪರಿಣಾಮ ಪದ್ಧತಿಯನ್ನು ಬಿಟ್ಟು, ವಿರುದ್ಧ ವರ್ಣಗಳನ್ನು ತನ್ನ ಚಿತ್ರಗಳಲ್ಲಿ ದಟ್ಟವಾಗಿ ಉಪಯೋಗಿಸಿದ. ಅವನ ಚಿತ್ರಗಳಲ್ಲಿ ನೋವಿಲ್ಲ, ಹರ್ಷ, ಸೊಗಸುಗಾರಿಕೆ ಕಾಣಬಹುದು. ತನ್ನ ಕೊನೆಯ ಕಾಲದಲ್ಲಿ ಕೆಲವು ಶಿಲ್ಪಗಳನ್ನು ರಚಿಸಿದ. ರೆನ್ವಾ 1919ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪುಲಿನ್ ಬಿಹಾರಿದತ್

ಬಂಗಾಳದವರಾದ ದತ್ ಅವರು ಕಲೆಯನ್ನು ಅಬನೀಂದ್ರನಾಥ ಟಾಗೂರರ ಬಳಿ ಕಲಿತು. ಅವರ ಪ್ರಭಾವ ದತ್ ಚಿತ್ರಗಳಲ್ಲೂ ಕಾಣಬಹುದು. ಮುಂಬಯಿನಲ್ಲಿ ನೆಲೆಸಿ, ಕಲೆಯನ್ನು ಬೋಧಿಸುವುದನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿದ್ದು, ಆದರ್ಶ ಕಲಾಶಿಕ್ಷಕರಾಗಿದ್ದರು. ಅವರು ರಚಿಸಿರುವ ಬುದ್ಧ ಅಥವಾ ಮೀರಾ ಚಿತ್ರಗಳಲ್ಲಿ ಭಕ್ತಿಭಾವನೆಯನ್ನು ಚಿತ್ರಿಸಿದ್ದಾರೆ. ಅವರ ಚಿತ್ರಗಳಲ್ಲಿ ಭಾರತೀಯತ್ವ, ಪರಿಪಕ್ವತೆಯ ರೇಖೆಗಳು, ಹದವಾದ ವರ್ಣಗಳ ಮತ್ತು ಕುಂಚಗಳ ಬಳಕೆ ವಿಶಿಷ್ಟವಾದದು.

ಫೆನ್ನಿಂಗರ್ ಲಯೋನೆಟ್

ಫೆನ್ನಿಂಗರ್ 1871ರಲ್ಲಿ ನ್ಯೂಯಾರ್ಕ್‌ನಲ್ಲಿ ಹುಟ್ಟಿದ್ದು. ಬರ್ಲಿನ್‌ನಲ್ಲಿ ಸಂಗೀತ ಕಲಿತು ಅನಂತರ ವ್ಯಂಗ್ಯಚಿತ್ರಕಾರನಾಗಿದ್ದ. ಬ್ಲೂ ರೈಟರ್ ಗುಂಪಿನ ಸದಸ್ಯನಾಗಿದ್ದ. ಅಮೆರಿಕಾಕ್ಕೆ ಬಂದು ಅಲ್ಲಿ ಲೇಖನ ಬರೆಯುತ್ತಿದ್ದ ಮತ್ತು ಶಿಕ್ಷಕನಾಗಿದ್ದ. ಕ್ಯೂಬಿಸ್ಟ್ ಶೈಲಿಯಲ್ಲಿ ಚಿತ್ರಗಳನ್ನೂ ರಚಿಸಿದ್ದಾನೆ.

ಬದ್ರಿನಾರಾಯಣ್

ಬದ್ರಿನಾರಾಯಣ್ 1929ರಲ್ಲಿ ಸಿಕಂದ್ರಾಬಾದ್‌ನಲ್ಲಿ ಜನಿಸಿದ್ದು, ತಮ್ಮ ಕಲಾ ಶಿಕ್ಷಣವನ್ನು ಬಾಂಬೆ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಪಡೆದಿದ್ದು, ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ 1965. ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ. ಚಿತ್ರ, ಗ್ರಾಫಿಕ್, ಮೊಸಾಯಿಕ್ ಮತ್ತು ಭಿತ್ತಿಚಿತ್ರಗಳಲ್ಲಿ ಪರಿಣತಿ ಪಡೆದಿದ್ದು, ತಮ್ಮ ಕಲ್ಪನೆಗಳನ್ನು ಸಾಂಕೇತಿಕವಾಗಿ ಅಭಿವ್ಯಕ್ತಿಸುವರು.

ಬಿಜನ್ ಚೌಧುರಿ

ಕಲ್ಕತ್ತಾದಲ್ಲಿ 1931ರಲ್ಲಿ ಜನಿಸಿದ ಬಿಜನ್ ಚೌಧುರಿ, 1950ರಲ್ಲಿ ಕಲ್ಕತ್ತಾ ಸ್ಕೂಲ್ ಆಫ್ ಆರ್ಟ್‌ನಿಂದ ಡಿಪ್ಲೊಮೊ ಪಡೆದಿದ್ದು, 1951ರಲ್ಲಿ ಕಲ್ಕತ್ತಾದಲ್ಲಿ ಸೊಸೈಟಿ ಆಫ್ ಕಾಂಟೆಂಪರರಿ ಆರ್ಟಿಸ್ಟ್ಸ್ ಸಂಸ್ಥೆಯ ಸ್ಥಾಪಕ. ಅವರ ಮೊದಲ ಚಿತ್ರಗಳಲ್ಲಿ ಜಾಮಿತಿಯ ಮನುಷ್ಯಾಕೃತಿಗಳು ಹಾಗೂ ಭಾವಚಿತ್ರ, ಬೀದಿದೃಶ್ಯ, ಅಂಗಡಿಗಳ ರೇಖಾಚಿತ್ರಗಳಲ್ಲಿ ದೃಷ್ಟಿಶಾಸ್ತ್ರಕ್ಕೆ ಪ್ರಾಧಾನವಿದ್ದು, ವೀಕ್ಷಕರ ಗಮನ ಸೆಳೆಯುತ್ತವೆ. ಅನಂತರದ ಚಿತ್ರಗಳಲ್ಲಿ ಧಾರ್ಮಿಕತೆ, ಕಾಳಿಘಾಟ್‌ನ ಪರಿಸರದ ಚಿತ್ರಗಳು ಮತ್ತು ಅನಂತರದ ಚಿತ್ರಗಳಲ್ಲಿ ಜಾಮಿನಿರಾಯ್ ಅವರ ಪ್ರಭಾವ ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬರ್ನಿನಿ ಗ್ಯಾನ್ ಲೊರೆಂಜೊ

ಬರ್ನಿನಿ 1598ರಲ್ಲಿ ಇಟಲಿಯಲ್ಲಿ ಜನಿಸಿದ. ಶಿಲ್ಪ ಮತ್ತು ವಾಸ್ತುಶಿಲ್ಪ ದಲ್ಲಿ ಕೆಲಸ ಮಾಡಿದ್ದು, ಶಿಲ್ಪಕಲೆಯಲ್ಲಿ ಅದ್ವಿತೀಯ ಕೌಶಲವನ್ನು ಪಡೆದಿದ್ದ. ಉದ್ಯಾನಗಳಲ್ಲಿ ಅನೇಕ ಶಿಲ್ಪಗಳನ್ನು ರಚಿಸಿದ್ದು, ಈ ಶಿಲ್ಪಗಳಲ್ಲಿ ಬಾರೋಕ್ ಗುಣಗಳನ್ನು ಕಾಣಬಹುದು. ಅನೇಕ ಭಾವಶಿಲ್ಪಗಳನ್ನು ರಚಿಸಿದ್ದಾನೆ ಮತ್ತು ಅವನ ಶಿಲ್ಪಗಳಲ್ಲಿ ಮೈಕೇಲಂಜಲೋ ಶಿಲ್ಪದ ಗುಣಗಳನ್ನು ಭಾಗಶಃ ಕಾಣಬಹುದು. ಶಿಲ್ಪ ಗಳನ್ನು ಒಂದಾಗಿಸಿ, ಗೋಪುರಗಳನ್ನು ಹೊಂದಿಸುವುದರಲ್ಲಿ ಮತ್ತು ಮತೀಯ ಶಿಲ್ಪಗಳನ್ನು ರಚಿಸುವುದರಲ್ಲಿ ಅಸಾಮಾನ್ಯ ಪ್ರೌಢಿಮೆ ಮತ್ತು ವಿವಿಧ ಮಾಧ್ಯಮ ಬಳಸುವುದರಲ್ಲಿ, ವೀಕ್ಷಕನಲ್ಲಿ ಹೊಸ ಅನುಭವವುಂಟುಮಾಡುತ್ತವೆ.

ಬಲ್ಲಾ ಜೈಕೊಮೊ

ಜೈಕೊಮೊ ಇಟಲಿಯಲ್ಲಿ 1871ರಲ್ಲಿ ಜನಿಸಿದ ಅವನು ಫ್ಯೂಸರಿಸಂ ಶೈಲಿಯ ಸ್ಥಾಪಕ. ಪ್ಯಾರಿಸಿಗೆ ಹೋಗುವಾಗ ಇಂಪ್ರೆಷನಿಸಮ್‌ನ ಪ್ರಭಾವವಾಯಿತು. ಅವನು ರಚಿಸಿರುವ 'ಡಾಕ್ ಆನ್ ಎ ಲೀಸ್' ಚಿತ್ರ ಚಲನೆ ಮತ್ತು ಅನೇಕ ಕಲ್ಪನೆ ಗಳನ್ನು ತಿಳಿಸುವ ಫ್ಯೂಸರಿಸಂನ ಶೈಲಿಯ ಚಿತ್ರ ಹಾಗೂ ಈ ಪಂಥದ ಉತ್ತಮ ಚಿತ್ರ. ಅನಂತರ ಅವನು ಅಮೂರ್ತ ಕಲೆಯಲ್ಲಿ ಚಿತ್ರಗಳನ್ನು ರಚಿಸಿದ್ದು, ವೀರ್ಯವತ್ತಾದ ರೇಖೆಗಳು ಮತ್ತು ಚಲನೆ ಕಾಣಬಹುದು.

ಭಾನು ಸ್ಕಾರ್ಫ್

ರಾಜಕೋಟೆಯಲ್ಲಿ ಜನಿಸಿದ ಭಾನು ಸ್ಕಾಟ್ ಚಿಕ್ಕಂದಿನಲ್ಲೇ ಕಲೆಯಲ್ಲಿ ಆಸಕ್ತಿ ಬೆಳೆದು ಜೆ. ಜೆ. ಕಲಾಶಾಲೆಯಿಂದ 1934ರಲ್ಲಿ ಡಿಪ್ಲೊಮೊ ಪಡೆದರು. ಅನಂತರ ಶಾಂತಿನಿಕೇತನದಲ್ಲಿ ಹೆಚ್ಚಿನ ಕಲಾಶಿಕ್ಷಣ ಪಡೆದು, ಮುಂಬಯಿನ ಮಾರ್ಡನ್ ಸ್ಕೂಲಿ ನಲ್ಲಿ ಕಲಾಶಿಕ್ಷಕರಾಗಿದ್ದರು. ಅವರ ಮೊದಲ ಚಿತ್ರಗಳು ವಾಶ್ ಮಾಧ್ಯಮದಲ್ಲೂ, ಅನಂತರ ಟೆಂಪರಾ ಮಾಧ್ಯಮದಲ್ಲೂ ರಚಿಸಿದ್ದಾರೆ. ಅವರ ಸಂಯೋಜನಾ ಚಿತ್ರ ಗಳಲ್ಲಿ ರೇಖೆ, ಆಕಾರಗಳಲ್ಲಿ ಸರಳತೆ ಕಾಣಬಹುದು. 'ಷಹಜಹಾನ್ ತಾಜ್ ಮಹಲನ್ನು ವೀಕ್ಷಿಸುತ್ತಿರುವುದು' ಚಿತ್ರ ಅತ್ಯಂತ ಜನಪ್ರಿಯ ಚಿತ್ರವೆಂದು ಮನ್ನಣೆ ಪಡೆದಿದೆ. ಮಕ್ಕಳಿಗಾಗಿ ಅನೇಕ ಕಥಾಚಿತ್ರಗಳನ್ನು ಮತ್ತು ಪೌರಾಣಿಕ ಚಿತ್ರ ಗಳನ್ನು ರಚಿಸುವುದರಲ್ಲಿ ಸಿದ್ಧಿಪಡೆದಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ಯಾರಿ ಅಂಟೋನಿ ಲೂಯಿಸ್

ಫ್ರೆಂಚ್ ಶಿಲ್ಪಕಲಾವಿದನಾದ ಅವನು 1796ರಲ್ಲಿ ಜನಿಸಿದ. ಭಾವನಾಶೀಲ ಶಿಲ್ಪಿ ಮತ್ತು ಚಿತ್ರಕಲಾವಿದ. ಪ್ರಾರಂಭದಲ್ಲೇ ತನ್ನ ತಂದೆ ನಿರ್ವಹಿಸುತ್ತಿದ್ದ ಪ್ರಾಣಿಗಳ ಮೂರ್ತಿಶಿಲ್ಪಗಳನ್ನೇ ಅವನು ರಚಿಸುತ್ತಿದ್ದ. ಅವನಿಗೆ ಈ ವಿಷಯದಲ್ಲಿ ಆಸಕ್ತಿ ಹೆಚ್ಚು. ಪ್ರಾಣಿಗಳ ಕಾರ್ಯ ಮತ್ತು ಭಾವನೆಗಳನು ಚಿತ್ರಿಸುವುದರಲ್ಲಿ ವಿಶೇಷತೆ ಪಡೆದಿದ್ದು 1875ರಲ್ಲಿ ನಿಧನನಾದ.

ಬಾರ್ಲಾಜ್ ಅರ್ನೆಸ್ಟ್

ಅರ್ನೆಸ್ಟ್ 1870ರಲ್ಲಿ ಜರ್ಮನಿಯಲ್ಲಿ ಜನಿಸಿದ. ಅವನು ಮೂಲತಃ ಶಿಲ್ಪಿ, ಮರ ಕೆತ್ತನೆಗಾರ, ಡ್ರಾಫ್ಟ್ಸ್‌ಮನ್ ಮತ್ತು ಕಲಾಬರಹಗಾರನಾಗಿದ್ದು ಎಕ್ಸ್‌ಪ್ರೆಷನಿಸಂ ಪಂಥದೊಡನೆ ಸಂಪರ್ಕವಿತ್ತು. ರಷ್ಯಾಗೆ ಬಂದು ನೆಲಸಿದ ಮೇಲೆ ಅಲ್ಲಿ ಮಾನವನ ನೋವು, ದುಃಖಗಳು, ರೈತಜೀವನ ಅವನ ಶಿಲ್ಪಗಳಲ್ಲಿ ಕಂಡರೆ, ಸೆಂಟ್ ಕ್ಯಾಥಡ್ರಲ್ ಚರ್ಚ್, ಉಬೆ ಕ್‌ನಲ್ಲಿ ಶಿಲ್ಪಗಳನ್ನು ರಚಿಸಿದ್ದಾನೆ.

ಬಾಮ್‌ಬರ್ಗ್ ಡೇವಿಡ್

ಬಾಮ್‌ಬರ್ಗ್ 1890ರಲ್ಲಿ ಜನಿಸಿದ್ದು, ಮೂಲತಃ ಬ್ರಿಟಿಷ್ ಚಿತ್ರಕಲಾವಿದ ಮತ್ತು ಶಿಕ್ಷಕ. ಅನೇಕ ಜಾಮಿತಿಯ ಸಂಯೋಜನಾ ಚಿತ್ರಗಳನ್ನು ರಚಿಸಿದ್ದಾನೆ. ಅನಂತರದ ಚಿತ್ರಗಳಲ್ಲಿ ನಿರೂಪಣೆ ಮತ್ತು ಅಭಿವ್ಯಕ್ತಿಯ ತಂತ್ರಗಳನ್ನು ಕಾಣಬಹುದು.

ಬಾರ್ತೊಲೊಜ್ಜಿ

ಬಾರ್ತೊಲೊಜ್ಜಿ 1728ರಲ್ಲಿ ಇಟಲಿಯಲ್ಲಿ ಜನಿಸಿದ. ಮೆಜೋಟಿಂಟ್ ಎನ್‌ಗ್ರೇವ್, ಚಿಕಣಿಚಿತ್ರ ಮತ್ತು ಡ್ರಾಫ್ಟ್ಸ್‌ಮನ್‌ನಲ್ಲಿ ಪರಿಣತಿ ಪಡೆದಿದ್ದು, ಅನಂತರ ಇಂಗ್ಲೆಂಡಿನಲ್ಲಿ ನೆಲೆಸಿದ. ರಾಯಲ್ ಅಕಾಡೆಮಿಯ ಸ್ಥಾಪಕರಲ್ಲಿ ಒಬ್ಬ. 1802ರಲ್ಲಿ ಅವನು ಲಿಸ್ಬನ್ ಸ್ಕೂಲ್ ಆಫ್ ಎನ್‌ಗ್ರೇವರ್‌ನ ಮುಖ್ಯಸ್ಥನಾಗಿದ್ದ ಹಾಗೂ ಕೆತ್ತನೆ, ಪೇಯಾನ್ ಮತ್ತು ಅದಕ್ಕೆ ಸಂಬಂಧಿಸಿದ ತಂತ್ರಗಳಲ್ಲಿ ಪ್ರಭುತ್ವ ಪಡೆದಿದ್ದನು. ತನ್ನ ಕೃತಿಗಳಲ್ಲಿ ಮನೋಹರವಾಗಿ ವಿಷಯವನ್ನು ಸೃಷ್ಟಿಸುತ್ತಿದ್ದ. ಇದರಿಂದ ಅವನು ಜನಪ್ರಿಯ ಕಲಾವಿದನಾಗಿದ್ದ. ಅವನು 1815ರಲ್ಲಿ ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬಾಟಿಚೆಲ್ಲಿ

ಬಾಟಿಚೆಲ್ಲಿ 1444ರಲ್ಲಿ ಫ್ಲಾರೆನ್ಸ್‌ನಲ್ಲಿ ಜನಿಸಿದ. ಬಾಲ್ಯದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿ ಬೆಳೆದು, ಚಿತ್ರಕಲೆಯ ತಂತ್ರಗಳನ್ನೆಲ್ಲಾ ಕಲಿತು ತನ್ನ ಇಷ್ಟತ್ತೈದನೆ ವಯಸ್ಸಿನಲ್ಲೇ ಫ್ಲಾರೆನ್ಸಿನ ಹೆಸರಾಂತ ಕಲಾವಿದನಾದ. ಅವನ ಚಿತ್ರಗಳ ವೈಶಿಷ್ಟ್ಯ ವೆಂದರೆ ಕಾವ್ಯಶೀಲತೆ ಮತ್ತು ಪ್ರಶಾಂತಭಾವ. ಸ್ತ್ರೀಯರ ನಾಜೂಕಾದ ಕೈಗಳು. ಮೆಡಿಸಿ ರಾಜನ ಬಳಿ ಆಸ್ಥಾನ ಕಲಾವಿದನಾಗಿದ್ದು, ಇಗರ್ಜಿಯ ಗೋಡೆಗಳಲ್ಲಿ ಕ್ರೈಸ್ತ ಪುರಾಣ ಚಿತ್ರಿಸಿದ್ದಾನೆ. ಮನುಷ್ಯಾಕೃತಿಗಳು ಅಸಹಜವೆನಿಸುವಷ್ಟು ಉದ್ದವಾಗಿದ್ದು, ಚಲನೆಯಿರುವಂತೆ ಕಾಣುತ್ತವೆ ಮತ್ತು ಅಲಂಕರಣ, ವಿವರಣೆ, ಸೂಕ್ಷ್ಮತೆ, ಚಿತ್ರದ ಹಿನ್ನೆಲೆಯಲ್ಲಿ ಪ್ರಕೃತಿಚಿತ್ರಗಳ ಬಳಕೆ, ಅವನ ಚಿತ್ರಗಳ ವೈಶಿಷ್ಟ್ಯ. ಅವನು 1510ರಲ್ಲಿ ನಿಧನಹೊಂದಿದ.

ಬಾರ್ತೊಲೊಮಿಯೋ ಪ್ರಾ

ಫ್ಲಾರೆನ್ಟೈನ್ ಚಿತ್ರಕಲಾವಿದ ಮತ್ತು ಡ್ರಾಫ್ಟ್‌ಸ್‌ಮನ್. ಅವನು 1472ರಲ್ಲಿ ಜನಿಸಿದ. ರ್‍ಯಾಸೆಲ್‌ನ ನಿಕಟ ಗೆಳೆಯ. ಅವನು ವೆನಿಸ್, ಫ್ಲಾರೆನ್ಸ್‌ಗಳಲ್ಲಿ ಚಿತ್ರಗಳನ್ನು ರಚಿಸಿ, ರೋಮಿಗೆ ಬಂದ. ಅವನ ಚಿತ್ರಗಳ ಸಂಯೋಜನೆಗಳಲ್ಲಿ ಹಿಡಿತ. ನಯ ಮತ್ತು ಸೂಕ್ಷ್ಮತೆಯ ಕುಶಲತೆ ಹಾಗೂ ವರ್ಣಗಳ ಉಪಯೋಗದಲ್ಲಿ ವಿಶೇಷತೆ ಹೊಂದಿದ್ದ.

ಬ್ರಾಕ್ ಜಾರ್ಜ್

ಫ್ರೆಂಚ್ ಕಲಾವಿದನಾದ ಬ್ರಾಕ್ 1882ರಲ್ಲಿ ಆರ್ಜೆಂಟ್ಯೂಯಿಲ್‌ನಲ್ಲಿ ಜನಿಸಿದ. ಪ್ಯಾರಿಸಿನ ಅಕಾಡೆಮಿ ಹಂಬರ್ಟ್‌ನಲ್ಲಿ ಕಲಾಶಿಕ್ಷಣ ಪಡೆದ ಹಾಗೂ ಪಾವ್ ಚಿತ್ರಕಲೆ ಅವನ ಮೇಲೆ ಪ್ರಭಾವ ಬೀರಿತು. ಪ್ರಕೃತಿಚಿತ್ರ ರಚಿಸಿದ. ಈ ಚಿತ್ರದಲ್ಲಿ ಸುಲಲಿತವಾದ ಹರಕು ಮುರುಕಾದ ಎಳೆತ ಹಾಗೂ ದಟ್ಟವಾದ ವರ್ಣಗಳಿಂದ ಕೂಡಿದ್ದು, ಅದು ಅವನ ಮೊದಲ ಸೃಜನಶೀಲ ಕೃತಿ. ಪಿಕಾಸೋವಿನ ಭೇಟಿಯಾದ ನಂತರ ಅವನ ಕೃತಿಗಳಲ್ಲಿ ವಿರೂಪ, ಸರಳತೆ, ಆಕಾರಗಳು, ಮಸುಕಾದ ವರ್ಣಗಳಿಂದ ಕೂಡಿದ ಪ್ರಕೃತಿಚಿತ್ರ, ಮನುಷ್ಯಾಕೃತಿಗಳು. ಆನಂತರದ ಚಿತ್ರಗಳು ಮ್ಯಾಟಿಸಂ ಶೈಲಿಯ ಚಿತ್ರಗಳು. ಅಲ್ಲದೆ ಕ್ಯೂಬಿಸ್ಟ್ ಚಿತ್ರಗಳಲ್ಲಿ ಟೈಪೋಗ್ರಾಫಿ ಮತ್ತು ಅನೇಕ ತಂತ್ರಗಳ ಉಪಯೋಗ, ಪಿಕಾಸೋವಿನೊಡನೆ ಕ್ಯೂಬಿಸಂ ಪಂಥದ ಮುಂದಾಳತ್ವ ವಹಿಸಿದ್ದ. ಯೂರೋಪಿಯನ್ ಚಿತ್ರ, ಶಿಲ್ಪ ಕಲೆಯಲ್ಲಿ ಮನುಷ್ಯಾಕೃತಿಯಲ್ಲಿ ಮತ್ತು ಅಮೂರ್ತ ಚಿತ್ರಕಲೆಯಲ್ಲಿ ಅನೇಕ ಬದಲಾವಣೆಗಳನ್ನು ತಂದ ಕೀರ್ತಿ ಅವನಿಗೆ ಸಲ್ಲುತ್ತದೆ. ಅವನು 1956 ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಾಂಕೂಸಿ ಕಾನ್‌ಸ್ಟಾನ್‌ಟಿನ್

ಬ್ರಾಂಕೂಸಿ 1876ರಲ್ಲಿ ರುಮೇನಿಯಾದಲ್ಲಿ ಜನಿಸಿದ ಇಪ್ಪತ್ತನೇ ಶತಮಾನದ ಮಹಾನ್ ಶಿಲ್ಪಿ. ಪ್ರಾರಂಭದಲ್ಲಿ ಮರಗೆಲಸ ಮತ್ತು ಕಲ್ಲುಕಟಿಗನಾಗಿ ತರಬೇತಿ ಪಡೆದು, ಬುಬಾರೆಸ್ಟ್‌ನಲ್ಲಿ ಶಿಕ್ಷಣ ಪಡೆದು. ಅನಂತರ ಪ್ಯಾರಿಸಿನಲ್ಲಿ ನೆಲೆಸಿದ. ಅವನ ಮೇಲೆ ಹೆಚ್ಚು ಪ್ರಭಾವ ಬಿದ್ದದ್ದು ದೇಶೀಯ ಜಾನಪದ ಕಲೆ. ಪ್ರಾರಂಭದಲ್ಲಿ ಮರ ಕತ್ತನೆ ಮತ್ತು ಕಲ್ಲಿನಲ್ಲಿ ಶಿಲ್ಪ ರಚಿಸಿ, ಆಕೃತಿಗಳಲ್ಲಿ ಸುಲಭರೂಪ ಮತ್ತು ತೀಕ್ಷ್ಣತೆ ಗಳನ್ನು ಅಭಿವ್ಯಕ್ತಿಸಿದ್ದಾನೆ. ಅವನು 1957ರಲ್ಲಿ ನಿಧನನಾದ.

ಬಿನೋದ ಬಿಹಾರಿ ಮುಖರ್ಜಿ

ಬಿನೋದ ಬಿಹಾರಿ ಅವರು 1904ರಲ್ಲಿ ಬಂಗಾಳದ ಬೆಹಲದಲ್ಲಿ ಹುಟ್ಟಿದರು. ಶಾಂತಿನಿಕೇತನದ ಕಲಾಭವನದಲ್ಲಿ ತಮ್ಮ ಕಲಾಭ್ಯಾಸ ಮುಗಿಸಿದ ನಂತರ, ಅಲ್ಲೇ ಅಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. ಅವರ ಬೋಧನಾಕ್ರಮ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ವಿಕಾಸ ಮಾಡಿಕೊಡಲು ಬಹಳ ಸಹಕಾರಿಯಾಗಿರುತ್ತಿತ್ತು. ಅವರ ಮುಖ್ಯವಾಗಿ ಟೆಂಪರಾ, ತೈಲವರ್ಣ ಹಾಗೂ ಭಿತ್ತಿಚಿತ್ರಗಳ ರಚನೆಯಲ್ಲಿ ವೈವಿಧ್ಯ ಮಯ ತಂತ್ರಗಳನ್ನು ಅಳವಡಿಸಿಕೊಂಡಿದ್ದರು. ಅವರ ಪ್ರಾರಂಭದ ಚಿತ್ರಗಳು ಶಾಂತಿನಿಕೇತನದ ಸುತ್ತಮುತ್ತಲಿನ ಪರಿಸರದಿಂದ ಪ್ರೇರಣೆಗೊಂಡು ಕಲಾಕೃತಿಗಳನ್ನು ರಚಿಸಿದ್ದು, ಅವರ ಕೃತಿಗಳಲ್ಲಿ ಹೊಸತನ ಕಾಣಬಹುದು. ಶಾಂತಿನಿಕೇತನದ ಪರಿಸರ, ಸಂತಾಲರ ಜೀವನ, ಯಾವುದೇ ಸ್ಥಳಕ್ಕೆ ಹೋದರೂ ಅಲ್ಲಿನ ವಾತಾವರಣಕ್ಕೆ ಸಂಬಂಧಿಸಿದ ಚಿತ್ರಗಳನ್ನು ರಚಿಸುವುದು ಅವರ ಪದ್ಧತಿ. ಬಹುಮುಖ ಪ್ರತಿಭೆ ಯುಳ್ಳ ಅವರು ಗ್ರಾಫಿಕ್ ಕಲೆಯ ವಿವಿಧ ಮಾಧ್ಯಮಗಳನ್ನು ತಿಳಿದುಕೊಂಡಿದ್ದು, ಅನೇಕ ಕೃತಿಗಳನ್ನು ರಚಿಸಿದ್ದಾರೆ. ಬಿಹಾರಿಯವರು ಚಿತ್ರಕಲೆಯಲ್ಲಿ ಎಷ್ಟು ಪರಿಣತರೋ, ಭಿತ್ತಿಚಿತ್ರಗಳ ರಚನೆಯಲ್ಲಿ ಪರಿಣತರಾಗಿದ್ದು, ಭಾರತದಲ್ಲಿ ಸಮಕಾಲೀನ ಭಿತ್ತಿಚಿತ್ರಗಳ ಹೊಸ ಪಂಥಕ್ಕೆ ಕಾರಣಕರ್ತರು. ಜಾನಪದ ಹಾಗೂ ಆಧುನಿಕ ಮೂಲ ಗಳಿಂದ ಅನೇಕ ವಿಚಾರಗಳನ್ನು ಭಿತ್ತಿಚಿತ್ರಗಳಲ್ಲಿ ಅಳವಡಿಸಿದ್ದಾರೆ. ಅವರು ಸೂಕ್ಷ್ಮ ಸ್ವಭಾವದವರಾದ ಅವರ ಕೃತಿಗಳ ರಚನೆಯಲ್ಲಿ ಒಟ್ಟಂದ, ದೃಶ್ಯದ ಸ್ಪಷ್ಟತೆ ಮತ್ತು ಮಾಧ್ಯಮದ ಮೇಲೆ ಪ್ರಭುತ್ವವನ್ನು ಹೊಂದಿದ್ದರು. ತಮ್ಮ ಕಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದರೂ, ಪೇಪರ್‌ಕಟ್ ಕೊಲಾಜ್ ಮತ್ತು ಅಲಂಕರಣ ಶಿಲ್ಪಗಳನ್ನು ರಚಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೀರೇಶ್ವರ್ ಸೇನ್

1897ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ ಸೇನ್, ಸಾಹಿತ್ಯದೊಂದಿಗೆ ಚಿತ್ರಕಲೆಯನ್ನು ಕಲಿತಿದ್ದರು. ಅಲ್ಲದೆ ಅಬನೀಂದ್ರನಾಥ ಟಾಗೂರರ ಶಿಷ್ಯರಾಗಿ, ಬಂಗಾಳಿ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿದ್ದರು. ಅನಂತರ ಮೊಗಲ್ ಕಾಲದ ವಿಷಯಗಳಿಂದ ಸ್ಫೂರ್ತಿ ಪಡೆದು ಚಿತ್ರ ರಚಿಸಿದರು ಮತ್ತು ಪ್ರಕೃತಿ ಚಿತ್ರಗಳಲ್ಲಿ ವಿಶೇಷ ವರ್ಣಸಂಯೋಜನೆ ಕಾಣಬಹುದು. ಅವರು ರಚಿಸಿರುವ ಹಿಮಾಲಯ ಚಿತ್ರಗಳು ಪ್ರಸಿದ್ಧಿ ಪಡೆದಿವೆ ಹಾಗೂ ಜಲವರ್ಣ ಮಾಧ್ಯಮದಲ್ಲಿ ಪ್ರಭುತ್ವ ಪಡೆದಿದ್ದರು.

ಬಿರೇನ್ ಡೇ

ಬಿರೇನ್ ಡೇ 1926ರಲ್ಲಿ ಬಂಗಾಳದಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಕಲ್ಕತ್ತಾದ ಸರಕಾರಿ ಕಲಾಶಾಲೆಯಲ್ಲಿ ಪಡೆದರು. ಅವರ ಮೊದಲ ಚಿತ್ರಗಳು ಮನುಷ್ಯಾಕೃತಿಗಳಿಂದ ಕೂಡಿದ್ದು, ಭಾವಚಿತ್ರಗಳು ವಾಸ್ತವಿಕತೆ ಹಾಗೂ ಸಂಯೋಜನಾ ಚಿತ್ರಗಳು ಅಮೂರ್ತ ಶೈಲಿಯಲ್ಲಿವೆ. 1950ರ ಚಿತ್ರಗಳಲ್ಲಿ ಮನುಷ್ಯಾಕೃತಿಗಳ ಮತ್ತು ಪ್ರಕೃತಿಯ ಸಂಯೋಜನೆಗಳಲ್ಲಿ ಉಜ್ವಲವಾದ ವರ್ಣ, ಬಾಗಿರುವ ರೇಖೆಗಳು ಪ್ರಧಾನವಾಗಿವೆ. ಅನಂತರದ ಚಿತ್ರಗಳಲ್ಲಿ ಹೆಣ್ಣು ಮತ್ತು ಗಂಡಿನ ಜೀವನದ ತಂತ್ರಕ್ಕೆ ಸಂಬಂಧಿಸಿದ್ದಾಗಿವೆ. ಇವುಗಳಲ್ಲಿ ಉಜ್ವಲವಾದ ವರ್ಣಗಳು, ಕಲ್ಪನೆಗಳ ಮತ್ತು ಸಂಕೇತಗಳು ಹಾಗೂ ಚಿತ್ರಗಳ ಮಧ್ಯದಲ್ಲಿ ಯಂತ್ರ ಸಂಕೇತವಿದ್ದು, ಬಣ್ಣಗಳು, ಆಕಾರಗಳು, ಜಾಮಿತಿ ರಚನೆಗಳು ಚಿತ್ರದ ಕೇಂದ್ರ ಪ್ರದೇಶದಲ್ಲಿರುವ ಶಕ್ತಿಯ ಸಂಕೇತದತ್ತ ಮನಸ್ಸನ್ನು ಕೇಂದ್ರೀಕರಿಸುತ್ತದೆ.

ಭಿಕಾಸ್ ಭಟ್ಟಾಚಾರ್ಜಿ

ಭಿಕಾಸ್ 1940ರಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಕಲ್ಕತ್ತಾದ ಸರ್ಕಾರಿ ಕಲಾಶಾಲೆಯಿಂದ 1965ರಲ್ಲಿ ಪಡೆದು ಪ್ರಸ್ತುತ ಅಲ್ಲೇ ಕಲಾ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದಾರೆ. ವೀಕ್ಷಕರ ಗಮನ ಸೆಳೆಯುವ ಕಲ್ಕತ್ತಾ ನಗರದ ದೃಶ್ಯಗಳ ಚಿತ್ರಗಳಿಂದ ಅವರು ಜನಪ್ರಿಯರಾಗಿದ್ದಾರೆ. ನಯ ನಾಜೂಕಿಲ್ಲದ, ಮಾರಕವಾದ, ವಿಕಾಂಗಿಯಾದ ಜನರ ಭ್ರಮೆಗಳನ್ನು ವಾಸ್ತವತೆ, ಮನುಷ್ಯ ಮತ್ತು ಅವನ ಪರಿಸರದ ಚಿತ್ರಣ ಕಾಣಬಹುದು. ತಾಂತ್ರಿಕವಾಗಿ, ವರ್ಣಗಳು ಮತ್ತು ರೂಪಗಳ ಹೊಂದಾಣಿಕೆ, ಛಾಯಾಚಿತ್ರಣದಂತೆ, ಅಂತರ್ಭಾವ, ಕಲ್ಪನೆಗಳನ್ನು ಕೌಶಲದಿಂದ, ಸಾಂಕೇತಿಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಗಿ ಸಂಯೋಜಿಸುವರು. ಪ್ರತಿಯೊಂದು ಚಿತ್ರವೂ ಸಾಮಾಜಿಕ ನಿರೂಪಣೆಯಾಗಿದ್ದು, ಈ ನಿರೂಪಣೆಯನ್ನು ನೇರವಾಗಿ, ಆಕಾರಗಳನ್ನು ವಾಸ್ತವವಾಗಿ ಮತ್ತು ತಾವು ಕಂಡ ಅನುಭವಗಳನ್ನು ಊಹಾತೀತವಾಗಿ ರಚಿಸಿದ್ದು, ಸರ್‌ರಿಯಲಿಸ್ಟ್ ಶೈಲಿಗೆ ಸೇರಿದವು.

ಬುಪೆನ್ ಕಕ್ಕರ್

ಬುಪೆನ್ ಕಕ್ಕರ್ ಮುಂಬಯಿನಲ್ಲಿ 1934ರಲ್ಲಿ ಜನಿಸಿದ್ದು, ಅರ್ಥಶಾಸ್ತ್ರದಲ್ಲಿ ಪದವಿ ಪಡೆದು, ಚಾರ್ಟರ್ಡ್ ಅಂಕೌಂಟೆಂಟ್ ವೃತ್ತಿಯಲ್ಲಿದ್ದು, ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಿಂದ ಕಲಾವಿಮರ್ಶೆಯಲ್ಲಿ ಎಂ.ಎ. ಪದವಿ ಪಡೆದಿದ್ದಾರೆ. ಅವರ ಚಿತ್ರಗಳ ವಸ್ತು ಸಾಮಾನ್ಯವಾಗಿ ಭಾರತೀಯ ಪರಿಸರವನ್ನು ಹೊಂದಿದ್ದು, ನಗರ ಜೀವನದ ಸಂಸ್ಕೃತಿಯ ಸಮ್ಮಿಶ್ರಣವನ್ನು ಕಾಣಬಹುದು. ಮಧ್ಯಮ ವರ್ಗದ ಪರಿಸರದ ವಿಡಂಬನೆ, ದೇವರುಗಳು, ಭಾರತೀಯ ಬಜಾರನ ಕಲ್ಪನೆಗಳು, ಮಿನಿಯೇಚರ್ ಚಿತ್ರಗಳಿಂದ ಸ್ಫೂರ್ತಿಪಡೆದು, ಕೊಲಾಜ್ ಮಾಧ್ಯಮದಲ್ಲಿ ಚಿತ್ರಗಳ ರಚನೆ, ಓಲಿಯೋಗ್ರಾಫಿ ಪ್ರಿಂಟ್ಸ್ ಮತ್ತು ಕ್ಯಾಲೆಂಡರ್‌ನ ದೇವರುಗಳನ್ನು ತಮಗೆ ಬೇಕಾದ ರೀತಿಯಲ್ಲಿ ಕತ್ತರಿಸಿ ವಿಚಿತ್ರ ಭಾವನೆಗಳಿಂದ ಚಿತ್ರಗಳ ನಿರ್ಮಾಣ, ಇದಕ್ಕೆ ಪಾಪ್ ಕಲೆಯಿಂದ ಸ್ಫೂರ್ತಿ ಪಡೆದಿದ್ದಾರೆ.

ಮಿನಿಯೇಚರ್ ಚಿತ್ರಗಳ ಸ್ಫೂರ್ತಿಯಿಂದ. ಮಧ್ಯಮವರ್ಗವನ್ನು ಕುರಿತು ರಚಿಸಿದ ಚಿತ್ರಗಳಲ್ಲಿ ಕಣ್ಣಿಲೆ, ಉಜ್ವಲ ವರ್ಣಗಳು, ಕ್ಷಿತಿಜದ ಮಹತ್ವಗಳನ್ನು ಚಿತ್ರಾತ್ಮವಾಗಿ ಹಾಗೂ ದಿನನಿತ್ಯದ ಜೀವನವನ್ನು ಚಿತ್ರಗಳಲ್ಲಿ ಪ್ರತಿಬಿಂಬಿಸುವರು. ಅದರಲ್ಲೂ ಮಧ್ಯಮವರ್ಗದವರ ಆಸೆ, ಆಕಾಂಕ್ಷೆ, ಅವರ ಸಮಸ್ಯೆಗಳನ್ನು ಚಿತ್ರಿಸುವುದರಲ್ಲಿ ಭಾರತೀಯ ಕಲಾವಿದರಲ್ಲೇ ಮೊದಲಿಗರೆನ್ನಬಹುದು.

ಬೆಕ್‌ಮಾನ್ ಮಾಕ್ಸ್

ಮಾಕ್ಸ್ 1884ರಲ್ಲಿ ಜನಿಸಿದ್ದು, ಚಿತ್ರ ಮತ್ತು ಲಿಥೋಗ್ರಾಫ್, ವುಡ್‌ಕಟ್ ಕಲಾವಿದ. ಅಲ್ಲದೆ ಇಪ್ಪತ್ತನೆ ಶತಮಾನದಲ್ಲಿ ಮನುಷ್ಯಾಕೃತಿಗಳ ರಚನೆಯಲ್ಲಿ ಖ್ಯಾತಿ ಪಡೆದ ಕಲಾವಿದ. ಮಿಲಿಟರಿಯಲ್ಲಿ ಆರೋಗ್ಯ ವಿಭಾಗದಲ್ಲಿ ಕೆಲಸ ಮಾಡಿ, ನಂತರ ಸ್ಕೂಲ್ ಆಫ್ ಆರ್ಟ್ಸ್‌ನಲ್ಲಿ ಕಲಾಶಿಕ್ಷಕನಾಗಿ, ಅಲ್ಲಿಂದ ಅಮ್‌ಸ್ಟರ್‌ಡ್ಯಾಂ ಹಾಗೂ ಅಮೆರಿಕಾಗೆ ಬಂದನು. ಅವನ ಚಿತ್ರಗಳಲ್ಲಿ ಯುದ್ಧದ ಭೀಕರತೆಯ ಚಿತ್ರಣವನ್ನು ಪ್ರಾರಂಭದಲ್ಲಿ ಕಾಣಬಹುದು. ನಂತರದ ಚಿತ್ರಗಳಲ್ಲಿ ದಿನನಿತ್ಯದ ಚಿತ್ರಗಳನ್ನು ಚಿತ್ರಿಸಿ, 1950ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೆಂಜಮಿನ್ ವೆಸ್ಟ್

1738ರಲ್ಲಿ ಜನಿಸಿದ ಅವನು ಅಮೆರಿಕಾದ ಭಾವಚಿತ್ರ ಮತ್ತು ಚಾರಿತ್ರಿಕ ಸನ್ನಿವೇಶಗಳನ್ನು ಚಿತ್ರಿಸಿದ ಕಲಾವಿದನಾಗಿದ್ದು, ಲಂಡನ್ನಿನಲ್ಲಿ ನೆಲೆಸಿದ್ದ. ಇಟಲಿಯಲ್ಲಿದ್ದಾಗ ನ್ಯೂ ಕ್ಲಾಸಿಸಮ್‌ನಿಂದ ಪ್ರಭಾವಿತನಾಗಿದ್ದು, ಅವನು ರಚಿಸಿದ ಚಾರಿತ್ರಿಕ ಚಿತ್ರ 'ಡೆತ್ ಆಫ್ ವುಲ್ಫ್' ಅತ್ಯಂತ ಜನಪ್ರಿಯವಾದ ಚಿತ್ರ.

ಬೆನ್ ನಿಕೋಲಸನ್

1894ರಲ್ಲಿ ಜನಿಸಿದ ಇಂಗ್ಲಿಷ್ ಚಿತ್ರಕಲಾವಿದ. 1911ರಲ್ಲಿ ಸ್ಲೇಡ್ ಸ್ಕೂಲ್‌ನಲ್ಲಿ ಕೆಲವು ಕಾಲವಿದ್ದು. ಅನಂತರ ಫ್ರಾನ್ಸ್, ಇಟಲಿ, ಸ್ಪೇನ್ ಮತ್ತು ಅಮೆರಿಕಾ ದೇಶಗಳಿಗೆ ಪ್ರವಾಸ ಮಾಡಿದನು. 1920ರಲ್ಲಿ ಕ್ಯೂಬಿಸಂ ಶೈಲಿಯಲ್ಲಿ ಚಿತ್ರಗಳನ್ನು ರಚಿಸಿದ. ಅಮೂರ್ತದ ಉಬ್ಬು ಚಿತ್ರಗಳನ್ನು ರಚಿಸುವುದರಲ್ಲಿ ಹೆಸರು ಪಡೆದಿದ್ದಾನೆ.

ಬೇಂದ್ರೆ ಎನ್. ಎಸ್.

ಕಲೆಯಲ್ಲಿ ವರ್ಣಚಿತ್ರಕ್ಕೆ ಹೆಸರಾಗಿದ್ದ ಬಂಗಾಳವನ್ನು ಬಿಟ್ಟರೆ, ಮುಂಬಯಿ ವರ್ಣಚಿತ್ರಗಳಿಗೆ ಹೆಸರುವಾಸಿಯಾಗಿತ್ತು. ಅಂತಹ ರಾಜ್ಯದಲ್ಲಿ ವರ್ಣಚಿತ್ರದಲ್ಲಿ ಕುಶಲರಾದವರು ಎನ್. ಎಸ್. ಬೇಂದ್ರೆ. ಅವರು 1910ರಲ್ಲಿ ಮಧ್ಯಪ್ರದೇಶದ ಇಂದೂರಿನಲ್ಲಿ ಜನಿಸಿದರು. ತಮ್ಮ ಪ್ರಾರಂಭಿಕ ಕಲಾಶಿಕ್ಷಣವನ್ನು ಇಂದೂರು ಸ್ಕೂಲ್ ಆಫ್ ಆರ್ಟ್‌ನಲ್ಲಿ, ಅನಂತರ ಮುಂಬಯಿಯಲ್ಲಿ ಡಿಪ್ಲೊಮೊವನ್ನು ಪಡೆದರು. ಅವರ ಮೊದಲ ಕಲಾಕೃತಿಗಳು ತೈಲವರ್ಣ, ಜಲವರ್ಣ, ಕ್ರೆಯಾನ್‌ನಿಂದ ರಚಿಸಿದ್ದು. ಅವು ಊಹಾತ್ಮಕ ಪ್ರಕೃತಿಯ ರಮ್ಯನೋಟ ಮತ್ತು ರೇಖಾಚಿತ್ರಗಳು. ಅನೇಕ ಮಾಧ್ಯಮಗಳ ಮೂಲ ಅವರು ಪ್ರಯೋಗ ನಡೆಸಿ, ಕುಶಲತೆಯ ತಂತ್ರವನ್ನು ಅರಿತಿದ್ದರು. ಅವರ ಕೃತಿಗಳು ಪ್ರತಿಭೆ, ಸೃಜನತೆಯಿಂದ ಕೂಡಿದ ಮತ್ತು ವೈಯಕ್ತಿಕತೆಯ ಅನುಭವವನ್ನು ಕಾಣಬಹುದು. ಅನಂತರದ ಚಿತ್ರಗಳಲಿ ಭಾವಪ್ರಧಾನವಾದ ವರ್ಣ ಸಂಯೋಜನೆ ಮತ್ತು ವಾಸ್ತವಿಕತೆಯ ಪ್ರಭಾವವಿದ್ದು, ಭಾವನಾತ್ಮಕ ಗುಣಗಳನ್ನು ಹೊಂದಿದೆ. ಅವರು ಅಮೆರಿಕಾ, ಇಂಗ್ಲೆಂಡ್ ಮತ್ತು ಯೂರೋಪ್ ದೇಶಗಳ ಪ್ರವಾಸ ಮುಗಿಸಿ ಬಂದನಂತರ ಅವರ ಸೌಂದರ್ಯಪ್ರಜ್ಞೆ ಹೆಚ್ಚಿ, ಅವರ ಕಲಾಕೃತಿಗಳಲ್ಲಿ ಚಿತ್ರಾತ್ಮಕವಾದ ರಚನೆಯಲ್ಲಿ ಹೊಸತನ ಬಂದಿತು. ಕಲೆಯ ಅನುಭವದಿಂದ ವರ್ಣಗಳನ್ನು ಲಯಬದ್ಧವಾಗಿ, ದಕ್ಷತೆ, ಲಯ ಮತ್ತು ಬಣ್ಣಗಳಲ್ಲಿ ಸ್ಪಂದನ ಹಾಗೂ ತಮ್ಮ ಸುತ್ತಲಿನ ಸ್ಥಳಗಳನ್ನು ಸೌಂದರ್ಯಪ್ರಜ್ಞೆಯಿಂದ ನೋಡಿ ಬಣ್ಣಗಳನ್ನು ಸಂಯೋಜಿಸಿ, ಪ್ರಾವೀಣ್ಯತೆಯಿಂದ ರಚಿಸುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬೊಕಾಶಿಯೋ ವುಂಬರ್ಟೊ

ಬೊಕಾಶಿಯೋ 1882ರಲ್ಲಿ ಇಟಲಿಯಲ್ಲಿ ಹುಟ್ಟಿದ ಮತ್ತು ಅವನು ಫ್ಯೂಚರಿಸ್ಟ್ ಚಿತ್ರ, ಶಿಲ್ಪ ಮತ್ತು ಬರಹಗಾರರ ಫ್ಯೂಚರಿಸಂನ ಘೋಷಣೆಗಳಲ್ಲಿ ಆಸಕ್ತಿ ಬಂದು, ಪ್ಯಾರಿಸಿನಲ್ಲಿ 1912ರಲ್ಲಿ ನಡೆದ ಫ್ಯೂಚರಿಸಂ ಕಲಾಪ್ರದರ್ಶನದಲ್ಲಿ ತನ್ನ ಕಲಾಕೃತಿಗಳನ್ನು ಪ್ರದರ್ಶಿಸಿದ್ದ ಮತ್ತು ಅವನ್ನು ಸಂಗ್ರಹಿಸಿ ಪುಸ್ತಕ ಬರೆದಿದ್ದಾನೆ. 'ದಿ ಸಿಟಿ ರೈಸಸ್' ಚಿತ್ರ ಮತ್ತು 'ಯೂನಿಕ್‌ಫಾರ್ಮ್ಸ್ ಆಫ್ ಕಮ್ಯೂನಿಟಿ ಇನ್ ಸ್ಪೇಸ್' ಶಿಲ್ಪದಲ್ಲಿ ಫ್ಯೂಚರಿಸಂ ವಿಶೇಷಗುಣಗಳಿಂದ ಕೂಡಿದೆ. ಅವನು 1916ರಲ್ಲಿ ನಿಧನನಾದ.

ಬೋಚ್ ಹೈರೋಯೂಮಸ್

ಬೋಚ್ 1450ರಲ್ಲಿ ನೆದರ್‌ಲ್ಯಾಂಡ್‌ನಲ್ಲಿ ಜನಿಸಿದ. 1511ರಲ್ಲಿ ಬ್ರದರ್‌ವುಡ್ಸ್ ಕ್ರೈಸ್ತರ ಆರಾಧನ ಮಂದಿರದ ಕಿಟಕಿಗಳನ್ನು ಸ್ಟೈಯಿನ್ ಗ್ಲಾಸ್‌ನಿಂದ ಚಿತ್ರಗಳನ್ನು ರಚಿಸಿದ್ದಾನೆ ಮತ್ತು ಅವನ ಚಿತ್ರಗಳಲ್ಲಿ ವಿಡಂಬನೆ ಕಾಣಬಹುದು. ಈ ಪ್ರಪಂಚವು ಅತ್ಯಂತ ದುಷ್ಟವಾದುದೆಂದು ಪರಿಗಣಿಸಿ ವ್ಯಾಖ್ಯಾನ ಮತ್ತು ದಿನನಿತ್ಯದ ಚಿತ್ರಗಳ ರಚನೆಯಲ್ಲಿ ಆಸಕ್ತಿ. ಇದರಿಂದ ಅವನ ಚಿತ್ರಗಳಲ್ಲಿ ಆಕಾರ ಮತ್ತು ವಸ್ತುವಿನ ಆಯ್ಕೆಯಲ್ಲಿ ಒಟ್ಟಂದವನ್ನು ಕಾಣಬಹುದು. ಅವನ ಪ್ರತಿಯೊಂದು ಚಿತ್ರದ ಹಿಂಭಾಗದಲ್ಲಿ ಪ್ರಕೃತಿಚಿತ್ರ ಇರುವುದು ವೈಶಿಷ್ಟ್ಯ ಹಾಗೂ ಒಟ್ಟು ಚಿತ್ರವನ್ನು ವೀಕ್ಷಿಸಿದಾಗ ಒಂದು ರೀತಿಯ ಪ್ಯಾಂಟಸಿ ಕಾಣಬಹುದು. ಅವನು 1516ರಲ್ಲಿ ತೀರಿಕೊಂಡ.

ಬೊನಾರ್ಡ್ ಪಿಯ್ರೆ

ಬೊನಾರ್ಡ್ ಫ್ರೆಂಚ್ ದೇಶದವನಾಗಿದ್ದು 1869ರಲ್ಲಿ ಹುಟ್ಟಿದ. ಅವನು ಲಿಥೋಗ್ರಾಫಿ ಮತ್ತು ಡಿಸೈನರ್‌ನಾಗಿದ್ದು, ಅಕಾಡೆಮಿ ಜೂಲಿಯಲ್ಲಿ ಕಲಾಶಿಕ್ಷಣ ಪಡೆದ. ಅವನ ಮೊದಲ ಗ್ರಾಫಿಕ್ ಚಿತ್ರಗಳಲ್ಲಿ ತೀವ್ರತೆ ಮತ್ತು ಹಲವು ಬಾರಿ ವಿನೋದವನ್ನು ಕಾಣಬಹುದು. ಆವು ಅನುಭವದಿಂದ, ಹಲವು ಬಾರಿ ಸಹಜ ಪ್ರವೃತ್ತಿಯಾಗಿ ಬರುತ್ತವೆ ಹಾಗೂ ಸಂಯೋಜನೆಗಳು ಅಲಂಕಾರವಾಗಿದ್ದು, 1900ರ ನಂತರದ ಚಿತ್ರಗಳಲ್ಲಿ ಕಲ್ಪನೆಗಳು ಹೆಚ್ಚಾಗಿರುವುದನ್ನು ಕಾಣುತ್ತೇವೆ. ಅವನು 1947ರಲ್ಲಿ ತೀರಿಕೊಂಡ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಸಾಚಿಯೋ

ಫ್ಲಾರೆನ್ಸಿನ ಚಿತ್ರಕಲಾವಿದನಾಗಿದ್ದು. 1401ರಲ್ಲಿ ಜನಿಸಿದ. ಪುನರುಜ್ಜೀವನ ಯುಗದ ಪ್ರಾರಂಭದ ಕ್ರಾಂತಿಕಾರಿ ಕಲಾವಿದನಾಗಿದ್ದು, ಅವನ ಭಿತ್ತಿಚಿತ್ರ ಫ್ಲಾರೆನ್ಸ್‌ನ ಮೇರಿಯಾ ನೊವೆಲ್ಲಾ ಚರ್ಚಿನಲ್ಲಿದ್ದು, ಪವಿತ್ರತ್ರಯರು ಎಂಬುದೂ ಚಿತ್ರದ ವಸ್ತು ವಾಗಿದೆ. ಅವನ ಇನ್ನೊಂದು ಪ್ರಸಿದ್ಧ ಚಿತ್ರ ಬೈಬಲಿನ ಕಥಾನಕ. ಚಿತ್ರಕಾರರು ನಗ್ನ ದೇಹಿಗಳನ್ನು ಬರೆಯಲು ಅಂಜುತ್ತಿದ್ದಾಗ, ಆ ಅಳಕನ್ನು ಮಸಾಚಿಯೋ ಕಳಚಿ, ಹೊಸ ಪರಂಪರೆ ಸೃಷ್ಟಿಸಿದ.

ಮಂಜೀತ ಭಾವ

ಮಂಜೀತ ಭಾವ 1941ರಲ್ಲಿ ಪಂಜಾಬಿನಲ್ಲಿ ಜನಿಸಿದ್ದು, ಕಲೆಯಲ್ಲಿ ಡಿಪ್ಲೊಮೊ ಮತ್ತು 1963ರಲ್ಲಿ ಇಂಗ್ಲೆಂಡಿನಲ್ಲಿ ಸಿಲ್ಕ್‌ಸ್ಕ್ರೀನ್‌ನಲ್ಲಿ ಡಿಪ್ಲೊಮೊ ಪಡೆದಿದ್ದಾರೆ. ಚಿತ್ರ ಮತ್ತು ಗ್ರಾಫಿಕ್ ಮಾಧ್ಯಮದಲ್ಲಿ ಕೃತಿಗಳನ್ನು ರಚಿಸಿರುವ ಅವರ ಕೃತಿಗಳು ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಪ್ರದರ್ಶಿತವಾಗಿವೆ. ಅದರಲ್ಲೂ ದೆಹಲಿ ಮತ್ತು ಲಂಡನ್‌ಗಳಲ್ಲಿ ಮುಖ್ಯವಾದುವು. ತಮ್ಮ ಕಲ್ಪನೆಗಳನ್ನು ವಿಶಿಷ್ಟವಾಗಿ ಭ್ರಾಮಿಕವಾಗಿ ಚಿತ್ರಿಸುವ ಅವರು ಇತ್ತೀಚಿಗೆ ತಮ್ಮ ಚಿತ್ರಗಳಲ್ಲಿ ಪೌರಾಣಿಕ ವಿಷಯಗಳನ್ನು ಕಲ್ಪನಾತ್ಮಕವಾಗಿ ಚಿತ್ರಿಸುತ್ತಿದ್ದಾರೆ.

ಮನು ಪರೇಖ್

ಪರೇಖ್ 1939ರಲ್ಲಿ ಅಹಮದಾಬಾದಿನಲ್ಲಿ ಹುಟ್ಟಿದ್ದು, ಸರ್. ಜೆ. ಜೆ. ಕಲಾ ಶಾಲೆಯಿಂದ 1962ರಲ್ಲಿ ಕಲೆಯಲ್ಲಿ ಡಿಪ್ಲೊಮೊ ಪಡೆದಿದ್ದಾರೆ. ಮುಂಬಯಿನಲ್ಲಿ ಕೆಲವು ಕಾಲ ನಾಟಕಗಳಲ್ಲಿ ಅಭಿನಯಿಸಿ, ಅನಂತರ ವೀವರ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕಲಾವಿದರಾಗಿ ಸೇರಿದರು. ಕೆಲವು ಕಾಲ ಕಲ್ಕತ್ತಾ, ಮುಂಬಯಿ ಹಾಗೂ ದೆಹಲಿಗಳಲ್ಲಿ ಕೆಲಸ ನಿರ್ವಹಿಸಿ, ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 1972ರಲ್ಲಿ ಐಪೆಕ್ಸ್, 1974ರಲ್ಲಿ ಬಿರ್ಲಾ ಅಕಾಡೆಮಿ ಮುಂತಾದ ಸಂಸ್ಥೆಗಳಿಂದ ಬಹುಮಾನ ಪಡೆದಿದ್ದಾರೆ. ತಮ್ಮ ಚಿತ್ರಗಳಲ್ಲಿ ಮನುಷ್ಯ ಮತ್ತು ಅವನ ಅಂಕುರಗಳ ಬೆಳವಣಿಗೆಗಳ ತತ್ವ ಮುಖ್ಯವಾಗಿರುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಕ್ಬರ್ ಪದ್ಮಶಿ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಎರ್ವಿಸ್ಟ್ ಲುಡೆವಿಗ್ ಕ್ರಿಚನರ್



ಕೃಷ್ಣಾ ರೆಡ್ಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಬ್ರಾಂಕುಸಿ ಕಾನ್‌ಸ್ಟ್ಯಾಟಿನ್



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಾಲಗೋಗಿ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಿಕಾಸ್ ಭಟ್ಟಾಚಾರ್ಯ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿರಕೋ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜಾರ್ಜ್‌ಬ್ರಾಕ್



ಎಡ್ವರ್ಡ್ ಮುಂಚ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಂದಲಾಲ್ ಬೋಸ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮ್ಯಾಕ್ಸ್ ಅರ್ನೆಸ್ಟ್

ಮಾರ್ಕ್ ಷಗಾಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಎ. ರಾಮಚಂದ್ರನ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸೋಮನಾಥ ಹೋರೆ



ಮೋಂಡ್ರಿಯಾನ್
-ಬ್ರಾಡ್ವೇ ಬೂಗೀ-ವೂಗೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಾರ್ಸೆಲ್ ಡೂಷಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶ್ಯಾಮಲದತ್ತರೆ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಾಂತಿದಪೆ



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆನ್ರಿ ಮಾಟಿಸ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆನ್ರಿ ಮೂರ್



CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮಧುಕರ್ ಸೇಟ್

ಮಧುಕರ್ ಸೇಟ್ ನಂದಲಾಲರ ಶಿಷ್ಯರಾಗಿದ್ದು, ಶಾಂತಿನಿಕೇತನದಲ್ಲಿ ಕಲಾಶಿಕ್ಷಣ ಪಡೆದಿದ್ದರು. ಅನಂತರ ಮುಂಬಯಿಗೆ ಬಂದು, ಕಲಾವಿದರಾಗಿ, ಅನೇಕ ಮಕ್ಕಳ ಪುಸ್ತಕ ಗಳಿಗೆ ಚಿತ್ರಗಳನ್ನು ಬರೆದಿದ್ದಾರೆ. ವಾಸ್ತವಿಕ ಚಿತ್ರಣದಲ್ಲಿ ಸಿದ್ಧಿಪಡೆದಿದ್ದ ಆವರು ಜಾನಪದ ಮತ್ತು ಗ್ರಾಮೀಣ ಜನರ ಬಗ್ಗೆ ಚಿತ್ರಗಳನ್ನು ರಚಿಸಿದ್ದಾರೆ. ಮರಕೆತ್ತನೆ ಮತ್ತು ಲಿನೋಕಟ್‌ಗಳಲ್ಲಿ ರೇಖಾತ್ಮಕ ಮತ್ತು ಭಾವಗೀತಾತ್ಮಕ ಗುಣಗಳಿದ್ದು, ಕೆಲವು ಕಾಲ ಮುರಗಿಡ, ಪ್ರಾಣಿಗಳನ್ನು ಚಿತ್ರಿಸಿದ್ದಾರೆ. ಚಿಕಣಿ ಗಾತ್ರದಲ್ಲಿ ಪ್ರಕೃತಿಚಿತ್ರಗಳನ್ನು ರಚಿಸಿದ್ದು ಕುಶಲತೆ, ಮೋಡ, ಮಂಜು ಮುಂತಾದುವುಗಳಲ್ಲಿ ವೈಶಿಷ್ಟ್ಯ ಕಾಣ ಬಹುದು.

ಮಾರ್ಕ್ ರೊಥೊಕೊ

ರೊಥೊಕೊ ಮೂಲತಃ ರಷ್ಯಾದೇಶದವನಾಗಿದ್ದು, 1903ರಲ್ಲಿ ಹುಟ್ಟಿದ. ಅಮೂರ್ತ ಅಭಿವ್ಯಕ್ತವಾದದ ಮುಖ್ಯ ಕಲಾವಿದರಲ್ಲಿ ಒಬ್ಬನಾಗಿದ್ದು, ಕಲೆಯನ್ನು ಮಾಕ್ಸ್‌ವೇಬರ್ ಬಳಿ ಕಲಿತ. ಮೀರೋ, ಆರ್ನೆಸ್ಟ್ ಮತ್ತು ಅವೆರಿಕಾದ ಸರ್‌ರಿಯ ಲಿಸ್ಟ್ ಕೃತಿಗಳಿಂದ ಪ್ರಭಾವಿತನಾಗಿ, ಅನೇಕ ಮಹತ್ವದ ಕೃತಿಗಳನ್ನು ರಚಿಸಿದ್ದಾನೆ. 1948ರಲ್ಲಿ ರಚಿಸಿದ ಚಿತ್ರಗಳಲ್ಲಿ ಅಮೂರ್ತವಾಗಿ ಪ್ರತಿಮೆ ಅಥವಾ ಸಂಕೇತಗಳನ್ನು ವರ್ಣ, ರೇಖೆ ಮತ್ತು ಆಕಾರಗಳಲ್ಲಿ ಮೂಡಿಸಿದ್ದಾನೆ. ಸಮತಲವಾಗಿರುವ ಆಯತಾ ಕಾರಗಳು ಅಸ್ಪಷ್ಟತೆಯ ಕೊನೆಗಳು, ಹಿಂಬದಿಯ ವರ್ಣಗಳು ಒಂದಕ್ಕೊಂದು ಸಂಬಂಧ ವಿರುತ್ತವೆ. ಅವನು 1970ರಲ್ಲಿ ನಿಧನನಾದ.

ಮಾನೀಷ್ ಡೇ

ಡೇ ಅವರ ಮೊದಲ ಕಲಾಗುರುಗಳು ಅಬನೀಂದ್ರನಾಥ ಟಾಗೂರ್ ಮತ್ತು ಶಾಂತಿನಿಕೇತನದಲ್ಲಿ ನಂದಲಾಲರ ಬಳಿ ಕಲಾಭ್ಯಾಸ. ಗುರುಗಳ ಪ್ರಭಾವ ಆವರ ಚಿತ್ರಗಳ ಮೇಲೆ ಕಂಡರೂ, ನಂತರ ತಮ್ಮ ಸ್ವಂತಿಕೆ ಕಂಡುಕೊಂಡರು. ವಿವಿಧ ಶೈಲಿ ಮತ್ತು ವಿವಿಧ ವಿಷಯಗಳ ಬಗ್ಗೆ ಚಿತ್ರಗಳನ್ನು ರಚಿಸಿದ್ದು, ಆವರು ರಚಿಸಿರುವ ಭಿತ್ತಿ ಪತ್ರ-ಚಿತ್ರಗಳು ವಿಶೇಷ ಮನ್ನಣೆ ಪಡೆದಿವೆ. ಭಾರತೀಯ ಮಹಿಳೆಯ ಬಗೆ ರಚಿಸಿರುವ ಅನೇಕ ಚಿತ್ರಗಳು ಜನಪ್ರಿಯವಾಗಿವೆ. ಮುಂಬಯಿ ಮತ್ತು ಗ್ವಾಲಿಯರ್ ನಲ್ಲಿದ್ದಾಗ ಟೆಂಪರಾ ಮತ್ತು ಜಲವರ್ಣದಲ್ಲಿ ರಚಿಸಿದ ಚಿತ್ರಗಳಲ್ಲಿ ಆಕಾರ ಮತ್ತು ವರ್ಣಗಳಲ್ಲಿ ಪ್ರಯೋಗ ನಡೆಸಿರುವುದನ್ನು ಕಾಣತ್ತೇವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮ್ಯಾಕ್ಸ್ ಎರ್ನಸ್ಟ್

ಜರ್ಮನಿಯ ಕಲಾವಿದನಾದ ಮ್ಯಾಕ್ಸ್ 1891ರಲ್ಲಿ ಜನಿಸಿದ. ಮ್ಯಾಕ್ಸ್ ಶಿಕ್ಷಣ ಪಡೆದಿದ್ದು ತತ್ವಶಾಸ್ತ್ರದಲ್ಲಿ. ಆದರೆ ಪ್ಯಾರಿಸಿಗೆ ಹೋಗಿ, ಹಲವು ಪ್ರಮುಖ ಕಲಾವಿದರ ಕೃತಿಗಳನ್ನು ನೋಡಿದ ನಂತರ ಕಲೆ ಕಲಿತ. ಅವನ ಚಿತ್ರಗಳಲ್ಲಿ ಮರದ ತುಂಡು, ಪೇಪರ್ ಮುಂತಾದುವುಗಳನ್ನು ಉಪಯೋಗಿಸಿ ಕೊಲಾಜ್ ಮಾಧ್ಯಮದಲ್ಲಿ ಪ್ಯಾಂಟಸಿಯ ಕಲ್ಪನೆಯ ಚಿತ್ರಗಳನ್ನು ರಚಿಸಿದ್ದಾನೆ. ಸರ್‌ರಿಯಲಿಸ್ಟ್ ಕಲಾಪ್ರದರ್ಶನದಲ್ಲಿ ಭಾಗವಹಿಸಿದ್ದ. ಸರ್‌ರಿಯಲಿಸ್ಟ್ ಪಂಥದ ಪ್ರಮುಖ ಕಲಾವಿದನಾದ ಅವನು 1976ರಲ್ಲಿ ನಿಧನನಾದ.

ಮಾಗ್‌ರಿಟ್ಟೆರಿನೆ

ಮಾಗ್‌ರಿಟ್ಟೆ 1898ರಲ್ಲಿ ಜನಿಸಿದ್ದು, ಬೆಲಿಜಿಯನ್‌ನ ಸರ್‌ರಿಯಲಿಸ್ಟ್ ಚಿತ್ರ ಕಲಾವಿದ. ಅವನ ಮೊದಲ ಕೃತಿಗಳು ಫ್ಯೂಚರಿಸಂ ಮತ್ತು ಕ್ಯೂಬಿಸಂನಿಂದ ಪ್ರಭಾವಿತ ವಾಗಿದ್ದವು. ಕಾವ್ಯಾತ್ಮಕವಾದ ಕಲ್ಪನೆಗಳನ್ನು ಚಿತ್ರದಲ್ಲಿ ಮೂಡಿಸಿದ್ದು, ಸರ್‌ರಿಯಲಿಸ್ಟ್ ಚಿತ್ರಕಲಾವಿದರಲ್ಲಿ ಪ್ರಮುಖ.

ಮಾದವಿ ಪರೇಖ್

ಮಾದವಿ ಪರೇಖ್ 1942ರಲ್ಲಿ ಅಹಮದಾಬಾದಿನಲ್ಲಿ ಜನಿಸಿದ್ದು, 1964ರಲ್ಲಿ ಚಿತ್ರಕಲೆ ಪ್ರಾರಂಭಿಸಿದರು. ರಾಷ್ಟ್ರ ಮತ್ತು ವಿದೇಶಗಳ ಕಲಾಪ್ರದರ್ಶನಗಳಲ್ಲಿ ಭಾಗ ವಹಿಸಿರುವ ಈಕೆ 1979ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಮತ್ತು 1986-87ರಲ್ಲಿ ಕೇಂದ್ರ ಸರ್ಕಾರದ ಸಾಂಸ್ಕೃತಿಕ ಶಿಷ್ಯವೇತನ ಪಡೆದಿದ್ದಾರೆ. ಈಕೆಯ ಚಿತ್ರಗಳಲ್ಲಿ ಜಾನಪದ ಪ್ರಭಾವವಿದ್ದು, ಅದರಲ್ಲೂ ಗುಜರಾತಿ ಜಾನಪದ ಕಲೆಯ ಕಲ್ಪನೆಗಳನ್ನು ಸಮಕಾಲೀನ ವಾಗಿ ಚಿತ್ರಿಸಿ, ಆಲಂಕಾರಿಕವಾಗಿ ಚಿತ್ರಿಸುವರು.

ಮಾಲೆವಿಚ್ ಕಸ್ಮಿರ್

ಮಾಲೆವಿಚ್ 1878ರಲ್ಲಿ ರಷ್ಯಾದ ಕೀವ್‌ನಲ್ಲಿ ಜನಿಸಿದ. ಪೋಸ್ಟ್ ಇಂಪ್ರೆಷನಿಸಮ್‌ನಿಂದ ಪ್ರಭಾವಿತನಾಗಿ ಅಮೂರ್ತ ಶೈಲಿಯಲ್ಲಿ, ಅನಂತರ ಕಪ್ಪು ಬಿಳುಪಿನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚೌಕಗಳನ್ನು, ಏರಡು ವರ್ಷಗಳ ನಂತರ ಸರ್‌ರಿಯಲಿಸ್ಟ್ ಚಿತ್ರಗಳನ್ನು ಪ್ರದರ್ಶಿಸಿದ. ಸೂಪರ್‌ಮಾಟಿಸಂನಲ್ಲಿ, ಜಾಮಿತಿಯ ಆಕಾರಗಳನ್ನು ಸಂಯೋಜಿಸಿ, ಬಿಳಿಯುದರ ಮೇಲೆ ಬಿಳಿ ಚೌಕಗಳನ್ನು ಚಿತ್ರಿಸಿದ್ದು, 1935ರಲ್ಲಿ ತೀರಿಕೊಂಡ.

ಮಾರ್ಷಲ್ ಡ್ಯೂಷಾ

ಮಾರ್ಷಲ್ 1887ರಲ್ಲಿ ಜನಿಸಿದ ಫ್ರೆಂಚ್ ಚಿತ್ರಕಲಾವಿದ. ತನ್ನ ಕಲಾಶಿಕ್ಷಣವನ್ನು ಪ್ಯಾರಿಸಿನ ಆಕಾಡೆಮಿ ಜ್ಯೂಲಿಯದಲ್ಲಿ ಪಡೆದು, ಸರ್‌ರಿಯಲಿಸ್ಟ್ ಕಲಾಪ್ರದರ್ಶನದಲ್ಲಿ ಭಾಗವಹಿಸಿದ. ಅವನ ಮೊದಲ ಕ್ಯೂಬಿಸ್ಟ್ ಚಿತ್ರಗಳಲ್ಲಿ ಅವಕಾಶದಲ್ಲಿ ಆಕಾರಗಳು ಚಲನೆಯಲ್ಲಿರುವಂತೆ ರಚಿಸಿದ್ದು, 'ಮಹಡಿ ಇಳಿಯುತ್ತಿರುವ ನಗ್ನೆ' ಚಿತ್ರದಲ್ಲಿ ಕಾಣಬಹುದು. ಚಲನೆಯ ಕಲ್ಪನೆ ಕೊಡುವುದು, ನಾಲ್ಕೈದು ಹಂತಗಳಲ್ಲಿ ಮುಖವನ್ನು ಪಕ್ಕದಿಂದ ಮುಂದಕ್ಕೆ ತಿರುಗಿಸುವುದು ಮತ್ತು ಮಹಡಿ ಮೆಟ್ಟಿಲು ಇಳಿಯುತ್ತಿರುವವಳ, ಹಲವು ಆಕೃತಿ ಪಕ್ಕ ಪಕ್ಕ ಬರೆದು ಚಲನೆಯ ಕಲ್ಪನೆ ಗಳನ್ನು ಕಾಣಬಹುದು. ಅವನ ಚಿತ್ರಗಳಲ್ಲಿನ ಈ ಪದ್ಧತಿ ಚಲನಚಿತ್ರದ ತಂತ್ರದಿಂದ ಪ್ರಭಾವಿತನಾಗಿದ್ದು, ಕ್ರೊಮಟೋಗ್ರಾಫಿ ಎನ್ನುತ್ತಾರೆ. ಅವನು 1968ರಲ್ಲಿ ತೀರಿ ಕೊಂಡ.

ಮುಕುಲ್ ಡೇ

1895ರಲ್ಲಿ ಜನಿಸಿದ ಮುಕುಲ್ ಡೇ, ಅಬನೀಂದ್ರನಾಥ ಟಾಗೂರರ ಬಳಿ ಕಲಾ ಶಿಕ್ಷಣ ಮತ್ತು ಲಂಡನ್ನಿನ ಸ್ಲೇಡ್ ಸ್ಕೂಲ್, ರಾಯಲ್ ಕಾಲೇಜ್ ಆಫ್ ಆರ್ಟ್‌ನಲ್ಲಿ ಕಲೆ ಮತ್ತು ಭಿತ್ತಿಚಿತ್ರದಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದರು. ಆನಂತರ ಕಲ್ಕತ್ತಾ ಕಲಾ ಶಾಲೆಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು. 1926ರಲ್ಲಿ ಬರ್ಲಿನ್, 1927ರಲ್ಲಿ ಲಂಡನ್, 1946ರಲ್ಲಿ ಸಿಲೋನ್ ಮತ್ತು ಭಾರತದ ಪ್ರಮುಖ ಸ್ಥಳಗಳಲ್ಲಿ ಕಲಾ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಶಾಂತಿನಿಕೇತನದಿಂದ ಕಲೆ ಕಲಿತ ಮೊದಲಿಗರು. ಜಪಾನಿಗೆ ತೆರಳಿ ಅವರ ಕಲೆಯ ತಂತ್ರ ಮತ್ತು ಅಮೆರಿಕಾಗೆ ತೆರಳಿ ಎಚ್ಚಿಂಗ್ ತಂತ್ರ ಕಲಿತಿದ್ದರು. ಚಿಕಾಗೋ ಸೊಸೈಟಿ ಆಫ್ ಎಚರ್ಸ್ ಸಂಸ್ಥೆಯ ಸದಸ್ಯರಾಗಿದ್ದರು ಮತ್ತು ಸ್ಲೇಡ್ ಮತ್ತು ಕನ್ನಿಂಗ್ ಸ್ಕೂಲ್ ಆಫ್ ಆರ್ಟ್‌ಗಳಲ್ಲಿ ಎಚ್ಚಿಂಗ್‌ನ ವಿವಿಧ ತಂತ್ರ ಕಲಿತಿದ್ದರು. ಲಂಡನ್ನಿನಲ್ಲಿ ಸ್ಟುಡಿಯೋ ಸ್ಥಾಪಿಸಿ, ಎಚ್ಚಿಂಗ್ ಕೃತಿಗಳಿಂದ ತಮ್ಮ ಸ್ಥಾನವನ್ನು ಭದ್ರಮಾಡಿಕೊಂಡಿದ್ದರು, ಈ ಮಾಧ್ಯಮವನ್ನು ಭಾರತದಲ್ಲಿ ಪ್ರಚಲಿತ ಪಡಿಸಿದವರಲ್ಲಿ ಪ್ರಮುಖರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮುನುಸ್ವಾಮಿ ಎಲ್.

ಮುನುಸ್ವಾಮಿ ಮದ್ರಾಸಿನಲ್ಲಿ 1927ರಲ್ಲಿ ಜನಿಸಿದ್ದು. 1953ರಲ್ಲಿ ಮದ್ರಾಸಿನ ಸರ್ಕಾರಿ ಕಲಾಶಾಲೆಯಲ್ಲಿ ಶಿಕ್ಷಣ ಮತ್ತು 1956-57ರಲ್ಲಿ ಕೇಂದ್ರ ಸರ್ಕಾರದ ಸಾಂಸ್ಕೃತಿಕ ಇಲಾಖೆಯಿಂದ ಶಿಷ್ಯವೇತನ ಪಡೆದು ಚಿತ್ರಕಲೆಯಲ್ಲಿ ಅಭ್ಯಾಸ. ಅಲ್ಲದೆ 1963-64ರಲ್ಲಿ ಗ್ರಾಫಿಕ್ ಕಲೆಯನ್ನು ಕಲಿಯಲು ಕೊಲೊಂಬೋ ಶಿಷ್ಯವೇತನ ಪಡೆದು ಇಂಗ್ಲೆಂಡಿನಲ್ಲಿ ಅಭ್ಯಾಸ. ಅವರ ಮೊದಲ ಚಿತ್ರಗಳು ಇಂಪ್ರೆಷನಿಸ್ಟ್ ಶೈಲಿಯಲ್ಲಿ ರಚಿತವಾಗಿವೆ. ಅನಂತರದ ಚಿತ್ರಗಳಲ್ಲಿ ಮನುಷ್ಯಾಕೃತಿಗೆ ಹೆಚ್ಚು ಪ್ರಾಧಾನ್ಯ. ಚಿತ್ರದ ಸಂಯೋಜನೆಯಲ್ಲಿ ರೇಖೆ ಹಾಗೂ ಅಮೂರ್ತತೆಯಿದ್ದರೂ, ಮನುಷ್ಯಾಕೃತಿಗಳ ಅಭಿವ್ಯಕ್ತಿ ಪ್ರಧಾನವಾಗಿರುತ್ತದೆ. ಮಹಿಳೆ ಅವರ ಚಿತ್ರಗಳ ಕೇಂದ್ರಬಿಂದುವಾಗಿದ್ದು ಮಾನಸಿಕ, ಸಾಮಾಜಿಕವಾದ ಬೆಳವಣಿಗೆ, ಸಂಕೀರ್ಣತೆಯ ಸೃಜನಶೀಲತೆಗೆ ವಸ್ತುವಾಗಿರುವುದನ್ನು ಕಾಣುತ್ತೇವೆ. ಕೆಲವು ಪ್ರಕೃತಿಚಿತ್ರಗಳನ್ನು ಸಹ ರಚಿಸಿದ್ದು, ಅವು ಅಮೂರ್ತವಾಗಿದ್ದು, ರೇಖೆ ಮತ್ತು ವರ್ಣಗಳು ಮುಖ್ಯವಾಗಿವೆ. ಅವರ ರೇಖಾಚಿತ್ರಗಳು ಗಮನಾರ್ಹವಾದುದು.

ಮೆರಿನೋ ಮೆರೀನಿ

ಮೆರೀನಿ ಇಟಲಿಯಲ್ಲಿ ಜನಿಸಿದ್ದು, ಫ್ಲಾರೆನ್ಸಿನ ಅಕಾಡೆಮಿಯಲ್ಲಿ ಚಿತ್ರ, ಶಿಲ್ಪವನ್ನು ಮತ್ತು ಪ್ಯಾರಿಸಿನಲ್ಲಿ 1928ರಲ್ಲಿ ಶಿಲ್ಪಕಲೆಯನ್ನು ಕಲಿತ. ಬೊಚಿನಿಯೋನಿಯ ಮತ್ತು ರೋಸೋ ತರುವಾಯ ಜನಪ್ರಿಯನಾದ ಇಟಲಿಯ ಶಿಲ್ಪಿ ಮೆರಿನೋ. ಅವನು ದೊಡ್ಡದಾದ ಶಿಲ್ಪಗಳನ್ನು ಸ್ವಚ್ಛಂದವಾಗಿ ರೂಪಿಸಿದ್ದಾನೆ ಹಾಗೂ ಶಿಲ್ಪಗಳಲ್ಲಿ ಪೈವಳಿಕೆಗಳನ್ನು ಪೋಹಕವಾಗಿ ಉಪಯೋಗಿಸಿದ್ದಾನೆ. ಅವನು ರಚಿಸಿರುವ ಶಿಲ್ಪಗಳಲ್ಲಿ 'ಕುದುರೆ ಮತ್ತು ರಾವುತ' ಮಾಲಿಕೆ ಅತ್ಯಂತ ಪ್ರಖ್ಯಾತವಾದುದು.

ಮೃಣಾಲಿನಿ ಮುಖರ್ಜಿ

ಮೃಣಾಲಿನಿ ಮುಖರ್ಜಿ 1949ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ್ದು, 1972ರಲ್ಲಿ ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಿಂದ ಭಿತ್ತಿಚಿತ್ರದಲ್ಲಿ ಪೋಸ್ಟ್ ಡಿಪ್ಲೊಮೊ ಪಡೆದಿರುವ ಅವರು ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಬ್ರಿಟಿಷ್ ಕೌನ್ಸಿಲ್ ಶಿಷ್ಯವೇತನವನ್ನು ಪಡೆದಿದ್ದಾರೆ. 1976ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿರುವ ಅವರು, ದಾರದಲ್ಲೇ ಶಿಲ್ಪಗಳ ಆಕಾರಗಳನ್ನು ಸೃಷ್ಟಿಸಿ, ಪೈವಳಿಕೆ ಮತ್ತು ದುಂಡನೆಯ ಆಕಾರಗಳು, ವೀಕ್ಷಕರ ಗಮನ ಸೆಳೆಯುವ ಆಕೆಯ ಕೃತಿಗಳು ಭಾರತೀಯ ಕಲೆಗೆ ಹೊಸ ಆಯಾಮ ನೀಡಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೈಕೆಲೆಂಜಲೋ

ಮೈಕೆಲೆಂಜಲೋ 1475ರಲ್ಲಿ ಇಟಲಿಯ ಫ್ಲಾರೆನ್ಸಿನ ಬಳಿಯಿರುವ ಕ್ಯಾಪ್ರಿಸಿಯಲ್ಲಿ ಜನಿಸಿದ. ಓದಿನಲ್ಲಿ ಆಸಕ್ತಿಯಿಲ್ಲದೆ, ಚಿತ್ರಕಲೆಯಲ್ಲಿ ಆಸಕ್ತಿಯಿದ್ದುದರಿಂದ ಕಲಾವಿದ ಫಿರ್‌ಲ್ಯಾಂಡಿಯೋ ಬಳಿ ಕಲಾಶಿಕ್ಷಣ ಪಡೆದು, ನಂತರ ಶಿಲ್ಪಶಾಲೆಯಲ್ಲಿ ಶಿಲ್ಪಕಲೆ ಕಲಿತ. ರೋಮ್‌ಗೆ ಬಂದು ಪೆಜೋನ ಶಿಲ್ಪ ರಚಿಸಿದ. ಸಿಸ್ಟೈನ್ ಚಾಪಲ್‌ನ ಛಾವಣಿಯಲ್ಲಿ ಕ್ರೈಸ್ತಧರ್ಮದ 'ಸೃಷ್ಟಿಪುರಾಣ'ದ ವಿಷಯಗಳೆನ್ನು ಚಿತ್ರಿಸಿದ, ಈ ಚಿತ್ರಗಳು ಜಗತ್ತಿನಲ್ಲೇ ಅಪೂರ್ವವಾದ ಕೃತಿಗಳು. ಅನೇಕ ಶಿಲ್ಪಗಳನ್ನು ರಚಿಸಿದ್ದಾನೆ. ವಾಟಿಕನ್ ಸೌಧದ ಸಿಸ್ಟೈನ್ ಪ್ರಾರ್ಥನಾ ಭವನದಲ್ಲಿ 'ಕೊನೆಯ ತೀರ್ಪು' ಚಿತ್ರ ರಚಿಸಿದ್ದು. ವ್ಯಕ್ತಿಗಳ ಆಕಾರ ದೊಡ್ಡದಿದ್ದು, ಚಿತ್ರಣ ಶಕ್ತಿಯುತವಾಗಿದೆ. ಕಲಾವಿದ, ಶಿಲ್ಪಿ ಮತ್ತು ವಾಸ್ತುಶಿಲ್ಪದಲ್ಲೂ ಅವನದು ಅಗಾಧವಾದ ಪ್ರೌಢಿಮೆ. 'ನಿದ್ರಿಸುತ್ತಿರುವ ನಾರಿ' ಒಂದು ಮಹಾಶಿಲ್ಪ. ಕಲೆಗಾಗಿಯೇ ತನ್ನ ಜೀವನವನ್ನು ಕೊನೆಯವರೆಗೂ ಅರ್ಪಿಸಿದ, ಜಗತ್ತಿನ ಮಹಾನ್ ಕಲಾವಿದ. ಅವನ ಚಿತ್ರ, ಶಿಲ್ಪಗಳಲ್ಲಿ ಜೀವಕಳೆಯನ್ನು ಕಾಣಬಹುದು ಹಾಗೂ ಅವುಗಳಲ್ಲಿ ಮೂಡಿದ ಭಾವ ಭಂಗಿಗಳು ಅದ್ವಿತೀಯ. ಅವನು 1564ರಲ್ಲಿ ನಿಧನನಾದ.

ಮೈಕೆಲೆಂಜಲೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಮೋಡಿಗ್ಲ್ಯಾನಿ

ಮೋಡಿಗ್ಲ್ಯಾನಿ 1884ರಲ್ಲಿ ಇಟಲಿಯ ಲೆಗೆ್ಹರ್ನ್‌ನಲ್ಲಿ ಜನಿಸಿದ. ಪ್ಯಾರಿಸಿನ ಕಲಾಶಾಲೆಯಲ್ಲಿ ಕಲಾಶಿಕ್ಷಣ ಪಡೆದ. ಅವನಿಗೆ ಪ್ಯಾರಿಸಿನಲ್ಲಿ ಪಿಕಾಸೋವಿನ ಪರಿಚಯವಾಗಿ, ಅವನ ಪ್ರಭಾವಕ್ಕೆ ಒಳಗಾದ. ಆಫ್ರಿಕಾದ ನೀಗ್ರೋ ಕಲೆಯ ಸರಳತೆ, ಬಾಹ್ಯ ಆಕಾರಗಳಿಗೆ ಮಾರುಹೋಗಿ, ಅವನ ಚಿತ್ರ, ಶಿಲ್ಪಗಳಲ್ಲಿ ಅದರ ಪ್ರಭಾವ ಕಾಣಬಹುದು. ವ್ಯಕ್ತಿಚಿತ್ರಣದಲ್ಲಿ ಸರಳತೆ, ರೇಖೆಗಳ ಬಳಕು, ಸಹಜ ವರ್ಣ ವಿನ್ಯಾಸ, ವ್ಯಕ್ತಿಗಳ ಉದ್ದವಾದ ಮುಖ, ಕತ್ತು, ನೀಳವಾದ ತೋಳುಗಳು, ಓರೆನೋಟ ಗಳು ಚಿತ್ರಗಳಲ್ಲಿ ಕಾಣಬಹುದು.

ರಬೀಂದ್ರ ದತ್

1907ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ ದತ್ ಅವರು, ಅಬನೀಂದ್ರನಾಥ ಟಾಗೂರ್ ಮತ್ತು ನಂದಲಾಲ್‌ಬೋಸ್‌ರ ಕೃತಿಗಳಿಂದ ಪ್ರಭಾವಿತರಾಗಿ, ಸ್ವಂತಿಕೆಯಿಂದ ಕಲೆ ಕಲಿತು, 1929ರಲ್ಲಿ ಮುಂಬಯಿಗೆ ಬಂದು, ಕಲಾಶಿಕ್ಷಕರಾಗಿ ಕೆಲಸ ಮಾಡಿದರು, ಮಕ್ಕಳ ಚಿತ್ರಕಲಾ ಶಿಕ್ಷಣದ ಬಗ್ಗೆ ವಿಶೇಷ ಒಲವಿದ್ದು, ಅದರ ಬಗ್ಗೆ ಅನೇಕ ರೂಪು ರೇಷೆಗಳನ್ನು ರೂಪಿಸಿದ್ದರು. ಕಲೆಯ ಜೊತೆಗೆ ಲೆದರ್‌ಕ್ರಾಫ್ಟ್‌ನ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಚಿತ್ರಗಳಲ್ಲಿ ಅಲಂಕರಣಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದು, ಅನೇಕ ಸಂಯೋಜನಾ ಚಿತ್ರಗಳಲ್ಲಿ ವೀರ್ಯವತ್ತಾದ ರೇಖೆಗಳು ಮತ್ತು ವರ್ಣಸಂಯೋಜನೆ ಕಾಣಬಹುದು.

ರವಿಶಂಕರ್ ರಾವಲ್

1892ರಲ್ಲಿ ಭಾವನಗರದಲ್ಲಿ ಜನಿಸಿದ ರಾವಲ್ ಅವರು ತಮ್ಮ ಕಲಾಶಿಕ್ಷಣ ವನ್ನು ಜೆ. ಜೆ. ಕಲಾಶಾಲೆಯಿಂದ ಪಡೆದರು. 1917ರಲ್ಲಿ ಜಯಪುರ ಶೈಲಿಯಲ್ಲಿ ರಚಿಸಿದ ಚಿತ್ರಕ್ಕೆ ಬಾಂಬೆ ಆರ್ಟ್ ಸೊಸೈಟಿಯಿಂದ ಪ್ರಶಸ್ತಿ ಪಡೆದಿದ್ದಾರೆ. ಅಹಮದಾ ಬಾದಿನಲ್ಲಿ ನೆಲಸಿ, ಗುಜರಾತ್ ರಾಜ್ಯದಲ್ಲಿ ಕಲೆ ಬೆಳೆಯಲು ಕಾರಣಕರ್ತರಾ ಹಾಗೂ ಅನೇಕ ಗುಜರಾತಿ ಪುಸ್ತಕ ಮತ್ತು ಪತ್ರಿಕೆಗಳಲ್ಲಿ ಸಾಂದರ್ಭಿಕ ಚಿತ್ರಗಳನ್ನು ರಚಿಸಿದ್ದಾರೆ. 1936ರಲ್ಲಿ ಜಪಾನ್ ಮತ್ತು ಚೈನಾಗೆ ಭೇಟಿಯಿತ್ತು, ಆ ಸಮಯದಲ್ಲಿ ಅನೇಕ ರೇಖಾ ಚಿತ್ರಗಳನ್ನು ಬರೆದಿದ್ದಾರೆ. ಮೀರಾ ಮತ್ತು ಅನೇಕ ಸಂತರ ಬಗ್ಗೆ ಚಿತ್ರಗಳನ್ನು ರಚಿಸಿದ್ದಾರೆ. ಅಲ್ಲದೆ ಉತ್ತಮ ಕಲಾಶಿಕ್ಷಕರಾಗಿದ್ದು, ಅನೇಕ ಶಿಷ್ಯರು ತಯಾರಾಗಿ ದ್ದಾರೆ. ಕಲೆಯ ಬಗ್ಗೆ ಅನೇಕ ಲೇಖನಗಳು ಪ್ರಕಟವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರವೀಂದ್ರನಾಥ ಠಾಗೂರ್

ನಮ್ಮ ದೇಶದ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ಉನ್ನತ ಸ್ಥಾನವನ್ನಲ್ಲಿರುವ ಹೆಸರು ರವೀಂದ್ರನಾಥ ಠಾಗೂರ್. ಅವರ 'ಗೀತಾಂಜಲಿ'ಗೆ ನೊಬೆಲ್ ಪ್ರಶಸ್ತಿ ಸಂದಿದ್ದು, ವಿಶ್ವದ ಸಾಹಿತ್ಯ ಲೋಕದಲ್ಲೂ ಅವರ ಹೆಸರು ಚಿರಸ್ಥಾಯಿಯಾಗಿದೆ. ಇಂತಹ ಕವಿ ಚಿತ್ರಕಲಾ ಕ್ಷೇತ್ರದಲ್ಲೂ ಹೆಸರು ಪಡೆದಿದ್ದಾರೆ. ಭಾರತದ ಆಧುನಿಕ ಕಲೆಯಲ್ಲಿ ಮುಖ್ಯರಾದವರು ಠಾಗೂರ್ ಅವರು. 1861ರಲ್ಲಿ ಜನಿಸಿದ್ದು, ಸ್ವಂತವಾಗಿ ಚಿತ್ರಕಲೆ ಕಲಿತವರು. ಅವರ ಕನಸಿನಂತೆ 'ಶಾಂತಿನಿಕೇತನ' ಪ್ರಾರಂಭ ಮಾಡಿದವರು. ಅವರ ದೃಷ್ಟಿಗೆ ಗೋಚರಿಸಿದ ಭಾವಗಳನ್ನು ತಮ್ಮ ಅಂತರ್ಭಾವದಿಂದ ವಾಸ್ತವವಲ್ಲದ ಆಕಾರಗಳಲ್ಲಿ ಚಿತ್ರಿಸಿದರು. ಅವರು ಸೃಷ್ಟಿಸಿದ ಆಕಾರಗಳು ಸೃಷ್ಟಿಯಲ್ಲಿ ಕಾಣುವು ದಿಲ್ಲ, ಸ್ವಚ್ಛಂದವಾಗಿ ಚಿತ್ರಿಸಿದ್ದಾರೆ. ಅವರು ಚಿತ್ರಿಸಿರುವ ಮಾನವಾಕೃತಿಗಳು, ಪ್ರಾಣಿ ಗಳು, ಪಕ್ಷಿಗಳು, ಪ್ರಕೃತಿಚಿತ್ರಗಳು ಮತ್ತು ವರ್ಣಸಂಯೋಜನೆ ಭಿನ್ನವಾಗಿದ್ದು, ಕಲ್ಪನೆ ಹೆಚ್ಚು ಮುಖ್ಯವಾಗಿರುತ್ತದೆ.

ರಾಘವ ಕನೇರಿಯಾ

1936ರಲ್ಲಿ ಜನಿಸಿದ ಕನೇರಿಯಾ, ಶಿಲ್ಪಕಲೆಯಲ್ಲಿ ಪದವಿಯನ್ನು ಫೆಕಲ್ಟಿ ಆಫ್ ಫೈನ್ ಆರ್ಟ್ಸ್, ಬರೋಡಾದಲ್ಲಿ ಪಡೆದಿದ್ದು, ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1959ರಲ್ಲಿ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ. ಅವರು ಬಹುಮುಖ ಸಾಮರ್ಥ್ಯದ ಶಿಲ್ಪಿಯಾಗಿದ್ದು, ಅನೇಕ ಮಾಧ್ಯಮಗಳಲ್ಲಿ ಪರಿಣತಿ ಪಡೆದಿದ್ದಾರೆ. ಅವರ ಶಿಲ್ಪಗಳು ವಿವಿಧ ಭಾವನೆಗಳನ್ನು ಮತ್ತು ಸಮತಲ ರೇಖೆಗಳಲ್ಲಿ ಆಸಕ್ತಿಯುಂಟುಮಾಡುತ್ತವೆ. ಲೋಹವನ್ನು ಮಾಧ್ಯಮವನ್ನಾಗಿ ಉಪಯೋಗಿಸಿ, ಅನೇಕ ಪ್ರಾಣಿಗಳು, ಪಕ್ಷಿಗಳನ್ನು ರಚಿಸಿದ್ದು, ಅವು ಚೈತನ್ಯದಿಂದ ಕೂಡಿರುವ ಗುಣ ಗಳನ್ನು ಹೊಂದಿರುತ್ತವೆ. ಅನಂತರ ಕೃತಿಗಳಲ್ಲಿ ಲೋಹದ ಹಾಳೆಗಳ ಸಂಯೋಜನೆ ಗಳು ತಾಂತ್ರಿಕತೆಯಿಂದ ಕೂಡಿದ್ದು, ಯಾಂತ್ರಿಕ ಮತ್ತು ಆಕಾರಗಳು ಆಸಕ್ತಿಯನ್ನುಂಟು ಮಾಡುತ್ತವೆ.

ರಾಮೇಶ್ವರ ಬ್ರೂಟಾ

1941ರಲ್ಲಿ ದೆಹಲಿಯಲ್ಲಿ ಜನಿಸಿದ ಬ್ರೂಟಾ, ದೆಹಲಿಯ ಕಾಲೇಜ್ ಆಫ್ ಆರ್ಟ್‌ನಿಂದ 1964ರಲ್ಲಿ ಶಿಕ್ಷಣ ಪಡೆದಿದ್ದು, ಅಂದಿನಿಂದ ರಾಷ್ಟ್ರದ ಮತ್ತು ವಿದೇಶಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. 3 ಮತ್ತು 4ನೇ ಟ್ರಿನಾಲೆ, 1973-74ರಲ್ಲಿ ಪೋಲೆಂಡ್, ಯುಗೋಸ್ಲೋವಿಯಾ, ಬಲ್ಗೇರಿಯಾ ಮತ್ತು ಲಲಿತಕಲಾ ಅಕಾಡೆಮಿಯ ಪ್ರಶಸ್ತಿ 1980, 1981ರಲ್ಲಿ ಹಾಗೂ ಐಯಿಪೆಕ್ಸ್ 1973-75, 1976ರಲ್ಲಿ ಹೈದ್ರಾಬಾದ್ ಆರ್ಟ್ ಸೊಸೈಟಿಯ ಕಲಾಪ್ರದರ್ಶನಗಳಲ್ಲಿ ಬಹುಮಾನಗಳನ್ನು ಪಡೆದಿದ್ದು, ಪ್ರಸ್ತುತ ದೆಹಲಿಯಲ್ಲಿರುವ ತ್ರಿವೇಣಿ ಕಲಾ ಸಂಘದಲ್ಲಿ ಕಲಾ ವಿಭಾಗದ ಮುಖ್ಯಸ್ಥರಾಗಿದ್ದಾರೆ. ಅವರ ಚಿತ್ರಗಳಲ್ಲಿ ರಾಜಕೀಯ ವಿಡಂಬನೆಯಿದ್ದು, ಪ್ರಸ್ತುತ ಪರಿಸರದ ರಾಜಕೀಯ ಸಂದರ್ಭಗಳನ್ನು ತಮ್ಮದೆ ಆದ ದೃಷ್ಟಿಕೋನದಿಂದ ಚಿತ್ರಗಳಲ್ಲಿ ಅಭಿವ್ಯಕ್ತಿಸುವರು.

ರಾಜಾ ಎಸ್. ಎಚ್.

ರಾಜಾ 1922ರಲಿ ಮಧ್ಯಪ್ರದೇಶದ ಬಾಬರಿಯದಲ್ಲಿ ಜನಿಸಿದ್ದು, ತಮ್ಮ ಕಲಾ ಶಿಕ್ಷಣವನ್ನು ನಾಗಪುರ ಸ್ಕೂಲ್ ಆಫ್ ಆರ್ಟ್ ಮತ್ತು ಮುಂಬಯಿನ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪಡೆದು, 1950ರಲ್ಲಿ ಫ್ರೆಂಚ್ ಸರ್ಕಾರದ ಶಿಷ್ಯವೇತನ ಪಡೆದು, 1953ರವರೆಗೂ ಪ್ಯಾರಿಸಿನ ಎಕೋಲೆ ನ್ಯಾಷನಲ್ ಡೆಸ್ ಬೂಯಾಕ್ಸ್‌ನಲ್ಲಿ ಕಲೆಯಲ್ಲಿ ಉನ್ನತ ಶಿಕ್ಷಣ ಪಡೆದರು. ಮುಂಬಯಿನಲ್ಲಿ ಸ್ಥಾಪಿತವಾದ ಪ್ರೋಗ್ರೆಸೀವ್ ಕಲಾವಿದರ ತಂಡದ ಸ್ಥಾಪಕರಲ್ಲಿ ಒಬ್ಬರಾಗಿದ್ದು, ಭಾರತದಲ್ಲಿ ಆಧುನಿಕ ಕಲೆಯ ಚಳವಳಿಯ ನೇತಾರ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದಿದ್ದಾರೆ. ಅವರ ಚಿತ್ರಗಳು ವಸ್ತುಪ್ರಧಾನವಾಗಿ ಪ್ರಕೃತಿಚಿತ್ರಗಳು, ಆವರ ಮನಸ್ಸಿನ ಭಾವನೆಗಳನ್ನು ಪ್ರಬಲವಾದ ವರ್ಣಗಳ ಸಮೂಹ ಮತ್ತು ಅವುಗಳ ಮಿಲನದಿಂದ ಹೊಸ ಸಂವೇದನೆ ಕಾಣಬಹುದು.

ಪ್ರಕೃತಿಯಲ್ಲಿರುವ ರಹಸ್ಯವನ್ನು ತಮ್ಮ ಚಿತ್ರಗಳಲ್ಲಿ ನೆರಳು-ಬೆಳಕುಗಳೊಡನೆ, ಉಜ್ವಲವಾದ ಕೆಂಪು ಮತ್ತು ಹಳದಿ, ಹೊಂದಾಣಿಕೆಯಾಗುವ ಬಿಳುಪು ಹಾಗೂ ವರ್ಣಗಳು ಚಲನೆಯುಕ್ತವಾಗಿರುತ್ತವೆ. ಸಜೀವವಾಗಿ ಕಾಣುವ ಆಕಾರಗಳು ಚಿತ್ರದ ಒಂದು ಭಾಗವಾಗಿ, ನೋಡುಗನಿಗೆ ವೈವಿಧ್ಯತೆ ಕಾಣುತ್ತದೆ. ಅವರ ಇತ್ತೀಚಿನ ಕೃತಿಗಳು ಜಾವಿುತಿಯ ಆಕಾರಗಳಿಂದ ಕೂಡಿದ್ದು, ತಂತ್ರಕಲೆಯಿಂದ ಸ್ಫೂರ್ತಿಗೊಂಡಿದ್ದು, ಉಜ್ವಲ ವರ್ಣಗಳಿಂದ ಕೂಡಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಜಾ ರವಿವರ್ಮ

ರಾಜಾ ರವಿವರ್ಮ

ರವಿವರ್ಮ 1848ರಲ್ಲಿ ಕೇರಳದಲ್ಲಿ ಜನಿಸಿದ. ಬಾಲ್ಯದಲ್ಲೇ ಚಿತ್ರಕಲೆಯಲ್ಲಿ ಆಸಕ್ತಿಯಿದ್ದುದರಿಂದ, ಆಸ್ಥಾನ ಚಿತ್ರಕಾರದಿಂದ ಮತ್ತು ಬ್ರಿಟಿಷ್ ಕಲಾವಿದರಿಂದ ಕಲಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಕ್ಷಣ ಪಡೆದ. ತೈಲವರ್ಣಗಳನ್ನು ಉಪಯೋಗಿಸಿ ಭಾರತದ ಕಾವ್ಯಪುರಾಣ ಪ್ರಸಂಗಗಳ ದೇವತೆಗಳ ಚಿತ್ರಗಳನ್ನು ರಚಿಸಿದವರಲ್ಲಿ ಅವನೇ ಮೊದಲಿಗ. ತನ್ನ ಚಿತ್ರಗಳಲ್ಲಿ ಪಾಶ್ಚಾತ್ಯರ ವ್ಯಕ್ತಿಚಿತ್ರಣ ಶೈಲಿ, ವರ್ಣಸಂಯೋಜನೆ, ಸನ್ನಿವೇಶ ಚಿತ್ರಣಗಳಲ್ಲಿ ಸಿದ್ಧಿ ಪಡೆದಿದ್ದ. ಅವನ ಪೌರಾಣಿಕ ಚಿತ್ರಗಳಲ್ಲಿ ಬರುವ ಕಥಾನಕಗಳು ಭಾರತದ ಸಂವೇದನಾ ಶಕ್ತಿಯಿಂದ ಕೂಡಿದ್ದು, ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ. ಹಿಂದೂ ಧರ್ಮದ ಚಿತ್ರಗಳು ಮಧ್ಯಮ ವರ್ಗದ ಮನೆಗಳಲ್ಲಿ ಅಲಂಕರಿಸಿದವು ಮತ್ತು ಅದರಿಂದ ಕಲೆಯ ಪ್ರಚಾರವಾಯಿತು. ದೇವದೇವತೆಗಳು, ಕೇಶಾಲಂಕಾರ, ಉಡುಪುಗಳು, ಆಭರಣ ಮುಂತಾದುವುಗಳನ್ನು ಸಮಕಾಲೀನವಾಗಿ ರಚಿಸಿದ. ಚಿತ್ರರಚನೆಗೆ ರೂಪದರ್ಶಿಗಳನ್ನು ಬಳಸಿ, ತನ್ನ ಕಲ್ಪನಾಶೀಲ ಸನ್ನಿವೇಶಗಳು ಪ್ರಕೃತಿ ಚಿತ್ರ ಮುಂತಾದವುಗಳಲ್ಲಿ ಭಾರತೀಯ ಸಂಸ್ಕೃತಿಗೆ ಅನುಸಾರವಾಗಿ ಚಿತ್ರರಚಿಸಿ, ಪಾಶ್ಚಾತ್ಯ ರಚನಾತಂತ್ರಗಳನ್ನು ಬಳಸುವುದರಲ್ಲಿ ಯಶಸ್ವಿಯಾಗಿದ್ದ. ತನ್ನ ಚಿತ್ರಗಳು ಜನಸಾಮಾನ್ಯರಿಗೂ ದೊರಕುವಂತೆ, ಚಿತ್ರಗಳನ್ನು ಮುದ್ರಿಸಿದ. ಅವನು 1906ರಲ್ಲಿ ತೀರಿಕೊಂಡ.

ರಾಬರ್ಟ್ ರಾಷನ್‌ಬರ್ಗ್

ರಾಷನ್‌ಬರ್ಗ್ ಅಮೆರಿಕಾದ ಕಲಾವಿದನಾಗಿದ್ದು 1925ರಲ್ಲಿ ಜನಿಸಿದ. ಬ್ಲಾಕ್ ಮೌಂಟನ್ ಕಾಲೇಜಿನಲ್ಲಿ ಶಿಕ್ಷಣ ಪಡೆದು ನಂತರ ಆರ್ಟ್ ಸ್ಟೂಡೆಂಟ್ಸ್ ಲೀಗ್‌ನಲ್ಲಿ ಶಿಕ್ಷಣ ಪಡೆದ. 1955 ರಿಂದ ಮೆರ್ಸ್ ಕನ್ನಿಂಗ್ಯಾಂ ನೃತ್ಯ ಕಂಪನಿಗೆ ಉಡಿಗೆತೊಡಿಗೆಗಳ ಡಿಸೈನ್ ಮಾಡಿಕೊಡುತ್ತಿದ್ದ. ಕಲೆಯಲ್ಲಿ ದಾದಾಯಿಸಂ ಮತ್ತು ಸರ್‌ರಿಯಲಿಸ್ಟ್ ಕಲಾವಿದರಿಂದ ಪ್ರೇರಿತನಾಗಿ, ಅಮೂರ್ತ ಅಭಿವ್ಯಕ್ತಿವಾದದ ಅಮೆರಿಕನ್ ಕಲೆಯಲ್ಲಿ ಚಿತ್ರಗಳನ್ನು ರಚಿಸಿದ. ಚಿತ್ರಗಳಲ್ಲಿ ವಿವಿಧ ವಸ್ತುಗಳನ್ನು ಚಿತ್ರದ ಒಂದು ಭಾಗವಾಗಿ ಉಪಯೋಗಿಸಿ, ಒಂದು ಭಾಗ ಚಿತ್ರ, ಒಂದು ಭಾಗ ಕೊಲಾಜ್ ತಂತ್ರಗಳನ್ನು ಬಳಸುತ್ತಿದ್ದ. ಅಲ್ಲದೆ ಸಿಲ್ಕ್‌ಸ್ಕ್ರೀನ್ ಮತ್ತು ಛಾಯಾಚಿತ್ರ ಪದ್ಧತಿಯನ್ನು ಚಿತ್ರದಲ್ಲಿ ಅಳವಡಿಸುತ್ತಿದ್ದ ಹಾಗೂ ದಾಂತೆಯ 'ಇನ್‌ಪೆರನೋ' ಬಗ್ಗೆ ಅನೇಕ ರೇಖಾಚಿತ್ರಗಳನ್ನು ರಚಿಸಿದ್ದಾನೆ.

ರಾಫೆಲ್

ರಾಫೆಲ್ 1483ರಲ್ಲಿ ಇಟಲಿಯ ಉರಬಿನೋ ಎಂಬಲ್ಲಿ ಜನಿಸಿದ. ತಂದೆಯಿಂದ ಅವನಿಗೆ ಚಿತ್ರಕಲೆ ಕಲಿಯುವಂತೆ ಪ್ರೋತ್ಸಾಹ ದೊರೆತು, ಚಿತ್ರಕಲೆ ಕಲಿತ. ರೋಮ್‌ನಲ್ಲಿದ್ದಾಗ ವ್ಯಾಟಿಕನ್‌ನ ಕೆಲವು ಕೋಣೆಗಳ ಗೋಡೆಗಳ ಮೇಲೆ ಚಿತ್ರಗಳನ್ನು ರಚಿಸಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವ್ಯಕ್ತಿಗಳ ಭಾವಚಿತ್ರ ರಚಿಸುವುದರಲ್ಲಿ ವಿಶೇಷತೆಯನ್ನು ಪಡೆದಿದ್ದು, ಜೀವಕಳೆಯಿಂದ ಕೂಡಿವೆ ಹಾಗೂ ಅವನ ಸೌಂದರ್ಯಪ್ರಜ್ಞೆ ಅದ್ಭುತವಾದದ್ದು. ಬೈಬಲ್ಲಿನ ಹೊಸ ಒಡಂಬಡಿಕೆಯಿಂದ ಚಿತ್ರಗಳನ್ನು ರಚಿಸಿದ್ದು, ಅವು ಮಹೋನ್ನತ ಕೃತಿಗಳಾಗಿವೆ. ಮೇರಿ ಕನ್ಯೆಯ ಕೆಲವು ಚಿತ್ರಗಳನ್ನು ರಚಿಸಿದ್ದು, ವಸ್ತು ಭಾವಗಳಲ್ಲಿ ಇವು ಒಂದೇ ಆದರೂ, ಭಂಗಿಯಲ್ಲಿಯೂ ರಚನಾಶೈಲಿಯಲ್ಲಿಯೂ ಭಿನ್ನವಾಗಿವೆ. 'ಗೋಲ್ಡ್ ಪಿಂಚ್‌ನ ಮೆಡೋನ' ಚಿತ್ರದಲ್ಲಿ ಸೌಂದರ್ಯ, ಭಾವುಕತೆಗಳಿದ್ದು, ಪ್ರಖ್ಯಾತ ಚಿತ್ರವಾಗಿದೆ. 'ರೂಪಾಂತರ' ಏಸುಕ್ರಿಸ್ತನ ಕೊನೆಯ ಚಿತ್ರವಾಗಿದ್ದು, ಚಿತ್ರಕಲಾಕ್ಷೇತ್ರದಲ್ಲಿ ಅವನ ಹೆಸರು ಚಿರಸ್ಥಾಯಿ.

ರಾಮಕಿಂಕರ್ ಜ್

ರಾಮಕಿಂಕರ್ ಜೈಜ್ 1906ರಲ್ಲಿ ಜಗಿಪಾರ ಬಂಕುರಾದಲ್ಲಿ ಹುಟ್ಟಿದರು, ಬಾಲ್ಯದಲ್ಲಿಯೇ ಅವರು ಜಾನಪದ ರಂಗಭೂಮಿಗೆ ಸೇರಿ, ಅಲ್ಲಿ ರಂಗಸಜ್ಜಿಕೆ ಮತ್ತು ಪರದೆಗಳಿಗೆ ವಿನ್ಯಾಸ ರೂಪಿಸುವುದರಲ್ಲಿ ತೊಡಗಿದರು. ಅಲ್ಲಿಯೇ ಮೊದಲು ಅವರಿಗೆ ಕಲೆಯ ಅನುಭವ. ಶಾಂತಿನಿಕೇತನದಲ್ಲಿ ಕಲೆ ಕಲಿತು, ಅಲ್ಲಿನ ವಾತಾವರಣ ಮತ್ತು ಸ್ವಾತಂತ್ರ್ಯ, ಇವು ಕಲೆಯಲ್ಲಿ ಪ್ರಯೋಗ ನಡೆಸಿ, ತನ್ನ ಪರಿಸರದೊಂದಿಗೆ ಚೇತನ ಹೊಂದಿ ಅಭಿವ್ಯಕ್ತಿಯ ಕೃತಿನಿರ್ಮಾಣ ಮಾಡಲು ಸಹಾಯವಾಗಿ, ಶಿಲ್ಪ ಮತ್ತು ಚಿತ್ರ ಎರಡರಲ್ಲೂ ಪರಿಣತಿ ಪಡೆದರು. ಸಂತಾಲ ಜನಾಂಗದ ನೋವು, ನಲಿವು, ವಿಲಾಸಗಳನ್ನು ಮತ್ತು ಆಶ್ರಮದ ಸುತ್ತಲೂ ಇರುವ ಪರಿಸರಗಳೇ ಅವರ ಚಿತ್ರದ ವಸ್ತುಗಳು. ಅವರ ವರ್ಣಚಿತ್ರಗಳಲ್ಲಿ ಮುಕ್ತವಾದ ರೇಖೆಗಳಿಂದ ರಚಿಸಿದ ಆಕಾರಗಳು, ಬಣ್ಣಗಳ ಬಳಕೆ ಹಾಗೂ ಅವುಗಳ ಜೊತೆಗೆ ಡಿಸೈನ್ ಮತ್ತು ಗ್ರಾಫಿಕ್ ಕಲೆಯಲ್ಲೂ ಪರಿಣತರಾಗಿದ್ದರು. ಅವರ ಶಿಲ್ಪಗಳಲ್ಲಿ ಭಿನ್ನತೆ ಮತ್ತು ವಿಶೇಷವಾದ ಲಕ್ಷಣಗಳನ್ನು ಕಾಣಬಹುದು. ಭಾರತದ ಆಧುನಿಕ ಶಿಲ್ಪದಲ್ಲಿ ಸೃಜನತೆಯ ಶಿಲ್ಪಗಳನ್ನು ರಚಿಸಿದವರಲ್ಲಿ ಪ್ರಥಮರು. ಶಿಲ್ಪಕಲೆಯಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ, ನಿಶ್ಚಿತವಾದ ತಿರುವು-ಮುರುವು ಆಕಾರಗಳಲ್ಲಿ ಅಭಿವ್ಯಕ್ತಿತನ ಕಾಣುವಂತೆ ನೇರವಾಗಿ ಪ್ರಕೃತಿಯ ವಾತಾವರಣಕ್ಕೆ ಹೊಂದುವಂತೆ ಶಿಲ್ಪರಚಿಸಿ, ಅವು ಚಲನೆಯನ್ನು ಶಕ್ತಿಯುತವಾಗಿ ಕಾಣುವಂತೆ ಮಾಡುತ್ತಿದ್ದರು ಹಾಗೂ ಗಮನಾರ್ಹವಾದ ಭಾವಶಿಲ್ಪಗಳನ್ನು ರಚಿಸಿದ್ದು, 1980ರಲ್ಲಿ ತೀರಿಕೊಂಡರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಮಾನುಜಂ ಕೆ.

ರಾಮಾನುಜಂ 1941ರಲ್ಲಿ ಮದ್ರಾಸಿನಲ್ಲಿ ಹುಟ್ಟಿದ್ದು, ಸರಕಾರಿ ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೊಮೊ ಹಾಗೂ 1965ರಲ್ಲಿ ಲಂಡನ್ನಿನಲ್ಲಿ ನಡೆದ ಕಾಮನ್‌ವೆಲ್ತ್ ಆರ್ಟ್ ಫೆಸ್ಟಿವಲ್ ಮತ್ತು ಅನೇಕ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ಭಿತ್ತಿಚಿತ್ರಗಳನ್ನು ಸಹ ರಚಿಸಿದ್ದಾರೆ. ಅಲ್ಲದೆ ಭಾರತ ಸರ್ಕಾರದಿಂದ ಶಿಷ್ಯವೇತನವನ್ನು ಪಡೆದಿದ್ದರು. ಅವರ ರೇಖಾಚಿತ್ರಗಳಲ್ಲಿ ಕನಸು, ಆಕಾಂಕ್ಷೆ ಮತ್ತು ಸ್ವಾಭಾವಿಕವಾಗಿ ಶಾಯಿಯಿಂದ ಛಾಯೆ, ಕಾಲ್ಪನಿಕ ಅರಮನೆಗಳು, ದೇವತೆಗಳು ಮತ್ತು ಅಲಂಕಾರಿಕ ಸಂಕೇತಗಳಿಂದ ಗಂಧರ್ವಲೋಕವನ್ನು ಸೃಷ್ಟಿಮಾಡಿದ್ದಾರೆ. ಅವರು 1973ರಲ್ಲಿ ನಿಧನರಾದರು.

ರಾಮಚಂದ್ರನ್ ಎ.

ರಾಮಚಂದ್ರನ್ ಕೇರಳದಲ್ಲಿ 1935ರಲ್ಲಿ ಜನಿಸಿದ್ದು, 1957ರಲ್ಲಿ ಮಲಯಾಳಿ ಭಾಷೆಯಲ್ಲಿ ಎಂ.ಎ. ಪದವಿಯನ್ನು, 1961ರಲ್ಲಿ ಶಾಂತಿನಿಕೇತನದಿಂದ ಕಲೆಯಲ್ಲಿ ಡಿಪ್ಲೊಮೊವನ್ನು ಪಡೆದಿದ್ದಾರೆ. ಅವರ ಕಲಾಕೃತಿಗಳು ದೊಡ್ಡದಾದ ಕ್ಯಾನವಾಸಿನ ಮೇಲೆ ರಚಿತವಾಗಿವೆ ಹಾಗೂ ಬಹುಮುಖ ಸಾಮರ್ಥ್ಯದ ಅದ್ವಿತೀಯ ಕಲಾವಿದ. ಚಿತ್ರದ ಮನುಷ್ಯಾಕೃತಿಗಳು ತಾತ್ಸಾರದಿಂದ ಮರೆಮಾಚಿಕೊಂಡಿರುವಂತಿದ್ದು, ದೇಹರಚನೆ ಎದ್ದುಕಾಣುವ ಸ್ನಾಯುಗಳಿಂದ ಕೂಡಿದ್ದು, ಅಲೌಕಿಕವಾದ ಫ್ಯಾಂಟಸಿಯಿಂದ ರಚಿತವಾಗಿರುತ್ತವೆ. ಅವರು ಮನುಷ್ಯನ ದೇಹರಚನೆಯಲ್ಲಿ ಆಸಕ್ತಿಹೊಂದಿದ್ದು, ಅವುಗಳಲ್ಲಿ ಹೊದಿಕೆ ಅಥವಾ ಹೊದಿಕೆಯಿಲ್ಲದ ಚಿತ್ರಗಳು ಗಮನಸೆಳೆಯುತ್ತದೆ ಹಾಗೂ ಸ್ನಾಯುಗಳ ರಚನೆ ಕತ್ತರಿಸುವವರ ಅಂಗಡಿಯ ನೆನಪು ತರುತ್ತದೆ ಮತ್ತು ಮನುಷ್ಯಾಕೃತಿಯ ಚಿತ್ರಗಳ ಚಲನೆ ಹೆಚ್ಚು ಆದ್ಯತೆಯಿದ್ದು, ಇದು ಅವರ ಮುಖ್ಯ ಉದ್ದೇಶಗಳಲ್ಲಿ ಒಂದು. ತುಂಬಾ ಕುಶಲತೆಯಿಂದ ಮಾಡಿದ ಚಿತ್ರಗಳು, ಉಜ್ವಲವಾದ ವರ್ಣಗಳಿಂದ ರಚನೆಯಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರಾಮಕುಮಾರ್

ರಾಮಕುಮಾರ್ 1924ರಲ್ಲಿ ಸಿಮ್ಲಾದಲ್ಲಿ ಜನಿಸಿದ್ದು, ದೆಹಲಿ ವಿಶ್ವವಿದ್ಯಾಲಯದಲ್ಲಿ ಎಕಾನಾಮಿಕ್ಸ್‌ನಲ್ಲಿ ಎಂ.ಎ. ಪದವೀಧರರು. ಮೊದಲು ಶೈಲಜ ಮುಖರ್ಜಿ ಅವರ ಬಳಿ ಕಲಾಶಿಕ್ಷಣ ಅನಂತರ ಪ್ಯಾರಿಸಿನಲ್ಲಿ ಆಂಡ್ರೆಲೋಟಿ ಮತ್ತು ಫರ್ನಾರ್ಡ್ ಲೀಗರ್ ಅವರ ಬಳಿ ಕಲೆಯಲ್ಲಿ ಶಿಕ್ಷಣ ಪಡೆದರು. ತಮ್ಮ ಸುತ್ತಲಿನ ಜನರ ಜೀವನದ ಯಾತನೆ ಮತ್ತು ಅವರನ್ನು ನಿರಾಶ್ರಿತರಂತೆ ನಿಷ್ಪಲಗೊಂಡಿರುವುದನ್ನು ತಮ್ಮ ಭಾವೋದ್ರೇಕವಾದ ಉಜ್ವಲವಾದ ವರ್ಣಗಳಿಂದ ಚಿತ್ರಗಳಲ್ಲಿ ಮೂಡಿಸಿದ್ದಾರೆ. ಚಿತ್ರಗಳಲ್ಲಿನ ಮುಖಗಳು ಶೈಲಿಯುಕ್ತವಾಗಿದ್ದು, ಕಳೆಗುಂದಿದ ಕಣ್ಣುಗಳು, ಭಾವಗರ್ಭಿತವಾಗಿ ಮೌನದಿಂದಿರುವ ಈ ಜನ ಪ್ರತಿಭಟಿಸಲು ಶಕ್ಯರಿಲ್ಲ. ಅಪರಿಚಿತರಾಗಿ, ನಿಸ್ಸಂಕೋಚವಾಗಿ ನಮ್ಮನ್ನು ನೋಡುತ್ತಿದ್ದು, ಅವರ ನೋವುಗಳನ್ನು ನೋಡಿ ನಾವು ಅರ್ಥವಾಗದೆ ಇರುವಂತಹವರು. 1960ರ ನಂತರದ ಚಿತ್ರಗಳಲ್ಲಿ ಬದಲಾವಣೆ ಕಾಣಬಹುದು. ವಿಕಾಂಗಿತನದ ಪ್ರಕೃತಿ ಚಿತ್ರಗಳು. ಈ ಚಿತ್ರಗಳಲ್ಲಿ ರಾಮಕುಮಾರ್ ತಮ್ಮದೇ ಶೈಲಿಯನ್ನು ಬೆಳೆಸಿಕೊಂಡಿದ್ದಾರೆ.

ರಾಯ್ ಲಿಜೆಟೆನ್‌ಸ್ಟೈನ್

ರಾಯ್ 1923ರಲ್ಲಿ ಜನಿಸಿದ್ದು, ಚಿತ್ರ ಮತ್ತು ಶಿಲ್ಪ ಕಲಾವಿದ. ಅಮೆರಿಕಾದ ಪಾಪ್ ಕಲೆಯ ಪ್ರತಿಪಾದಕ. ಅವನು ಅಮೆರಿಕಾದ ಸಮೂಹ ಮಾಧ್ಯಮ ಮತ್ತು ವಾಣಿಜ್ಯ ಕಲೆಯ ಜಾಹಿರಾತು, ತೆರೆಯ ತಾರಾ ಚಿತ್ರಗಳು, ವಿಕಟ ಚಿತ್ರಾವಳಿ, ಗೋಡೆಯ ಬರಹಗಳು ಮುಂತಾದುವುಗಳನ್ನು ಕೊಲ್ಲಾಜ್‌ನಂತೆ ರಚಿಸಿ, ಜನಪ್ರಿಯ ಗೊಳಿಸಿದ. ಇದೊಂದು ಜನತಾ ಕಲೆಯಾಗಿ ಪ್ರಸಿದ್ಧಿ ಪಡೆಯಿತು. ಅವನು ರಚಿಸಿರುವ ಬಹುಪಾಲು ಚಿತ್ರಗಳು ದೊಡ್ಡದಾಗಿದ್ದು, ತನ್ನ ಚಿತ್ರ ರಚನೆಗೆ ಅಕ್ರಾಲಿಕ್ ವರ್ಣಗಳನ್ನು ಉಪಯೋಗಿಸಿದ್ದು, ಚಪ್ಪಟೆಯ ವರ್ಣಗಳು ಮತ್ತು ಉಜ್ವಲ ವರ್ಣಗಳನ್ನು ನೇರವಾಗಿ ಉಪಯೋಗಿಸುತ್ತಿದ್ದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರಿಚರ್ಡ್ ಹಾಮಿಲ್ಟನ್

ರಿಚರ್ಡ್ ಹಾಮಿಲ್ಟನ್

ಹಾಮಿಲ್ಟನ್ 1922ರಲ್ಲಿ ಜನಿಸಿದ ಇಂಗ್ಲಿಷ್ ಚಿತ್ರಕಲಾವಿದ. ರಾಯಲ್ ಅಕಾಡೆಮಿಯಲ್ಲಿ ಕಲಾಶಿಕ್ಷಣ ಪಡೆದ ಅವನು ಸೆಂಟ್ರಲ್ ಸ್ಕೂಲ್ ಆಫ್ ಆರ್ಟ್ ಅಂಡ್ ಕ್ರಾಫ್ಟ್‌ನಲ್ಲಿ ಮತ್ತು ನ್ಯೂ ಕ್ಯಾಸ್ಟಲ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕನಾಗಿ ಕೆಲಸ ಮಾಡಿದ. ಬ್ರಿಟಿಷ್ ಕಲೆಯ ಆಮೂಲಾಗ್ರವಾದ ಮಾರ್ಪಾಡಿಗೆ ಮೂಲತಃ ಇವನು ಕಾರಣಕರ್ತನು. ಪಾಪ್ ಕಲೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಗೀಕರಿಸುವಂತೆ ಮಾಡಿದವನು ಮತ್ತು ಮುದ್ರಣಕಾರ, ಬರಹಗಾರ, ಉಪನ್ಯಾಸಕನಾಗಿ ಹೆಸರು ಪಡೆದಿದ್ದಾನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೆಂಬ್ರಾಂಟ್

ರೆಂಬ್ರಾಂಟ್ ಹಾಲೆಂಡಿನ ಲೀಡನ್‌ನಲ್ಲಿ 1606ರಲ್ಲಿ ಜನಿಸಿದ. ಆಮ್‌ಸ್ಟರ್‌ಡ್ಯಾಮಿನಲ್ಲಿ ಕಲಾವಿದ್ಯಾರ್ಥಿಯಾಗಿ. ಆನಂತರ ತನ್ನದೇ ಆದ ಚಿತ್ರರಚನಾ ವಿಧಾನವನ್ನು ರೂಢಿಸಿಕೊಂಡು, ಸ್ವಂತ ಭಾವಚಿತ್ರಗಳನ್ನು ರಚಿಸಿದ. ಚಿತ್ರರಚನೆ ಮಾಡುವಾಗ ರೂಪದರ್ಶಿಗಳನ್ನು ಬಳಸುತ್ತಿದ್ದ, ರೂಪದರ್ಶಿ ಸಿಗದಿದ್ದರೆ, ಸ್ವಚಿತ್ರಗಳನ್ನು ಕನ್ನಡಿ ಮೂಲಕ ಚಿತ್ರಿಸಿದ್ದಾನೆ. ಅವನು ಸಾಮಾನ್ಯ ವಸ್ತುಗಳನ್ನು ಚಿತ್ರಿಸಿ ಅವುಗಳಲ್ಲಿ ಸೌಂದರ್ಯವನ್ನು ಕಾಣುತ್ತಿದ್ದ. ಪ್ರಕೃತಿಚಿತ್ರ, ಭಾವಚಿತ್ರ, ಧಾರ್ಮಿಕ, ಪ್ರಾಚೀನ ಗ್ರೀಕ್ ಮತ್ತು ರೋಮನ್ ಕಥೆಗಳು ಮುಂತಾದುವುಗಳನ್ನು ಚಿತ್ರಿಸಿರುವುದರಲ್ಲಿ ಅವನು ಕಲೆಯಲ್ಲಿ ಪಡೆದಿದ್ದ ಅನುಭವ ದ್ಯೋತಕವಾಗಿವೆ. ಅವನ ಚಿತ್ರಗಳಲ್ಲಿ ಮಾನವನ ಬಗೆಗೆ ಇದ್ದ ಕರುಣೆ, ದುರ್ಬಲತೆ, ಆಸೆ, ನಿರಾಸೆಗಳು, ತಲ್ಲಣ ಇವುಗಳನ್ನು ಕಾಣಬಹುದು. ಸಾಸ್ಕಿಯಾ ಅವನ ಹೆಂಡತಿ. ಅನೇಕ ಚಿತ್ರಗಳಿಗೆ ಅವಳೇ ರೂಪದರ್ಶಿ. ರೆಂಬ್ರಾಂಟ್ ರಚಿಸಿರುವ ಸ್ವಚಿತ್ರಗಳು ಇನ್ನಾವುದೇ ಕಲಾವಿದ ರಚಿಸಿಲ್ಲ. ಅವನ ಚಿತ್ರಗಳು ವಿಶ್ವಮಾನ್ಯತೆ ಪಡೆದಿದ್ದು, 1669ರಲ್ಲಿ ನಿಧನನಾದ.

ರೂಬೆನ್ಸ್ ಪೀಟರ್ ಪಾಲ್

ನವೋದಯ ಕಾಲದ ಶ್ರೇಷ್ಠ ಚಿತ್ರಕಾರನಾದ ಪೀಟರ್ ಪಾಲ್ ರೂಬೆನ್ಸ್ 1577ರಲ್ಲಿ ಜನಿಸಿದ. ಕೆಲವು ಕಲಾವಿದರ ಬಳಿ ಶಿಷ್ಯನಾಗಿ ಚಿತ್ರಕಲೆ ಕಲಿತು, ಇಟಲಿಗೆ ಬಂದು, ಮಾಂಟುವಾದ ಪ್ರಿನ್ಸ್‌ಚಾಪೆಲ್‌ನಲ್ಲಿ ಚಿತ್ರಗಳನ್ನು ಬರೆದ. ನೆದರ್‌ಲ್ಯಾಂಡಿನ ಸಭಾಭವನವದಲ್ಲಿ 'ಆಡೊರೇಷನ್ ಆಫ್ ದಿ ಮ್ಯಾಗಿ' ಚಿತ್ರವನ್ನು ಬರೆದಿದ್ದು, ಇದರಲ್ಲಿ ಇಪ್ಪತ್ತೈದು ಮನುಷ್ಯಾಕೃತಿಗಳಿವೆ. ನೂರಾರು ರೂಪಚಿತ್ರಗಳು, ಪ್ರಕೃತಿಚಿತ್ರಗಳು, ಬೇಟೆ ದೃಶ್ಯಗಳು, ಧಾರ್ಮಿಕ ಚಿತ್ರಗಳು ಹಾಗೂ ಕ್ರಿಸ್ತನ ಅನೇಕ ಚಿತ್ರಗಳನ್ನು ರಚಿಸಿದ್ದು, ಕ್ರಿಸ್ತನ ವೇದನೆ ನೋಟಕರಿಗೆ ಪರಿಣಾಮ ಬೀರುತ್ತದೆ. ಅವನು 1640ರಲ್ಲಿ ಮರಣಹೊಂದಿದ.

ರೆಡ್ಡಪ್ಪನಾಯ್ಡು ಎಂ.

ರೆಡ್ಡಪ್ಪನಾಯ್ಡು 1932ರಲ್ಲಿ ಪೂರ್ವ ಗೋದಾವರಿಯಲ್ಲಿ ಹುಟ್ಟಿದ್ದು, ಮದ್ರಾಸಿನ ಸರ್ಕಾರಿ ಕಲಾಶಾಲೆಯಿಂದ ಡಿಪ್ಲೊಮೊ ಪಡೆದಿದ್ದಾರೆ. ರಾಷ್ಟ್ರದ ಮತ್ತು ವಿದೇಶಗಳ ಅನೇಕ ಕಲಾ ಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಲ್ಲದೆ 1962ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ, 1962ರಲ್ಲಿ ತಮಿಳು ನಾಡು ಅಕಾಡೆಮಿ ಪ್ರಶಸ್ತಿ, ಆಂಧ್ರಪ್ರದೇಶ ಲಲಿತಕಲಾ ಅಕಾಡೆಮಿ ಮುಂತಾದ ಸಂಸ್ಥೆಗಳ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವರ ಹೆಚ್ಚಾಗಿ ತೈಲವರ್ಣ ಚಿತ್ರಗಳನ್ನು ರಚಿಸುತ್ತಿದ್ದು, ಚಿತ್ರಗಳಲ್ಲಿ ಸರಳತೆ, ರೇಖೆಗಳು ಮತ್ತು ವರ್ಣಸಂಯೋಜನೆಯಲ್ಲಿ ಪಾರದರ್ಶಕತೆಯನ್ನು ಕಾಣಬಹುದು. 'ದೇವತೆ' ಚಿತ್ರಮಾಲಿಕೆಯಲ್ಲಿ ಆಕಾರಗಳಲ್ಲಿ ಸರಳತೆ, ಬರವಣಿಗೆಯನ್ನು ಅಲಂಕಾರಿಕವಾಗಿ ಬಳಸಿದ್ದಾರೆ ಹಾಗೂ ಸಾಂಪ್ರದಾಯಿಕ ಅಂಶಗಳು, ಸಂಕೇತಗಳು ಚಿತ್ರದಲ್ಲಿ ಉಪಯೋಗಿಸುವರು. ಚಿತ್ರಗಳಲ್ಲಿ ರೇಖೆಗಳು ಪ್ರಧಾನವಾಗಿದ್ದು, ಅವುಗಳಲ್ಲಿ ಲಾಲಿತ್ಯ ಮತ್ತು ಭಾವ ಮುಖ್ಯವಾಗಿರುತ್ತವೆ. ಅವರು ಸಾಮಾನ್ಯವಾಗಿ ಭಾರತೀಯ ಪೌರಾಣಿಕ, ದೇವದೇವತೆಗಳು ಮುಂತಾದವು ಚಿತ್ರದ ವಸ್ತುಗಳಾಗಿರುತ್ತವೆ.

ರೆಡ್ಡಿ ಪಿ. ಟಿ.

ರೆಡ್ಡಿಯವರು 1915ರಲ್ಲಿ ಪಾಕಿಸ್ತಾನದಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಮುಂಬಯಿನ ಸರ್ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ನಿಂದ ಪಡೆದಿದ್ದು, ರಾಷ್ಟ್ರದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಚಿತ್ರ, ಶಿಲ್ಪ, ಗ್ರಾಫಿಕ್ ಮಾಧ್ಯಮಗಳಲ್ಲಿ ಕೃತಿಗಳನ್ನು ರಚಿಸಿದ್ದು, ಅವರ ಮೊದಲ ಚಿತ್ರಗಳು ಅಭಿವ್ಯಕ್ತಿತನದಿಂದ ಮತ್ತು ತಂತ್ರಕ್ಕೆ ಸಂಬಂಧಿಸಿವೆ. ಎಲ್ಲಾ ಮಾಧ್ಯಮಗಳಲ್ಲೂ ಕೃತಿಗಳನ್ನು ರಚಿಸುತ್ತಿದ್ದು, ಅಮೂರ್ತ ಶೈಲಿಯಲ್ಲೂ ಚಿತ್ರಗಳನ್ನು ರಚಿಸಿದ್ದಾರೆ.

ಲಲಿತ್ ಮೋಹನ್ ಸೆನ್

ಬಂಗಾಳದ ಶಾಂತಿಪುರದಲ್ಲಿ ಜನಿಸಿದ ಸೆನ್, ಲಕ್ನೋವಿನ ಸ್ಕೂಲ್ ಆಫ್ ಆರ್ಟ್‌ನಿಂದ ಕಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಭಾರತ ಸರ್ಕಾರವು ಅವರನ್ನು ಲಂಡನ್ನಿನಲ್ಲಿರುವ 'ಇಂಡಿಯಾ ಹೌಸ್' ಕಟ್ಟಡದಲ್ಲಿ ಭಿತ್ತಿಚಿತ್ರ ರಚಿಸಲು ಆರಿಸಿದ ಕಲಾವಿದರಲ್ಲಿ ಅವರೂ ಒಬ್ಬರು. ಯೂರೋಪ್, ಫ್ರಾನ್ಸ್ ಮತ್ತು ಇಟಲಿಯಲ್ಲಿನ ಗ್ಯಾಲರಿಗಳಿಗೆ ಭೇಟಿಯಿತ್ತು, ಅಲ್ಲಿ ಇಟಾಲಿಯನ್ ಪದ್ಧತಿಯ ಟೆಂಪರಾ ತಂತ್ರದಲ್ಲಿ ತರಬೇತಿ ಪಡೆದಿದ್ದಾರೆ. ಲಂಡನ್ನಿನಲ್ಲಿದ್ದಾಗ, ರಾಯಲ್ ಅಕಾಡೆಮಿಯಲ್ಲಿ ಕಲಾಪ್ರದರ್ಶನ ನಡೆಸಿದ್ದರು. ಎಚ್ಚಿಂಗ್, ಮರಕೆತ್ತನೆ ಮತ್ತು ಲಿಥೋ ಮಾಧ್ಯಮಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಕ್ಷ್ಮಣ ಪೈ

1926ರಲ್ಲಿ ಜನಿಸಿದ ಪೈ, ಜೆ. ಜೆ. ಕಲಾಶಾಲೆಯಿಂದ ಕಲೆಯಲ್ಲಿ ಶಿಕ್ಷಣ ಪಡೆದಿದ್ದು, 1951ರಲ್ಲಿ ಯೂರೋಪ್ ಪ್ರವಾಸ ಕೈಗೊಂಡು, ಪ್ಯಾರಿಸ್, ಲಂಡನ್, ನ್ಯೂಯಾರ್ಕ್, ಮ್ಯೂನಿಚ್ ಮತ್ತು ಭಾರತದ ಪ್ರಮುಖ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ವರ್ಣಗಳ ಬಳಕೆಯಲ್ಲಿ ಅವರ ಪ್ರತಿಭೆ ಅಪಾರವಾಗಿದ್ದು, ಮಾನವ ಮೂರ್ತಿಗಳನ್ನು ಸೃಷ್ಟಿಸಿ, ಪ್ರತಿಯೊಂದು ಚಿತ್ರವೂ ಅಲಂಕಾರಯುತವಾಗಿ ಹಾಗೂ ಕಾವ್ಯಾತ್ಮಕವಾಗಿರುತ್ತದೆ.

ಲಕ್ಷ್ಮಾಗೌಡ ಕೆ.

ಲಕ್ಷ್ಮಾಗೌಡ 1940ರಲ್ಲಿ ಆಂಧ್ರಪ್ರದೇಶದ ನಿಜಾಮಪುರದಲ್ಲಿ ಜನಿಸಿದ್ದು, 1963ರಲ್ಲಿ ಹೈದ್ರಾಬಾದಿನ ಕಾಲೇಜ್ ಆಫ್ ಫೈನ್ ಆರ್ಟ್ಸ್‌ನಿಂದ ಕಲೆಯಲ್ಲಿ ಡಿಪ್ಲೊಮೊ ಮತ್ತು ಅನಂತರ ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್ಸ್‌ನಲ್ಲಿ ಪ್ರೊ. ಕೆ. ಜಿ. ಸುಬ್ರಮಣ್ಯನ್ ಅವರ ಬಳಿ ಭಿತ್ತಿಚಿತ್ರ ರಚನೆಯನ್ನು ಕಲಿತಿದ್ದಾರೆ. ನಿಶ್ಚಿತವಾದ ಮತ್ತು ವೈಶಿಷ್ಟ್ಯವುಳ್ಳ ಎಚ್ಚಿಂಗ್ ಮತ್ತು ರೇಖಾಚಿತ್ರಗಳ ಮೂಲಕ ತಮ್ಮ ಸೃಜನಶೀಲತೆಯನ್ನು ಪ್ರತಿಬಿಂಬಿಸುತ್ತಿದ್ದಾರೆ. ಮನಸ್ಸಿನ ಭಾವನೆಗಳನ್ನು ಯೋಗ್ಯವಾಗಿರುವಂತೆ ಅನ್ವೇಷಿಸಿ, ಅದರಲ್ಲಿ ಪ್ರಯತ್ನಿಸಿ, ನಿರಾತಂಕವಾಗಿರುವ ಮನುಷ್ಯನ ಬಂಧನಗಳನ್ನು, ತುಮುಲಗಳನ್ನು ಸಮಚಿತ್ತವಾಗಿ, ಸೌಮ್ಯವಾದ ವಾತಾವರಣದಲ್ಲಿ ಜಾಗೃತಿವುಂಟುಮಾಡುವರು. ಇಂದ್ರಿಯ ಗೋಚರ ಹಾಗೂ ಕೆಲವೊಮ್ಮೆ ಅತಿಮಾನುಷ ಪ್ರತಿಮಾ ಯೋಜನೆ ಬಳಸುವರು.

ಲಿಪ್‌ಚಿಟ್ಜ್ ಜಾಕ್ಯೂಸ್

ಲಿಪ್‌ಚಿಟ್ಜ್ 1891ರಲ್ಲಿ ಜನಿಸಿದ ಶಿಲ್ಪಕಲಾವಿದ. 1909ರಲ್ಲಿ ಪ್ಯಾರಿಸಿನಲ್ಲಿ ನೆಲೆಸಿ, ಬ್ಯೂಯಾಕ್ ಆರ್ಟ್ಸ್‌ನಲ್ಲಿ ಮತ್ತು ಅಕಾಡೆಮಿ ಜೂಲಿಯಲ್ಲಿ ಕಲಾಶಿಕ್ಷಣ ಪಡೆದ. ಅನಂತರ 1941ರಲ್ಲಿ ನ್ಯೂಯಾರ್ಕ್‌ನಲ್ಲಿ ನೆಲೆಸಿದ. ಆವನ ಶಿಲ್ಪಗಳಲ್ಲಿ ಕ್ಯೂಬಿಸಂನ ಗುಣಗಳನ್ನು ಕಾಣಬಹುದು ಮತ್ತು ಅನೇಕ ಶಿಲ್ಪಗಳು ನ್ಯೂಯಾರ್ಕ್‌ನ ವಿವಿಧ ಕಡೆಗಳಲ್ಲಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಲಾಹೂಟ್ರೇ ಟೌವ್‌ಲೌಸೆ

ಟೌವ್‌ಲೌಸೆ ಫ್ರೆಂಚ್ ಕಲಾವಿದನಾಗಿದ್ದು, 1864ರಲ್ಲಿ ಆಲ್ಬಿ ಎಂಬಲ್ಲಿ ಶ್ರೀಮಂತ ಕುಟುಂಬದಲ್ಲಿ ಜನಿಸಿದ. 1882ರಲ್ಲಿ ಪ್ಯಾರಿಸಿನಲ್ಲಿ ಶಿಕ್ಷಣ ಪಡೆದ. ಅವನಿಗೆ ಇಂಪ್ರಷನಿಸವ್ ಕಲೆಯ ಅರಿವು ಇದ್ದರೂ, ಕಲಾವಿದನಾದ ಡಿಗಾಸ್ ರಚಿಸುತ್ತಿದ್ದ ಸಮಕಾಲೀನ ಜೀವನವನ್ನು ಚಿತ್ರಿಸಿದ. ಸಂಗೀತ, ನೃತ್ಯದ ಕೊಠಡಿ, ಕ್ಯಾಬರೆ ಮುಂತಾದುವುಗಳನ್ನು ಹೆಚ್ಚಾಗಿ ಚಪ್ಪಟೆಯ ಮಾಧ್ಯಮದಲ್ಲಿ ಚಿತ್ರಿಸಿದ್ದಾನೆ.

ಲಿಯೋನಾರ್ಡೋ ದ ವಿಂಚಿ

ವಿಂಚಿ 1452ರಲ್ಲಿ ಇಟಲಿಯ ವಿಂಚಿಯಲ್ಲಿ ಜನಿಸಿದ. ಪರಿಸರವೇ ಅವನ ಕಲಾಪ್ರತಿಭೆಗೆ ಸ್ಫೂರ್ತಿಯಾಗಿ ಕಲೆ ಕಲಿತ, ಆನಂತರ ಕೆಲವು ಕಡೆ ಕಲೆ ಕಲಿತ. ಚಿತ್ರ ಕಲೆಗಾಗಿ ಮನುಷ್ಯರ ದೇಹರಚನೆ ಅಭ್ಯಾಸ ಮಾಡಿ, ಇಟಲಿಯ ಪ್ರಮುಖ ನಗರಗಳನ್ನು ಸಂಚರಿಸಿದ. ಚಿತ್ರದಲ್ಲಿ ನೆರಳು ಬೆಳಕು, ವರ್ಣದಷ್ಟೇ ಮುಖ್ಯವಾದದ್ದು ಎಂದು ಹೇಳಿದ ಅವನದು ಬಹುಮುಖ ಪ್ರತಿಭೆಯ ವ್ಯಕ್ತಿತ್ವ. ಚಿತ್ರಕಾರ, ವಿಜ್ಞಾನಿ, ಶಿಲ್ಪಿ, ವಾಸ್ತುಶಿಲ್ಪಿ, ಗಣಿತ ವಿಜ್ಞಾನಿ ಮುಂತಾದುವುಗಳಲ್ಲಿ ಪರಿಣತನಾಗಿದ್ದ.



ಲಿಯೋನಾರ್ಡೋ ದ ವಿಂಚಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇಟಲಿಯ ನವೋದಯ ಕಾಲದ ಮೂವರು ಪ್ರತಿಭಾಶಾಲಿಗಳಲ್ಲಿ ಲಿಯೋನಾರ್ಡೊ ದ ಏಂಚಿ ಹೆಸರು ಮೊದಲನೆಯದು. ಇನ್ನುಳಿದವರಿಬ್ಬರು ಮೈಕೆಲೆಂಜಲೋ ಮತ್ತು ರಾಫೆಲ್. ಅವನು ರಚಿಸಿರುವ 'ಕೊನೆಯ ಭೋಜನ' ಮತ್ತು 'ಮೋನಾಲಿಸಾ' ವಿಶ್ವ ಖ್ಯಾತಿ ಪಡೆದ ಚಿತ್ರಗಳು. ಅವನು 1529ರಲ್ಲಿ ನಿಧನನಾದ.

ಪ ಜುಭಾಯಿ ಭಗತ್

ಕಲಾವಿದರ ಮನೆತನದಲ್ಲಿ ಹುಟ್ಟಿದ ಭಗತ್, ಚಿಕ್ಕಂದಿನಲ್ಲೇ ಕಲೆಯಲ್ಲಿ ಆಸಕ್ತಿ ಬೆಳೆದು, ಬೀದಿಗಳಲ್ಲಿ ತಿರುಗುತ್ತಾ, ಸ್ಕೆಚ್‌ಗಳನ್ನು ಮಾಡುತ್ತಿದ್ದರು. ಆದರಲ್ಲೂ ಹನುಮಂತನ ಚಿತ್ರ ರಚಿಸುವುದರಲ್ಲಿ ಸಿದ್ಧಿ ಪಡೆದಿದ್ದರು. ತೈಲವರ್ಣ, ಎಚ್ಚಿಂಗ್, ವುಡ್‌ಕಟ್, ಲೀನೋ ಹಾಗೂ ಟೆಂಪರಾ ಮಾಧ್ಯಮದಲ್ಲಿ ವಿಶೇಷ ಪರಿಣತಿ ಪಡೆದಿದ್ದರು. ಕಣ್ಣಿಲೆಯನ್ನೂ ತಮ್ಮ ಚಿತ್ರಗಳಲ್ಲಿ ಉಪಯೋಗಿಸುತ್ತಿರಲಿಲ್ಲ. ಲಂಡನ್ನಿನ ರಾಯಲ್ ಅಕಾಡೆಮಿಯಲ್ಲಿ ಅವರ ಕಲಾಕೃತಿಗಳು ಪ್ರದರ್ಶಿತವಾಗಿವೆ.

ಪ್ರಕೃತಿ ಚಿತ್ರ ಹಾಗೂ ತಮ್ಮ ಪರಿಸರಕ್ಕೆ ಸಂಬಂಧಿಸಿದಂತೆ ಸಂಯೋಜನಾ ಚಿತ್ರಗಳನ್ನು ರಚಿಸಿದ್ದು, ಸಾಂಪ್ರದಾಯಿಕತೆಯನ್ನು ಆಧುನಿಕವಾಗಿ ಚಿತ್ರಿಸಿರುವರು. ಈ ಗುಣಗಳನ್ನು ಅವರ ಭಿತ್ತಿಚಿತ್ರಗಳಲ್ಲಿ ಕಾಣಬಹುದು.

ವಾಸುದೇವ್ ಎಸ್. ಜಿ

ವಾಸುದೇವ್ 1941ರಲ್ಲಿ ಮೈಸೂರಿನಲ್ಲಿ ಜನಿಸಿದ್ದು, ಮದ್ರಾಸಿನ ಸರ್ಕಾರಿ ಕಲಾಶಾಲೆಯಿಂದ 1968ರಲ್ಲಿ ಡಿಪ್ಲೊಮೊವನ್ನು, ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆಯ ಶಿಷ್ಯವೇತನವನ್ನು 1965-66ರಲ್ಲಿ ಪಡೆದಿದ್ದಾರೆ. ರಾಷ್ಟ್ರದ ಮತ್ತು ಅಂತರರಾಷ್ಟ್ರೀಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿರುವ ಅವರಿಗೆ 1967ರ ಕೇಂದ್ರ ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ, ತಮಿಳುನಾಡು ಮತ್ತು ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿಗಳು ಸಂದಿವೆ. ಸಂಸ್ಕಾರ, ವಂಶವೃಕ್ಷ, ಕಾಡು ಚಿತ್ರಗಳಿಗೆ ಕಲಾನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅವರ ಮೊದಲ ಚಿತ್ರಗಳು ಮಿಥುನಕ್ಕೆ ಸಂಬಂಧಿಸಿದ್ದು, ಸರಳತೆ ರೇಖೆ ಮತ್ತು ವರ್ಣಗಳ ಮೂಲಕ ಹಾಗೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ವಾಸುದೇವ್ ಎಸ್. ಜಿ.

ಅನಂತರ 'ವೃಕ್ಷ' ಮಾಲಿಕೆಯಲ್ಲಿ, ಸಂಕೇತ, ಅದು ಜೀವನದ ಚೇತನವಾಗಿದ್ದು, ಕಲೆಯಲ್ಲಿ ಕೆಲವು ಪ್ರಯೋಗಗಳನ್ನು ಮಾಡಿದ್ದಾರೆ. ಅಲ್ಲದೆ ತಾಮ್ರ ಮತ್ತು ಬೆಳ್ಳಿಯ ತಗಡುಗಳಲ್ಲಿ ಉಬ್ಬುಶಿಲ್ಪಗಳನ್ನು ರಚಿಸಿದ್ದು, ವೈವಿಧ್ಯತೆ ಕಾಣಬಹುದು.

ವಾಸ್ಲಿ ಕ್ಯಾಂಡಿನೆಸ್ಕಿ

ಕ್ಯಾಂಡಿನೆಸ್ಕಿ ರಷ್ಯನ್ ಕಲಾವಿದನಾಗಿದ್ದು 1866ರಲ್ಲಿ ಮಾಸ್ಕೋದಲ್ಲಿ ಜನಿಸಿದ. ಮೂಲತಃ ನ್ಯಾಯವಾದಿಯಾಗಿದ್ದು ತನ್ನ ಮೂವತ್ತನೆಯ ವಯಸ್ಸಿನಲ್ಲಿ, ಮ್ಯೂನಿಚ್ ನಲ್ಲಿ ಕಲೆ ಕಲಿತ. ಅವನ ಚಿತ್ರಗಳು ರಷ್ಯಾದೇಶದ ನಿರೂಪಣೆ ಮತ್ತು ಸಿಸನ್ ಗುಂಪಿಗೆ ಸೇರಿದ ಚಿತ್ರಗಳನ್ನು ಹೋಲುತ್ತವೆ. ಅನಂತರದ ಚಿತ್ರಗಳಲ್ಲಿ ರಷ್ಯಾದ ಪ್ರತಿಮೆ, ಜಾನಪದ ಕಲೆ ಪ್ರಬಲವಾಗಿ ಪ್ರಭಾವ ಬೀರಿತು. ಅವನ ಪ್ರಕೃತಿ ಚಿತ್ರಗಳು ಪ್ರತ್ಯೇಕವಾಗಿ ಪ್ರಕೃತಿಯಿಂದ ಬೇರೆಯಾಗಿದ್ದು, ಹೊಸ ಬೆಳವಣಿಗೆಯಿಂದ ಕೂಡಿವೆ. 1910ರಲ್ಲಿ ಮೊದಲ ಅಮೂರ್ತ ಚಿತ್ರ ರಚಿಸಿದ ಮತ್ತು ಅಮೂರ್ತ ಕಲೆಯ ಆದ್ಯ ಪ್ರವರ್ತಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಾದ. ಸಂಗೀತದಿಂದ ಭಾವ ಪ್ರೇರಣೆ ಪಡೆದ ಅವನ ಚಿತ್ರಗಳು ಅಮೂರ್ತ ಕಲೆಯ ಮಿತಿಯನ್ನು ಮಾತ್ರವಲ್ಲದೆ ಅದರ ಮಹತ್ಸಾಧನೆಯನ್ನು ಎತ್ತಿತೋರಿಸುತ್ತವೆ. ಯಾವ ಬಗೆಯ ನಿರ್ಬಂಧ, ಕಟ್ಟುಪಾಡುಗಳಿಗೂ ಒಳಗಾಗದೆ, ಕಲ್ಪನೆ ಸುಪ್ತ ಚೇತನಗಳಿಗೆ ಪ್ರಾಧಾನ್ಯ ಇರುವುದು ಅವನ ಚಿತ್ರಗಳ ವೈಶಿಷ್ಟ್ಯ.

ವಾಲ್ಡಿಮಿರ್ ಟಾಟ್ಲಿನ್

ಟಾಟ್ಲಿನ್ ಸೋವಿಯತ್ ದೇಶದ ಕಲಾವಿದನಾಗಿದ್ದು, 1885ರಲ್ಲಿ ಕಾರ್‌ಕೋನಾದಲ್ಲಿ ಜನಿಸಿದ. 1902ರಲ್ಲಿ ಪೆಂಜಾ ಸ್ಕೂಲ್ ಆಫ್ ಆರ್ಟ್ ಮತ್ತು ಮಾಸ್ಕೋದ ಕಾಲೇಜ್ ಆಫ್ ಆರ್ಟ್‌ನಲ್ಲಿ ಶಿಕ್ಷಣ ಪಡೆದ. 1913ರಲ್ಲಿ ಪ್ಯಾರಿಸಿಗೆ ಬಂದನಂತರ, ಪಿಕಾಸೋವಿನ ಕೃತಿಗಳಿಂದ ಪ್ರಭಾವಿತನಾದ. ಅವನು ಶಿಲ್ಪಕೃತಿಗಳನ್ನು ಅಮೂರ್ತ ಶೈಲಿಯಲ್ಲಿ ರಚಿಸಿದ್ದು, ಗಾಜು, ಕಬ್ಬಿಣ, ಮರ ಮುಂತಾದುವುಗಳನ್ನು ಶಿಲ್ಪಗಳಲ್ಲಿ ಉಪಯೋಗಿಸಿದ್ದಾನೆ ಹಾಗೂ ಸುಲಭವಾಗಿ ನೇತಾಡುತ್ತಿರುವಂತೆ ಕೆಲವು ಶಿಲ್ಪಗಳನ್ನು ರಚಿಸಿದ್ದಾನೆ. ಅವನು 1953ರಲ್ಲಿ ನಿಧನನಾದ.

ವಿನ್ಸೆಂಟ್ ವಾನ್‌ಗೋ

ವಾನ್‌ಗೋ 1853ರಂದು ಹಾಲೆಂಡಿನ ಗ್ರೂಟ್ ಜುಂಡರ್ಟ್‌ನಲ್ಲಿ ಹುಟ್ಟಿದ. ತಂದೆ ಕ್ರೈಸ್ತ ಪಾದ್ರಿ. ಅವನೂ ಸಹ ಪಾದ್ರಿಯ ಕೆಲಸವಲ್ಲಿದ್ದಾಗ, ಸಮಯ ಸಿಕ್ಕಾಗ ರೇಖಾಚಿತ್ರಗಳನ್ನು ಚಿತ್ರಿಸುತ್ತಿದ್ದ. ಬ್ರುಸೆಲ್ಸ್‌ಗೆ ಹೋಗಿ ಕಲಾಶಿಕ್ಷಣ ಪಡೆದು ಬಂದ ನಂತರ ಹಳ್ಳಿಯ ಜೀವನದ ದೃಶ್ಯಗಳನ್ನು ಚಿತ್ರಿಸಿದ. ಪ್ಯಾರಿಸಿಗೆ ಬಂದ ಮೇಲೆ ಸಮಷ್ಟಿಪರಿಣಾಮ ಪದ್ಧತಿಯಲ್ಲಿ ಅವನಿಗೆ ಆಸಕ್ತಿ ಬಂದು, ತನ್ನ ಚಿತ್ರಗಳಲ್ಲಿ ಉಜ್ವಲ ವರ್ಣಗಳನ್ನು ಉಪಯೋಗಿಸಿದ. ಪ್ಯಾರಿಸಿನ ಜೀವನ, ಜನದಟ್ಟಣೆಯ ಕೊಳಕು ಬೀದಿಗಳು, ಕೆಫೆಗಳು, ಪರಿಸರ ಅವನ ಚಿತ್ರಗಳಿಗೆ ವಸ್ತುಗಳಾಗಿ, ಅನೇಕ ಚಿತ್ರಗಳನ್ನು ರಚಿಸಿದ.[1] ಸೂರ್ಯಕಾಂತಿ ಹೂಗಳನ್ನು ಸೂರ್ಯನ ಬೆಳಕಿನಿಂದ ಪ್ರಜ್ವಲಿತವಾಗಿರುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿನ್ಸೆಂಟ್ ವಾನ್‌ಗೋ

ಹಣ್ಣಿನ ಮರಗಳನ್ನು ಚಿತ್ರಿಸಿದ. ಆ ಚಿತ್ರಗಳು ಚಲಿಸುತ್ತಿರುವಂತೆ ಮತ್ತು ಜೀವಂತವಾಗಿರುವಂತೆ ಇದ್ದವು. ಅವನು ಅನೇಕ ಸ್ವಚಿತ್ರ, ತೈಲಚಿತ್ರ, ರೇಖಾಚಿತ್ರ ರಚಿಸಿ 1890ರಲ್ಲಿ ಮರಣಹೊಂದಿದ.

ವಿಲಿಯಂ ಹೋಗಾರ್ತ್

ವಿಲಿಯಂ ಹೋಗಾರ್ತ್ 1697ರಲ್ಲಿ ಲಂಡನ್ನಿನಲ್ಲಿ ಹುಟ್ಟಿದ. ಬಾಲ್ಯದಲ್ಲೇ ಚಿತ್ರ ಬರೆಯುವುದರಲ್ಲಿ ಆಸಕ್ತಿ ಬೆಳೆದು ಸರ್ ಜೇಮ್ಸ್ ಥಾರ್ನ್‌ಹಿಲ್ ಎಂಬುವನಲ್ಲಿ ಚಿತ್ರಕಲೆಯನ್ನು ಕಲಿತ. ಸಮಾಜದಲ್ಲಿ ತಾನು ಕಂಡ ಜೀವನವೈಖರಿಯ ಹಲವು ಘಟ್ಟಗಳನ್ನು ಚಿತ್ರಗಳಲ್ಲಿ ಚಿತ್ರಿಸುತ್ತಿದ್ದ ಮತ್ತು ಮುಖ್ಯವಾದ ಘಟನೆಗಳ ಚಿತ್ರಣದ ಮೂಲಕ ಒಂದು ಜೀವನ ಕಥೆಯನ್ನು ಹೇಳುವ ಚಿತ್ರಗಳನ್ನು ಬರೆದು, ಚಿತ್ರ ರಚನೆಯಲ್ಲಿ ಒಂದು ವಿಶಿಷ್ಟ ಪ್ರಕಾರವನ್ನು ಸೃಷ್ಟಿಸಿದ. 'ದಿ ಹಾರ್ಲಟ್ಸ್ ಪ್ರೋಗ್ರೆಸ್', ಚಿತ್ರದ ಮಾಲಿಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಯಲ್ಲಿ ವೇಶ್ಯೆಯೊಬ್ಬಳ ಜೀವನದ ವಿವಿಧ ಹಂತಗಳನ್ನು ಚಿತ್ರಿಸಿದ, ಚಿತ್ರಗಳ ಮೂಲಕ ಕಥೆಗಳನ್ನು ಹೇಳುತ್ತಿದ್ದ ಮತ್ತು ಈ ಸ್ಪಷ್ಟನೆಯ ಚಿತ್ರಗಳು ವಾಸ್ತವಿಕವಾಗಿರುತ್ತಿದ್ದವು. ಅವನ ಅನೇಕ ಚಿತ್ರಗಳು ಮುದ್ರಿತಗೊಂಡು ತುಂಬ ಜನಪ್ರಿಯವಾಗಿದ್ದವು. ಅವನು ಚಿತ್ರಕಲೆಯನ್ನು ನಾಟಕೀಯ ನಿರೂಪಣೆಯ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದ ಮತ್ತು ತಾನು ಕಂಡ ಸಮಾಜದ ಲೋಪದೋಷಗಳನ್ನು ತನ್ನ ಚಿತ್ರಗಳ ಮೂಲಕ ಬಯಲಿಗೆಳೆದ. ಅವನು 1764ರಲ್ಲಿ ತೀರಿಕೊಂಡ.

ವಿಲಿಯಂ ಬ್ಲೇಕ್

ವಿಲಿಯಂ ಬ್ಲೇಕ್ 1957ರಲ್ಲಿ ಲಂಡನ್ನಿನಲ್ಲಿ ಜನಿಸಿದ. ಅವನು ಕಲೆ ಮತ್ತು ಸಾಹಿತ್ಯಗಳಲ್ಲಿ ಹೆಸರು ಪಡೆದಿದ್ದ. ಅವನು ಬಾಲ್ಯದಲ್ಲಿ ತನ್ನ ಕನಸು, ಕಲ್ಪನೆಗಳನ್ನು ಚಿತ್ರಗಳಲ್ಲಿ ಮೂಡಿಸಿದ. ಸಾಂಪ್ರದಾಯಿಕ ಕಲಾಶಿಕ್ಷಣ ಇಷ್ಟಪಡದೆ, ಕೆತ್ತನೆ ಕೆಲಸ ಗಾರನ ಬಳಿ ವೃತ್ತಿಶಿಕ್ಷಣ ಪಡೆದ. ಅನಂತರ ಕೆತ್ತನೆಗಾರ ಮತ್ತು ಕಲಾವಿದನಾಗಿ ತನ್ನ ಜೀವನ ಪ್ರಾರಂಭಿಸಿದ. ಸಾಂಪ್ರದಾಯಿಕ ಕಲೆಯ ಹಾದಿಯನ್ನು ತುಳಿಯದೆ ವಿಶಿಷ್ಟವಾದ ಹಾದಿ ಹಿಡಿದ. ಫ್ರಾನ್ಸಿನ ಮಹಾಕ್ರಾಂತಿ ಅವನ ಮೇಲೆ ಪ್ರಭಾವ ಬೀರಿ, ಅನಂತರ ಕಾವ್ಯಗಳನ್ನು ರಚಿಸಿದ. ಅನೇಕ ಅತ್ಯುತ್ತಮ ಕವನಗಳು ಹೊರಬಂದವು. ಉತ್ತಮ ಚಿತ್ರ ಮತ್ತು ಕವನಗಳನ್ನು ರಚಿಸಿದ ವಿಶಿಷ್ಟ ವ್ಯಕ್ತಿ ಬ್ಲೇಕ್ 1827ರಲ್ಲಿ ತೀರಿಕೊಂಡ.

ವಿವಾನ್ ಸುಂದರಂ

ವಿವಾನ್ ಸುಂದರಂ 1943ರಲ್ಲಿ ಜನಿಸಿದ್ದು, ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್‌ನಿಂದ 1965ರಲ್ಲಿ ಪದವಿ ಪಡೆದಿದ್ದು, ಕಾಮನ್‌ವೆಲ್ತ್ ಶಿಷ್ಯವೇತನ ಪಡೆದು 1968ರಲ್ಲಿ ಲಂಡನ್ನಿನ ಸ್ಲೇಡ್ ಸ್ಕೂಲ್‌ನಲ್ಲಿ ಕಲಾಭ್ಯಾಸ ಹಾಗೂ ಅನೇಕ ಮುಖ್ಯ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ತಮ್ಮ ಕೃತಿಗಳಲ್ಲಿ ಸಾಮಾಜಿಕ, ರಾಜಕೀಯ ವಸ್ತುಗಳ ಮೇಲೆ ತಮ್ಮ ಭಾವನೆಗಳನ್ನು ಚಿತ್ರದಲ್ಲಿ ಮೂಡಿಸಿದ್ದು. ಪಾಬ್ಲೊ ನೆರೋಡಾನ ಕವನಗಳ ಮೇಲೆ ಚಿತ್ರಗಳನ್ನು ರಚಿಸಿದ್ದಾರೆ ಹಾಗೂ ತುರ್ತು ಪರಿಸ್ಥಿತಿಯ ವೇಳೆಯಲ್ಲಿ ತಮ್ಮ ಭಾವನೆಗಳನ್ನು ಚಿತ್ರಗಳಲ್ಲಿ ಮೂಡಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವೆಂಕಟಪ್ಪ ಕೆ.

ವೆಂಕಟಪ್ಪ ಕೆ.

ನಮ್ಮ ರಾಜ್ಯದ ಕಲಾವಿದರಾದ ಕೆ. ವೆಂಕಟಪ್ಪನವರು 1886ರಲ್ಲಿ ಜನಿಸಿದರು. ಮೈಸೂರಿನ ಜಾಮರಾಜೇಂದ್ರ ಕಲಾಶಾಲೆ ಹಾಗೂ ಮದ್ರಾಸಿನ ಕಲಾಶಾಲೆಯಲ್ಲಿ ಶಿಕ್ಷಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಪಡೆದು, ಅನಂತರ ಕಲ್ಕತ್ತಾ ಕಲಾಶಾಲೆಯಲ್ಲಿ ಶಿಕ್ಷಣ ಪಡೆದರು. ವರ್ಣಚಿತ್ರ, ಪ್ಲಾಸ್ಟರ್ ಆಫ್ ಪ್ಯಾರೀಸ್, ಉಬ್ಬುಕೆತ್ತನೆಯ ಶಿಲ್ಪಗಳಲ್ಲಿ ವೆಂಕಟಪ್ಪನವರು ಸಿದ್ಧಹಸ್ತರಾಗಿದ್ದರು. ಬಂಗಾಳ ಚಿತ್ರ ರಚನಾ ವಿಧಾನದಲ್ಲಿ ಸಿದ್ಧಿ ಪಡೆದಿದ್ದರು. ಅವರ ಪ್ರಕೃತಿ ಚಿತ್ರಗಳಲ್ಲಿ ರಮಣೀಯತೆ, ಕ್ಷಣಿಕ ವ್ಯಚಿತ್ರ್ಯಗಳನ್ನು ಕಾಣಬಹುದು. ಸೂಕ್ಷ್ಮ ಕೆಲಸ, ಚಿತ್ರರಚನೆಯಲ್ಲಿ ಬಣ್ಣ, ರೇಖೆಗಳಿಗೆ ಇದ್ದಷ್ಟೇ ಮುಖ್ಯ ಚಿತ್ರದ ವಸ್ತುವಿಗೂ ಇರುವುದು ಅವರ ಚಿತ್ರಗಳ ವೈಶಿಷ್ಟ್ಯ. ಅವರು ಶ್ರೀಮತಿ ಹೆರಿಂಗ್ ಹ್ಯಾಮ್‌ರ ಜೊತೆಯಲ್ಲಿ ಹೋಗಿ ಅಜಂತಾದಲ್ಲಿರುವ ಭಿತ್ತಿಚಿತ್ರಗಳನ್ನು ಪ್ರತಿ ಮಾಡಿದ್ದಾರೆ. ಕಿರಿಯ ಆಕಾರದ ಚಿತ್ರಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರಾಗಿದ್ದ ಅವರ ಉಬ್ಬು ಶಿಲ್ಪ ಮುಂತಾದುವುಗಳನ್ನು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆಯಲ್ಲಿ ನೋಡ ಬಹುದು. ಅವರು 1965ರಲ್ಲಿ ನಿಧನರಾದರು.

ವೆಲಾಜ್ ಕ್ವೆಜ್

ವೆಲಾಜ್ ಕ್ವೆಜ್ 1599ರಲ್ಲಿ ಸ್ಪೇನ್ ದೇಶದಲ್ಲಿ ಜನಿಸಿದ್ದು, 1617ರಲ್ಲಿ ಪಚೆಕೋ ಕಾರ್ಯಾಗಾರದ ಅಕಾಡೆಮಿಯಿಂದ ಪದವಿ ಪಡೆದ. ನಾಲ್ಕನೆಯ ಫಿಲಿಪ್ ದೊರೆಯ ಆಸ್ಥಾನದಲ್ಲಿ ಕಲಾವಿದನಾಗಿ, ರಾಜ ಕುಟುಂಬದವರ ಚಿತ್ರಗಳನ್ನು ಹಾಗೂ ರಾಜನು ಸೂಚಿಸಿದ ಚಿತ್ರಗಳನ್ನು ರಚಿಸಿದ. ಇಟಲಿಗೆ ಹೋಗಿ ಬಂದನಂತರ, ಅಲ್ಲಿನ ಚಿತ್ರಗಳಿಂದ ಪ್ರಭಾವಿತನಾಗಿ, ಪ್ರಕೃತಿಚಿತ್ರ, ಭಾವಚಿತ್ರಗಳನ್ನು ಬರೆದ. ಸಾಮಾನ್ಯ ಬದುಕಿನ ಚಿತ್ರಗಳನ್ನು ರಚಿಸಿದ್ದು, ಚಿತ್ರಗಳಲ್ಲಿ ಭಾವೋದ್ವೇಗ, ಬಣ್ಣಗಾರಿಕೆ, ಲಾಲಿತ್ಯ, ಕೌಶಲವನ್ನು ಕಾಣಬಹುದು. 1660ರಲ್ಲಿ ಮರಣಹೊಂದಿದ.

ಶರಬರಿ ರಾಯ್ ಚೌಧುರಿ

1933ರಲ್ಲಿ ಬಂಗ್ಲಾ ದೇಶದಲ್ಲಿ ಜನಿಸಿದ ಶರಬರಿ ರಾಯ್ ತಮ್ಮ ಕಲಾಶಿಕ್ಷಣವನ್ನು ಕಲ್ಕತ್ತಾದ ಸರ್ಕಾರಿ ಕಲಾಶಾಲೆಯಿಂದ 1956ರಲ್ಲಿ ಪಡೆದಿದ್ದು, ಕೆಲವು ಕಾಲ ಹೆಸರಾಂತ ಶಿಲ್ಪಿ ಪ್ರದೋಶ್ ದಾಸ್‌ಗುಪ್ತ ಅವರ ಬಳಿ ಶಿಲ್ಪಕಲೆ ಕಲಿತು. 1956ರಲ್ಲಿ ಭಾರತ ಸರ್ಕಾರದ ಶಿಷ್ಯವೇತನ ಪಡೆದಿದ್ದರು. ಅಲ್ಲದೆ 1962ರಲ್ಲಿ ಇಟಲಿ ಸರ್ಕಾರದ ಶಿಷ್ಯವೇತನ ಸಹ ಪಡೆದಿದ್ದು, ಪ್ರಸ್ತುತ ಶಾಂತಿನಿಕೇತನದ ಕಲಾಭವನದಲ್ಲಿ ಶಿಲ್ಪಕಲಾ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಶಿಲ್ಪಕೃತಿಗಳ ಪ್ರದರ್ಶನವನ್ನು 1967ರಲ್ಲಿ ನ್ಯೂಯಾರ್ಕ್, 1977ರಲ್ಲಿ ನವದೆಹಲಿ ಮತ್ತು ಅನೇಕ ಮುಖ್ಯ ಕಲಾಪ್ರದರ್ಶನಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಭಾಗವಹಿಸಿದ್ದು, 1967ರಲ್ಲಿ ಭಾರತದ ಮೊದಲ ಟ್ರಿನಾಲೆ ಕಲಾಪ್ರದರ್ಶನದಲ್ಲೂ ಮತ್ತು 1977ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಅವರ ಮೊದಲ ಶಿಲ್ಪಗಳು ಮನುಷ್ಯಾಕೃತಿಗಳಿಂದ ಕೂಡಿದ್ದು, ಆಕೃತಿಗಳಲ್ಲಿ ಸರಳತೆ ಕಾಣ ಬಹುದು. ಭಾವಶಿಲ್ಪ, ಶಿಲ್ಪಸಂಯೋಜನೆಗಳನ್ನು ರಚಿಸಿದ್ದು, ವಿವಿಧ ಮಾಧ್ಯಮ ಗಳಲ್ಲಿ ಪ್ರಯೋಗ ನಡೆಸಿದ್ದಾರೆ. ಶೈಲಿಯುಕ್ತವಾದ ಶಿಲ್ಪಗಳು ಮತ್ತು ಅಮೂರ್ತ ಶೈಲಿಯ ಶಿಲ್ಪಗಳಲ್ಲಿ ಸ್ವಂತಿಕೆ ಕಾಣಬಹುದು.

ಶಾಂಖೋ ಚೌಧುರಿ

ಶಾಂಖೋ ಚೌಧುರಿ 1916ರಲ್ಲಿ ಬಿಹಾರದ ಡಿಯೋಗರ್‌ನಲ್ಲಿ ಜನಿಸಿದ್ದು, ಶಾಂತಿನಿಕೇತನದಲ್ಲಿ 1945ರಲ್ಲಿ ಶಿಲ್ಪಕಲೆಯಲ್ಲಿ ಪದವಿ ಪಡೆದಿದ್ದಾರೆ. ಅವರು ಭಾರತದ ಸಮಕಾಲೀನ ಶಿಲ್ಪಕಲಾವಿದರಲ್ಲಿ ಒಬ್ಬರಾಗಿದ್ದು, ಸಾಂಪ್ರದಾಯಿಕ, ಪ್ರಯೋಗ ಶೀಲ ಮತ್ತು ಆಧುನಿಕ ಶಿಲ್ಪಕಲೆಯಲ್ಲಿ ಹೆಸರು ಪಡೆದಿದ್ದಾರೆ. ಭಾವಶಿಲ್ಪ ರಚಿಸು ವುದರಲ್ಲಿ ಕುಶಲತೆ ಮತ್ತು ವ್ಯಕ್ತಿಯ ಭಾವ, ಗುಣ ಹಾಗೂ ಮಾಧ್ಯಮದಲ್ಲಿ ಪ್ರಭುತ್ವ ಪಡೆದಿದ್ದಾರೆ. ವೈಯಕ್ತಿಕವಾದ ಸೃಜನಶೀಲತೆಯ ಅಲ್ಲಾದಿ, ಸಂಗೀತ, ಕುಳಿತಿರುವ



ಶಾಂಖೋ ಚೌಧುರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಿಲ್ಪಗಳು, ಸೋದರಿಯರು, ಸಂಯೋಜನೆ ಮುಂತಾದ ಶಿಲ್ಪಗಳು ವಿಭಿನ್ನವಾದ ಮಾಧ್ಯಮಗಳಿಂದ ರಚಿತವಾಗಿದ್ದು, ಆನಂತರದ ಶಿಲ್ಪಗಳು ಅಮೂರ್ತ ಶೈಲಿಯಲ್ಲಿವೆ ಹಾಗೂ ಆಕಾರಗಳೇ ಪ್ರಧಾನವಾಗಿರುವ ಈ ಶಿಲ್ಪಗಳಲ್ಲಿ ಸರಳತೆ ಪ್ರಧಾನವಾಗಿದೆ. ಫೆಕಲ್ಟಿ ಆಫ್ ಫೈನ್ ಆರ್ಟ್‌ನ ಶಿಲ್ಪ ವಿಭಾಗದ ಮುಖ್ಯಸ್ಥರಾಗಿದ್ದಾಗ, ಅಲ್ಲಿಂದ ಅನೇಕ ಸಮಕಾಲೀನ ಶಿಲ್ಪಿಗಳು ಹೊರಬರಲು ಕಾರಣಕರ್ತರಾಗಿದ್ದಾರೆ.

ಶಾಂತಿದವೆ

ಶಾಂತಿದವೆ 1931ರಲ್ಲಿ ಅಹಮದಾಬಾದಿನಲ್ಲಿ ಹುಟ್ಟಿದ್ದು, 1956ರಲ್ಲಿ ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್‌ನಿಂದ ಪೋಸ್ಟ್ ಡಿಪ್ಲೊಮೊ ಪಡೆದು, 1956, 57, 58ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪಡೆದಿದ್ದಾರೆ. ಅನೇಕ ಭಿತ್ತಿಚಿತ್ರಗಳನ್ನು ರಚಿಸಿದ್ದು, ಅವರ ಚಿತ್ರಗಳು ಸ್ವಾಭಾವಿಕವಾಗಿ ನೋಡಲು ಸಂಕೇತಾತ್ಮಕವಾಗಿ ಹಾಗೂ ಹಳೆಯ ಶಿಲಾಶಾಸನಗಳಂತೆ ಅಲಂಕಾರಯುತವಾಗಿ ಮತ್ತು ಅಂತರ್ಭಾವ ತೀಕ್ಷ್ಣವಾಗಿದ್ದು, ಕ್ಯಾನವಾಸಿನ ಮೇಲೆ ಉಬ್ಬಿದಂತಿದ್ದು, ಮೈವಳಿಕೆಯ ಗುಣವಿರುತ್ತದೆ. ಚಿತ್ರದಲ್ಲಿ ನಿರೂಪಣೆ ವೀರ್ಯವತ್ತಾಗಿ, ಶಕ್ತಿಯುತವಾಗಿರುತ್ತದೆ. ಗ್ರಾಫಿಕ್ ಕೃತಿಗಳನ್ನು ರಚಿಸಿದ್ದು, ಚಿತ್ರದ ಗುಣಗಳನ್ನು ಇಲ್ಲಿಯೂ ಕಾಣಬಹುದು.

ಶ್ಯಾಮಲದತ್ತ ರೇ

ಶ್ಯಾಮಲದತ್ತ ರೇ 1934ರಲ್ಲಿ ಬಿಹಾರದಲ್ಲಿ ಜನಿಸಿದ್ದು, ಕಲ್ಕತ್ತಾದ ಸರ್ಕಾರಿ ಕಲಾಶಾಲೆಯಿಂದ 1965ರಲ್ಲಿ ಕಲಾಶಿಕ್ಷಣ ಪಡೆದಿರುವ ಅವರು 'ಕಲ್ಕತ್ತಾದ ಸಮಕಾಲೀನ ಕಲಾವಿದರು' ಸಂಸ್ಥೆಯ ಸ್ಥಾಪಕರು. ರಾಷ್ಟ್ರ ಮತ್ತು ವಿದೇಶಗಳ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1958ರಲ್ಲಿ ಅಕಾಡೆಮಿ ಫೈನ್ ಆರ್ಟ್, ಕಲ್ಕತ್ತಾ, ಬಿರ್ಲಾ ಅಕಾಡೆಮಿ 1972, 73, 75, 78; ಗ್ರೂಪ್-8 1971ರಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅವರು ನಾಶವಾಗುತ್ತಿರುವ ಕಲ್ಕತ್ತಾ ನಗರ ಜೀವನದ ಚಿತ್ರಣವನ್ನು ತಮ್ಮ ಅಂತರ್ಭಾವದಿಂದ ಸಂಯೋಜಿಸಿ, ಸಾಮಾಜಿಕ, ರಾಜಕೀಯ ಕಲ್ಪನೆಗಳನ್ನು, ಪ್ರಸಕ್ತ ಸಮಾಜವನ್ನು ಸಾಂಕೇತಿಕವಾಗಿ ಚಿತ್ರಿಸುವರು. ಅವರ ಚಿತ್ರ ಬಿಳಕುಗಳು ಪ್ರಧಾನವಾಗಿರುತ್ತವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಶಾರಾದ ಚರಣ ಉಕೀಲ್

ಶಾರಾದ ಚರಣ್ ಅವರು ದೆಹಲಿಯನ್ನು ತಮ್ಮ ಕಲಾಕೇಂದ್ರವನ್ನಾಗಿ ಮಾಡಿಕೊಂಡು, ಭಾರತದಲ್ಲಿ ಹೊಸ ಕಲಾಚಳವಳಿಗೆ ಕಾರಣಕರ್ತರಾದವರಲ್ಲಿ ಒಬ್ಬರು. ಅವರ ಚಿತ್ರಗಳು ಭಾವನಾತ್ಮಕತೆ, ಸಮೃದ್ಧವಾದ ಭಾವನೆ ಹಾಗೂ ಧಾರ್ಮಿಕತೆಯಿಂದ ಕೂಡಿದ್ದು, ಭಾರತೀಯತ್ವದಿಂದ ಕೂಡಿವೆ. ಕೃಷ್ಣ ಮತ್ತು ಬುದ್ಧನ ಚಿತ್ರಗಳನ್ನು ರಚಿಸುವಲ್ಲಿ ವಿಶೇಷ ಪ್ರಾವೀಣ್ಯತೆ ಕಾಣಬಹುದು. ವರ್ಣಗಳು ಹದವಾಗಿದ್ದು, ಅವುಗಳ ವ್ಯತ್ಯಾಸ ಮತ್ತು ಸೌಂದರ್ಯ ಕಾಣಬಹುದು. ರೇಷ್ಮೆ ಬಟ್ಟೆಯ ಮೇಲೆ ಚಿತ್ರಗಳನ್ನು ರಚಿಸಿದ್ದು, ಜನಪ್ರಿಯವಾಗಿವೆ. ಅವರು ಮಹಿಳೆಯ ಬಗ್ಗೆ ರಚಿಸಿರುವ ಚಿತ್ರಗಳಲ್ಲಿ ಸೂಕ್ಷ್ಮತೆ. ಅಜಂತಾದ ಪ್ರಭಾವ ಕಾಣಬಹುದು.

ಶಿವಾಕ್ಸ್ ಚಾವ್ಡ

ಗುಜರಾತಿನ ನವಸಾರಿಯಲ್ಲಿ 1914ರಲ್ಲಿ ಜನಿಸಿದ ಚಾವ್ಡ, ತಮ್ಮ ಕಲಾಶಿಕ್ಷಣವನ್ನು ಸರ್ ಜೆ. ಜೆ. ಕಲಾಶಾಲೆಯಿಂದ 1936ರಲ್ಲಿ ಪಡೆದರು. ಅನಂತರ ಯೂರೋಪಿಗೆ ತೆರಳಿ, ಸ್ಲೇಡ್ ಕಲಾಶಾಲೆಯಲ್ಲಿ ಡಿಪ್ಲೊಮೊ ಪಡೆದರು. ಅವರು ರೇಖೆ, ಆಕಾರ ಮತ್ತು ವರ್ಣಗಳನ್ನು ಸಂಯೋಜಿಸಿ, ಚಿತ್ರದಲ್ಲಿ ಸೌಂದರ್ಯವಿರುವಂತೆ ಚಿತ್ರಗಳನ್ನು ರಚಿಸುವುದರಲ್ಲಿ ಅಗ್ರಗಣ್ಯರು. ಚಿತ್ರದ ಆಕಾರಗಳಲ್ಲಿ ಹೊಂದಾಣಿಕೆ, ಲಯ, ಚಲನೆ ಮತ್ತು ಸರಳತೆಯಿದ್ದು, ಉತ್ತಮ ಅಲಂಕರಣವನ್ನು ಕಾಣಬಹುದು. ಭಾವಚಿತ್ರ, ಉಬ್ಬುಚಿತ್ರ, ಮರಕೆತ್ತನೆ ಮತ್ತು ಲಿಥೋಗ್ರಾಫ್‌ಗಳಲ್ಲಿ ಶಿಕ್ಷಣ ಪಡೆದಿದ್ದು, ಪ್ಯಾರಿಸಿನಲ್ಲಿ ಒಂದು ವರ್ಷ ಕಲೆಯಲ್ಲಿ ಉನ್ನತ ಶಿಕ್ಷಣ ಪಡೆದರು. ಅನೇಕ ಭಿತ್ತಿಚಿತ್ರಗಳನ್ನು ರಚಿಸಿದ್ದು, ಅನೇಕ ವಿಕವ್ಯಕ್ತಿ ಕಲಾಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಅಲ್ಲದೆ ರೇಖಾಚಿತ್ರದಲ್ಲಿ ಅಸಾಧಾರಣ ಪ್ರಭುತ್ವ ಪಡೆದಿದ್ದು, ಲಯ ಮತ್ತು ಚಲನೆ ಕಾಣಬಹುದು.

ಶ್ರೀನಿವಾಸಲು ಕೆ.

ಶ್ರೀನಿವಾಸಲು 1923ರಲ್ಲಿ ಮದ್ರಾಸಿನಲ್ಲಿ ಜನಿಸಿದ್ದು, ತಮ್ಮ ಕಲಾಭ್ಯಾಸವನ್ನು ಮದರಾಸಿನ ಸರಕಾರಿ ಕಲಾಶಾಲೆಯಲ್ಲಿ ಪಡೆದರು. ಅವರ ಮನೆತನ ಗೊಂಬೆ ಮಾಡುವುದರಲ್ಲಿ ಮತ್ತು ನಾಟಕಗಳಿಗೆ ಹೆಸರು ಪಡೆದಿತ್ತು. ಚಿಕ್ಕಂದಿನಲ್ಲೇ ಮಣ್ಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನಲ್ಲಿ ಗೊಂಬೆಗಳನ್ನು ಮಾಡುವುದರಲ್ಲಿ ಆಸಕ್ತಿ ಬೆಳೆದು, ಪೌರಾಣಿಕ ಮತ್ತು ಜಾನಪದ ನಾಟಕಗಳಿಂದ, ಜಾನಪದ ಕಲೆ ಹಾಗೂ ಪೌರಾಣಿಕ ಚಿತ್ರಗಳಲ್ಲಿ ಆಸಕ್ತಿ ಬೆಳೆಯಿತು, ತಮ್ಮ ಕಲಾಶಿಕ್ಷಣದ ನಂತರ ಲೇಪಾಕ್ಷಿ ಭಿತ್ತಿಚಿತ್ರಗಳನ್ನು ನಕಲು ಮಾಡುವ ಅವಕಾಶ ಒದಗಿ, ಕಲೆಯಲ್ಲಿ ಹೊಸ ಚಿಂತನೆಗಳಿಗೆ ಅವಕಾಶವಾಯಿತು. ಅಲ್ಲದೆ ಜಾಮಿನಿರಾಯ್ ಅವರ ಚಿತ್ರಗಳೂ ಸ್ಫೂರ್ತಿಯಾದುವು.

ಶೈಲಜ್ ಮುಖರ್ಜಿ

ಶೈಲಜ್ ಮುಖರ್ಜಿ ಕಲ್ಕತ್ತಾದಲ್ಲಿ 1907ರಲ್ಲಿ ಜನಿಸಿದ್ದು, ಸರಕಾರಿ ಕಲಾ ಶಾಲೆಯಲ್ಲಿ ಶಿಕ್ಷಣ ಪಡೆದು, ಕೆಲವು ಕಾಲ ಶಾರಾದ ಉಕೀಲ್ ಕಲಾಶಾಲೆ; ಅನಂತರ ದೆಹಲಿಯ ಕಲಾಶಾಲೆಯಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡಿದರು. ಅವರ ಮೊದಲ ಕೃತಿಗಳಲ್ಲಿ ಸಮೃದ್ಧವಾದ ಮೃಣ್ಮಯಿಕೆ ಮೆತ್ತು ಹಳೆಯ ನೆನಪುಗಳನ್ನು ಕಾಣಬಹುದು. ಅವರ ಚಿತ್ರದ ವಸ್ತುಗಳು ಕಾವ್ಯಾತ್ಮಕ, ಮನುಷ್ಯಾಕೃತಿಗಳು ವಾತಾವರಣದೊಂದಿಗೆ ಸಂಬಂಧ ಕಲ್ಪಿಸಿ, ಚಲನೆ ಕಾಣಬಹುದು. ಅವರು ತೈಲವರ್ಣ ಮಾಧ್ಯಮದಲ್ಲೇ ಹೆಚ್ಚಾಗಿ ಚಿತ್ರಗಳನ್ನು ರಚಿಸಿದ್ದು, ಕಲ್ಪನಾಶೀಲ ಕಲಾವಿದ. ಆಕರ್ಷಕ ಚಿತ್ರ ಮತ್ತು ದಿನನಿತ್ಯದ ವಸ್ತುಗಳು ಆದರ್ಶವಾಗಿದ್ದವು ಹಾಗೂ ಆವೇಶಪರವಾದ ಮನೋಧರ್ಮದ ಚಿತ್ರಗಳಾಗಿದ್ದು, ಸುಲಲಿತವಾದ ರೇಖಾ ಮತ್ತು ವರ್ಣಸಂಯೋಜನೆ ಕಾಣಬಹುದು.

ಷಾಗಾಲ್ ಮಾರ್ಕ್

ಷಾಗಾಲ್ 1889ರಲ್ಲಿ ರಷ್ಯಾದ ವಿಟಿಸ್ಕ್‌ದಲ್ಲಿ ಜನಿಸಿದ. 1907ರಲ್ಲಿ ಸೇಂಟ್ ಪೀಟರ್ಸ್‌ಬರ್ಗ್‌ಗೆ ತೆರಳಿ ಅಲ್ಲಿ ಕಲಾಶಿಕ್ಷಣ ಪಡೆದು, ಪ್ರಾರಂಭದಲ್ಲಿ ರಷ್ಯಾದ ಜೀವನವನ್ನು ಚಿತ್ರಿಸಿದ. ಅನಂತರ ಪ್ಯಾರಿಸಿಗೆ ತೆರಳಿ, ಕ್ಯೂಬಿಸ್ಟ್ ಪಂಥದವರ ಸಂಪರ್ಕ ಬೆಳೆಸಿದ. ಕೆಲವು ಚಿತ್ರಗಳನ್ನು ಕ್ಯೂಬಿಸ್ಟ್ ಶೈಲಿಯಲ್ಲಿ ರಚಿಸಿದ. ಅವನು ಸಾಮಾನ್ಯವಾಗಿ ತನ್ನ ಚಿತ್ರಗಳಿಗೆ ತನ್ನ ಹಳ್ಳಿಯ ಜೀವನ, ಪರಿಸರದಿಂದ ಸ್ಫೂರ್ತಿ ಪಡೆದು ಚಿತ್ರಗಳನ್ನು ರಚಿಸಿದ್ದಾನೆ ಹಾಗೂ ವಿಟಿಸ್ಕ್‌ನ್ ಕಲಾಶಾಲೆಯ ನಿರ್ದೇಶಕನಾಗಿದ್ದ. ಜ್ಯೂಯಿಸ್ ಸ್ಟೇಟ್ ಥಿಯೇಟರ್‌ಗೆ ಭಿತ್ತಿಚಿತ್ರಗಳನ್ನು ರಚಿಸಿದ್ದಾನೆ. ಫ್ರಾನ್ಸ್‌ಗೆ ಬಂದು ಸ್ಟೇಯಿನ್ ಗ್ಲಾಸ್ ಚಿತ್ರಗಳನ್ನು ರಚಿಸಿದನ. ಪ್ಯಾರಿಸಿನ ಅಪೇರಾದ ಮೇಲ್ಛಾವಣಿಗೆ ಚಿತ್ರಗಳನ್ನು ರಚಿಸಿದ್ದಾನೆ. ಅವನ ಚಿತ್ರ ಕ್ಯೂಬಿಸಂ ಶೈಲಿಗೆ ಸೇರಿದ್ದು, ಚಲನೆ, ಕನಸು ಮತ್ತು ಕಲ್ಪನೆಗಳನ್ನು ಕಾಣಬಹುದು. ಅವನು 1985ರಲ್ಲಿ ನಿಧನನಾದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸನತ್‌ಕರ್

1935ರಲ್ಲಿ ಜನಿಸಿದ ಸನತ್‌ಕರ್, ತಮ್ಮ ಕಲಾ ಶಿಕ್ಷಣವನ್ನು ಕಲ್ಕತ್ತಾ ಸರ್ಕಾರಿ ಕಲಾ ಶಾಲೆಯಿಂದ ಪಡೆದಿದ್ದು, 1974ರಲ್ಲಿ ವಿಶ್ವಭಾರತಿಯನ್ನು ಸೇರಿದರು. ಪ್ರಸ್ತುತ ಶಾಂತಿನಿಕೇತನ ಕಲಾಭವನದ ಗ್ರಾಫಿಕ್ ವಿಭಾಗದ ಮುಖ್ಯಸ್ಥರಾಗಿದ್ದಾರೆ. 1962, 67ರಲ್ಲಿ ಕಲ್ಕತ್ತಾ, 1969, 72ರಲ್ಲಿ ನವದೆಹಲಿ, 1970 ಮತ್ತು 79ರಲ್ಲಿ ಮುಂಬಯಿ ಮುಂತಾದ ಕಡೆ ವಿಕವ್ಯಕ್ತಿ ಕಲಾಪ್ರದರ್ಶನಗಳನ್ನೂ ಮತ್ತು ಅಂತರ ರಾಷ್ಟ್ರೀಯ ಪ್ರಿಂಟ್ಸ್ ಬಿನಾಲೆ. ಲಂಡನ್, ಇರಾಕ್, ಯೂರೋಪ್ ಮತ್ತು ಅಮೆರಿಕಾಗಳಲ್ಲಿ ಪ್ರದರ್ಶಿತವಾಗಿವೆ. ಅಲ್ಲದೆ 1973ರಲ್ಲಿ ಐಯಿಫೆಕ್ಸ್, 1984ರಲ್ಲಿ ಅಂತರರಾಷ್ಟ್ರೀಯ ಪ್ರಿಂಟ್ಸ್ ಕಲಾಪ್ರದರ್ಶನ, ನವದೆಹಲಿ - ಈ ಸಂಸ್ಥೆಗಳಿಂದ ತಮ್ಮ ಕೃತಿಗಳಿಗೆ ಪ್ರಶಸ್ತಿ ಪಡೆದಿದ್ದಾರೆ. ಹಲವು ಮಾಧ್ಯಮಗಳಲ್ಲಿ ಕೃತಿಗಳನ್ನು ರಚಿಸಿದ್ದರೂ, ಗ್ರಾಫಿಕ್ ಮಾಧ್ಯಮದಲ್ಲಿ ಹೆಚ್ಚು ಹೆಸರು ಪಡೆದಿದ್ದಾರೆ. ಅದರಲ್ಲೂ ವುಡ್ ಇಂಟಾಗಿಲಿಯೋ ಮಾಧ್ಯಮದಲ್ಲಿ ತಂತ್ರ, ಮೈವಳಿಕೆ ರಚನಾ ವಿಧಾನದಲ್ಲಿ ವಿಶೇಷತೆ ಪಡೆದಿದ್ದಾರೆ. ಅವರ ಚಿತ್ರಗಳು ಕಲ್ಪನೆ, ಕನಸು ಮತ್ತು ಕಾವ್ಯಾತ್ಮಕತೆಯಿಂದ ಕೂಡಿರುತ್ತವೆ.

ಸತೀಶ್ ಗುಜ್ರಾಲ್

ಸತೀಶ್ ಗುಜ್ರಾಲ್ 1925ರಲ್ಲಿ ಜನಿಸಿದ್ದು, ಲಾಹೋರಿನ ಮಾಯೋ ಕಲಾಶಾಲೆಯಲ್ಲಿ 1944ರಲ್ಲಿ, ಅನಂತರ 47ರಲ್ಲಿ ಜೆ. ಜೆ. ಕಲಾಶಾಲೆಯಿಂದ ಕಲಾಶಿಕ್ಷಣ ಪಡೆದು. ತಮ್ಮ ಹದಿಮೂರನೇ ವಯಸ್ಸಿನಲ್ಲೇ ಕಿವುಡರಾದ ಅವರು ತಮ್ಮ ಅನುಭವಗಳನ್ನು ಚಿತ್ರಕಲೆಯ ಮೂಲಕ ವ್ಯಕ್ತಮಾಡಿದ್ದಾರೆ. ಕೋಪ, ನೋವುಗಳನ್ನು ಚಿತ್ರಗಳಲ್ಲಿ ಮೂಡಿಸಿದ್ದಾರೆ. ಪೆಕ್ಸಿಕೋಗೆ ಹೋಗಿ ಬಂದನಂತರ ಅವರ ಚಿತ್ರಗಳಲ್ಲಿ, ಸರ್‌ರಿಯಲಿಸಂ ಪ್ರಭಾವ ಕಾಣಬಹುದು. 1961ರ ಚಿತ್ರಗಳಲ್ಲಿ ಚಿರಿಕೋ ಚಿತ್ರಗಳಿಂದ ಪ್ರಭಾವಿತರಾಗಿ, ತಮ್ಮ ನೆನಪುಗಳನ್ನು ಸರ್‌ರಿಯಲಿಸಂ ಶೈಲಿಯಲ್ಲಿ ರಚಿಸಿ, ಚಿತ್ರಗಳಲ್ಲಿ ರೇಖೆ ಮತ್ತು ರಚನಾ ವಿನ್ಯಾಸ ಮುಖ್ಯವಾಗಿದ್ದುವು. ತಮ್ಮ ಅನುಭವಗಳನ್ನು ಆಕಾರಗಳ ಮೂಲಕ ಚಿತ್ರಿಸಿ, ಅಲಂಕರಣ ಹಾಗೂ ಘನತ್ವ, ವರ್ಣಗಳ ಮೂಲಕ ರಚಿಸಿದ್ದಾರೆ. ಭಾರತದ ಜನಪದ ಅಲಂಕರಣ, ಪಕ್ಷಿಗಳು, ಪ್ರಾಣಿಗಳು ಮತ್ತು ಶೈಲಿಯುಕ್ತವಾದ ಚಿತ್ರಗಳಿಂದ ಭಿತ್ತಿಚಿತ್ರ ರಚನೆಗೆ ಸ್ಫೂರ್ತಿ. ಸಿರಾಮಿಕ್, ಟೆರ್ರಾಕೊಟ್ಟಾ, ಗಾಜು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸತೀಶ್ ಗುಜ್ರಾಲ್

ಹಿತ್ತಾಳೆ, ಅಲ್ಯೂಮಿನಿಯಂ ಮತ್ತು ಮರ ಮುಂತಾದುವುಗಳನ್ನು ಉಪಯೋಗಿಸಿ ಪ್ರಯೋಗ ಮಾಡಿದ್ದು. ಸಿರಾಮಿಕ್ ಮಾಧ್ಯಮದ ಮತ್ತು ಕೊಲಾಜ್ ತಂತ್ರದ ಭಿತ್ತಿಚಿತ್ರಗಳು ವಿಶಿಷ್ಟತೆಯಿಂದ ಕೂಡಿವೆ.

ಸಂತೋಷ್ ಜಿ. ಆರ್.

ಸಂತೋಷ್ 1929ರಲ್ಲಿ ಕಾಶ್ಮೀರದ ಶ್ರೀನಗರದಲ್ಲಿ ಹುಟ್ಟಿದ್ದು, ಕವಿ ಮತ್ತು ಕಲಾವಿದರಾದ ಅವರು 1954-55ರಲ್ಲಿ ಭಾರತ ಸರಕಾರದ ಶಿಷ್ಯವೇತನ ಪಡೆದು ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್‌ನಲ್ಲಿ ಪ್ರೊ. ಎನ್. ಎಸ್. ಬೇಂದ್ರೆ ಅವರ ಬಳಿ ಚಿತ್ರಕಲೆ ಕಲಿತರು. ಪ್ರಾರಂಭದಲ್ಲಿ ಪ್ರಕೃತಿ, ಮನುಷ್ಯಾಕೃತಿಗಳ, ಅಮೂರ್ತ, ಕ್ಯೂಬಿಸಂ ಶೈಲಿಗಳಲ್ಲಿ ಚಿತ್ರರಚಿಸಿ, ತಂತ್ರಕಲೆಯಲ್ಲಿ ಸಿದ್ಧಿ ಪಡೆದರು. ಕಾಶ್ಮೀರದ ತಂತ್ರ ಕ್ರಿಯೆಯ ಪರಿಚಯವಿದ್ದು, ಕಾಮ - ಜೀವನದ ಭಾಗ, ಅದು ಎಲ್ಲ ಬಯಕೆಗಳ ಸಂಕೇತವಾಗಿದೆ. ಅವರ ಕೃತಿಗಳಲ್ಲಿ ಸ್ತ್ರೀ–ಪುರುಷ ಸಂಯೋಗವನ್ನು ಚಿತ್ರಿಸಿದ್ದು, ದೇಹದ ಕೆಲವು ಅಂಗಗಳು, ಅಮೂರ್ತ ರೂಪದಲ್ಲಿ ಹಾಗೂ ಜಾಮಿತಿಯ ಆಕಾರದಲ್ಲಿದ್ದು, ಮೂಲ ವರ್ಣಗಳನ್ನು ಬಳಸುವರು. ಸಾಂಕೇತಿಕವಾಗಿ ಚಿತ್ರಿಸಿರುವ ಅವರ ಚಿತ್ರಗಳಲ್ಲಿ ಯೋಗವು ಮುಖ್ಯ ಪಾತ್ರವಹಿಸಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸನ್ಯಾಲ್ ಬಿ. ಸಿ.

ಸನ್ಯಾಲ್ 1904ರಲ್ಲಿ ಅಸ್ಸಾಮಿನ ದಿಬ್ರೂಗರ್‌ನಲ್ಲಿ ಜನಿಸಿದ್ದು, ಕಲ್ಕತ್ತಾದ ಸ್ಕೂಲ್ ಆಫ್ ಆರ್ಟ್‌ನಲ್ಲಿ ಕಲಾಶಿಕ್ಷಣ ಪಡೆದ ಅವರು, ಚಿತ್ರ ಮತ್ತು ಶಿಲ್ಪಗಳೆರಡರಲ್ಲೂ ಪ್ರಭುತ್ವ ಪಡೆದಿದ್ದರು. 1939ರಲ್ಲಿ ಲಾಹೋರಿನಲ್ಲಿ 'ಲಾಹೋರ್ ಸ್ಕೂಲ್ ಆಫ್ ಫೈನ್ ಆರ್ಟ್'ನ್ನು ಸ್ಥಾಪಿಸಿದರು ಮತ್ತು ಅದು ಸಾಂಸ್ಕೃತಿಕ ಕೇಂದ್ರವಾಯಿತು. ಅಲ್ಲಿಂದ ಅನೇಕ ಪ್ರತಿಭಾನ್ವಿತ ಕಲಾವಿದರು ಶಿಕ್ಷಣ ಪಡೆದಿದ್ದಾರೆ. 1952ರಲ್ಲಿ ದೆಹಲಿಯ ಫೈನ್ ಆರ್ಟ್ ಇಲಾಖೆಯ ಮುಖಸ್ಥರಾಗಿ ನೇಮಕವಾದರು. ಅವರು ರಚಿಸಿರುವ ಸಂಯೋಜನಾ ಚಿತ್ರಗಳಲ್ಲಿ ವರ್ಣಕ್ಕೆ ಹೆಚ್ಚು ಪ್ರಾಧಾನ್ಯ ಮತ್ತು ಹಳ್ಳಿಗಾಡಿನ ಜನರ ಚಿತ್ರಣ, ಹಳ್ಳಿಯ ಮುಗ್ಧಜನರ ಭಾವನೆಗಳನ್ನು ವ್ಯಕ್ತಪಡಿಸಿ, ರೇಖೆ ಹಾಗೂ ಮನುಷ್ಯಾಕೃತಿಗಳ ಸರಳತೆ ಮತ್ತು ಅನೇಕ ಭಾವಶಿಲ್ಪಗಳನ್ನು ರಚಿಸಿದ್ದು, ವ್ಯಕ್ತಿಯ ಅಭಿವ್ಯಕ್ತಿ ಮತ್ತು ಭಾಷನೆಗಳು ಪ್ರಧಾನವಾಗಿರುತ್ತವೆ.

ಸರ್ ಸ್ಟೇನ್ಲಿ ಸ್ಪೆನ್ಸರ್

ಸ್ಪೆನ್ಸರ್ ಇಂಗ್ಲಿಷ್ ಚಿತ್ರಕಲಾವಿದನಾಗಿದ್ದು, 1891ರಲ್ಲಿ ಕುಕ್‌ಹ್ಯಾಮ್, ಬರ್ಕ್‌ಷೈರ್‌ನಲ್ಲಿ ಜನಿಸಿದ್ದು, ತನ್ನ ಜೀವಿತವನ್ನೆಲ್ಲ ಅಲ್ಲೇ ಕಳೆದ. ತನ್ನ ಕಲಾಭ್ಯಾಸವನ್ನು ಲಂಡನ್ನಿನಲ್ಲಿ ಸ್ಲೇಡ್ ಸ್ಕೂಲಿನಲ್ಲಿ 1912ರಲ್ಲಿ ಪಡೆದ. ಅವನ ಕೃತಿಗಳು ಹೆಚ್ಚು ಮತೀಯ ವಿಷಯಗಳಿಗೆ ಸಂಬಂಧಿಸಿದ್ದು ಮತ್ತು ಅತ್ಯಂತ ವಿಶೇಷ ದೃಶ್ಯ ಕಲ್ಪನೆಗಳು, ಚಿತ್ರಗಳು ಕಾವ್ಯಾತ್ಮಕವಾಗಿ ಮತ್ತು ಕುಕ್‌ಹ್ಯಾಮ್ ಹಳ್ಳಿಯ ಪರಿಸರದ ಚಿತ್ರಣ ಹಾಗೂ ಬ್ಯಗೆಕ್ಲೆಯರ್ ಕ್ರೈಸ್ತಮಂದಿರದಲ್ಲಿ ಚಿತ್ರಗಳನ್ನು ಅಲಂಕರಿಸಿದ್ದು, 1959ರಲ್ಲಿ ನಿಧನನಾದ.

ಸರೋಜ್ ಪಾಲ್ ಗೋಗಿ

1945ರಲ್ಲಿ ಜನಿಸಿದ ಗೋಗಿ, ತಮ್ಮ ಕಲಾಶಿಕ್ಷಣವನ್ನು 1961ರಲ್ಲಿ ಬನ ಸ್ಥಳೀಯ ಕಾಲೇಜ್ ಆಫ್ ಆರ್ಟ್, 1962ರಲ್ಲಿ ಲಕ್ನೋ ಕಾಲೇಜ್ ಆಫ್ ಆರ್ಟ್, 1967ರಲ್ಲಿ ಡಿಪ್ಲೊಮೊ ಮತ್ತು ಗ್ರಾಫಿಕ್ ಕಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ವಿವಿಧ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿದ್ದು, 1981ರಲ್ಲಿ ಚಂಡೀಘಡದಲ್ಲಿ ನಡೆದ ಅಖಿಲ ಭಾರತ ಗ್ರಾಫಿಕ್ ಕಲಾಪ್ರದರ್ಶನದಲ್ಲಿ ಪ್ರಶಸ್ತಿ ಪಡೆದಿದ್ದಾರೆ. ಅವರ ಚಿತ್ರಗಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ನೋಡಲು ಸರಳವಾಗಿದ್ದು, ಅವರ ಕಲ್ಪನೆಗಳು ಮನುಷ್ಯಾಕೃತಿಗಳ, ಪ್ರಾಣಿಗಳ ಆಕಾರಗಳ ಮೇಲಿದ್ದು, ಈ ಕಲ್ಪನೆಗಳು ಅವರ ಅನುಭವದಿಂದ, ಅವರ ಸ್ವಂತಿಕೆಯ ಅಭಿವ್ಯಕ್ತಿತನ ಕಾಣಬಹುದು. ಚಿತ್ರದಲ್ಲಿ ವರ್ಣಗಳಿದ್ದರೂ ಅವೂ ಸಹ ಚಿತ್ರದಲ್ಲಿ ಆಕಾರಗಳಂತ್ತಿದ್ದು, ವಾತಾವರಣದೊಂದಿಗೆ ಸಂಬಂಧಪಟ್ಟಿರುತ್ತದೆ. ಅವರ ಮನುಷ್ಯಾಕೃತಿ ಮತ್ತು ಪ್ರಾಣಿಗಳ ಆಕಾರಗಳಲ್ಲಿ ರೂಪಾಂತರ ಕಾಣಬಹುದು.

ಸಾಲ್ವಡಾರ್ ಡಾಲಿ

ಡಾಲಿ 1904ರಲ್ಲಿ ಸ್ಪೇನ್‌ನಲ್ಲಿ ಜನಿಸಿದ. ಚಿತ್ರ, ಜ್ಯೂಯಲರಿ ಡಿಸೈನರ್, ಬರಹಗಾರ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದರೂ, ಅವನ ಚಿತ್ರಗಳು ಅತ್ಯಂತ ಜನಪ್ರಿಯ. 1929ರಲ್ಲಿ ಪ್ಯಾರಿಸಿನಲ್ಲಿ ನಡೆದ ಸರ್‌ರಿಯಲಿಸಂ ಚಳವಳಿಯಲ್ಲಿ ಭಾಗ ವಹಿಸಿದ್ದ. ಡಾಲಿಯ ಚಿತ್ರಗಳಲ್ಲಿ ಕನಸು, ವಿಲಕ್ಷಣ ಮತ್ತು ಅದ್ಭುತಗಳನ್ನು



ಸಾಲ್ವಡಾರ್ ಡಾಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕಾಣಬಹುದು. ವಾಸ್ತವ ಪ್ರಪಂಚದಿಂದ ಮನಸ್ಸಿನ ಸೀಮೆಗೆ ಎಳೆದೊಯ್ದು, ಕಲ್ಪನೆ ಮತ್ತು ತಾಂತ್ರಿಕ ಸಿದ್ಧಿಯಲ್ಲಿ ಡಾಲಿಯು ಕಲಾಕೃತಿಗಳು ಆಶ್ಚರ್ಯವನ್ನುಂಟು ಮಾಡುತ್ತವೆ. ಅವನದೇ ಒಂದು ಪ್ರಪಂಚ. ಮಾನಸಿಕ ಅನುಭವವನ್ನು ಚಿತ್ರ ಗಳಲ್ಲಿ ವ್ಯಕ್ತಪಡಿಸಿ, ಬಾಹ್ಯ ಪ್ರಪಂಚಕ್ಕೆ ಹೊಸ ಅನುಭವ ನೀಡುತ್ತವೆ ಮತ್ತು ಚಿತ್ರದ ವಸ್ತುಗಳು ಊಹಾತೀತ ಹಾಗೂ ಸ್ವಪ್ನ ಸೀಮೆಗೆ ಸೇರಿದವು. ಅವನು 1989ರಲ್ಲಿ ತೀರಿಕೊಂಡ.

ಸಿಜಾನ್ ಪಾಲ್

ಸಿಜಾನ್ ಫ್ರಾನ್ಸಿನ ಪ್ರೊವೆನ್ಸ್‌ನಲ್ಲಿ 1839ರಲ್ಲಿ ಜನಿಸಿದ. ಬಾಲ್ಯದಲ್ಲೇ ಕಲೆಯಲ್ಲಿ ಆಸಕ್ತಿ ಮೂಡಿ, ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಪ್ಯಾರಿಸಿಗೆ ಬಂದ. ಅಲ್ಲಿ

ಸಿಜಾನ್ ಪಾಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸಮಷ್ಟಿಪರಿಣಾಮ ಪದ್ಧತಿಯ ಚಿತ್ರಗಳನ್ನು ನೋಡಿದ ಮೇಲೆ, ಪ್ರಯೋಗಗಳನ್ನು ಮಾಡಿ, ಆಕೃತಿಯನ್ನು ವಿರೂಪಗೊಳಿಸಿ, ನೋಡುವವನಿಗೆ ವಸ್ತುವಿನ ಪೂರ್ಣ ಕಲ್ಪನೆ ಮೂಡುವುದೇ ಮುಖ್ಯ. ತಾನೇ ಅನೇಕ ಪ್ರಯೋಗಗಳನು ಮಾಡಿ, ತನ್ನದೇ ಆದ ಶೈಲಿಯನ್ನು ಬೆಳೆಸಿಕೊಂಡ. ರೂಪಚಿತ್ರ, ಪ್ರಕೃತಿಚಿತ್ರ ಮುಂತಾದುವುಗಳಲ್ಲಿ ಚಿತ್ರಿಸುವ ಕೌಶಲವಿತ್ತು. ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ವ್ಯಕ್ತ ಪಡಿಸುತ್ತಿದ್ದ. ಪ್ರಕೃತಿ ಸ್ತಂಭಾಕೃತಿ, ವೃತ್ತ ಹಾಗೂ ಶಂಖಾಕೃತಿಗಳಾಗಿದ್ದು, ಈ ಮೂರು ಆಕೃತಿಗಳನ್ನು ಸರಿಯಾಗಿ ಚಿತ್ರಿಸಬಲ್ಲವನು ಯಾವ ಚಿತ್ರವನ್ನು ಬೇಕಾದರೂ ಚಿತ್ರಿಸಬಹುದು ಎಂದು ತಿಳಿದಿದ್ದು, ಆಧುನಿಕ ಕಲೆಯ ಆದ್ಯಪ್ರವರ್ತಕನಾದ. ಸಮಷ್ಟಿ ಪರಿಣಾಮದಿಂದ ಪ್ರಭಾವಿತರಾದ ಅನೇಕ ಕಲಾವಿದರು ತಮ್ಮದೇ ಆದ ಶೈಲಿಗಳನ್ನು ರೂಢಿಸಿಕೊಂಡರು. ಅವರಲ್ಲಿ ಸಿಜಾನ್ ಸಮಷ್ಟಿ ಪರಿಣಾಮವಾದಿಗಳ ಹಾಗೆ ಬೆಳಕು ಬೀಳುವ ವಿಧಾನದಲ್ಲಿ ಆಸಕ್ತಿಹೊಂದಿದ್ದರೂ ವಸ್ತುವಿನ ಘನತ್ವವನ್ನು ಎತ್ತಿ ತೋರಿಸುವುದರಲ್ಲಿ, ಅವನು ತನ್ನ ಗಮನ ಕೇಂದ್ರೀಕರಿಸಿದ್ದ. ಇದರಿಂದಾಗಿ ಅವನ ಕಲೆಯಲ್ಲಿ ವಸ್ತು ತನ್ನ ವಾಸ್ತವಿಕ ರೂಪವನ್ನು ಉಳಿಸಿಕೊಳ್ಳುತ್ತದೆ. ಅವನ ಕೃತಿಗಳು ಇಪ್ಪತ್ತನೆಯ ಶತಮಾನದ ಕಲೆಯ ಮೇಲೆ ಪ್ರಭಾವಬೀರಿವೆ. ಈ ಜಗತ್ತನ್ನು ವಸ್ತುನಿಷ್ಠ ದೃಷ್ಟಿಯಿಂದ ನೋಡಬೇಕು ಎಂದು ತಿಳಿದಿದ್ದ ಆವನು 1906ರಲ್ಲಿ ತೀರಿಕೊಂಡ.

ಸುಬ್ರಮಣ್ಯನ್ ಕೆ. ಜಿ.

ಭಾರತದ ಸಮಕಾಲೀನ ಕಲೆಯಲ್ಲಿ ಅತ್ಯಂತ ಪ್ರಯೋಗಶೀಲ ಕಲಾವಿದ, ಕಲಾಶಿಕ್ಷಣತಜ್ಞ, ವಿಚಾರವಂತ ಲೇಖಕ, ಭಿತ್ತಿಚಿತ್ರ ರಚನಕಾರ, ಪ್ರಿಂಟ್ ಮೇಕರ್ ಇತ್ಯಾದಿ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು ಕೆ. ಜಿ. ಸುಬ್ರಮಣ್ಯನ್. ಅವರು 1924ರಲ್ಲಿ ಕೇರಳದಲ್ಲಿ ಜನಿಸಿದರು. ಆಕಸ್ಮಿಕವಾಗಿ ಅವರು ಕಲಾರಂಗಕ್ಕೆ ಬಂದು ಶಾಂತಿನಿಕೇತನದಲ್ಲಿ ಕಲಾಶಿಕ್ಷಣ ಪಡೆದು, ಭಿತ್ತಿಚಿತ್ರ ರಚಿಸುವುದರಲ್ಲಿ ಪರಿಣತಿ ಪಡೆದು, ಅನೇಕ ಪ್ರಯೋಗ ತಂತ್ರ ಹಾಗೂ ಎಲ್ಲಾ ತರಹದ ದ್ವಿ-ಪ್ರಮಾಣದ ಅಲಂಕರಣಗಳ ಆಕಾರಗಳಲ್ಲಿ ಅವರು ಪ್ರಭುತ್ವ ಪಡೆದರು. ಅವರ ಮೊದಲಿನ ಚಿತ್ರಗಳಲ್ಲಿ ಸುಂದರ ಲಿಪಿಯನ್ನು ಡಿಸೈನ್ ಮೇಲೆ Super Impose ಮಾಡಿ, ಘನಾಕೃತಿಯ ವಿಕಾರತೆಯನ್ನು ಸ್ಥಳದಲ್ಲಿ ಅಳವಡಿಸುತ್ತಿದ್ದುದು. ಉಜ್ವಲ ವರ್ಣಗಳನ್ನು ವಿಸ್ತಾರ ಜಾಗದಲ್ಲಿ ಮೆತ್ತಿ ಸಂಗೀತಮಯವಾಗಿ ದಪ್ಪನೆಯ ಗೆರೆಗಳನ್ನು ಹೊರ ರೇಖೆಗಳಾಗಿ ಉಪಯೋಗ ಮಾಡಿದ್ದಾರೆ, ಅವರ ನಂತರದ ಚಿತ್ರಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ರೂಪಾಂತರವನ್ನು ಕಾಣಬಹುದು. ಅವರು ಹೊಸ ಹೊಸ ತಂತ್ರಗಳನ್ನು ಮತ್ತು ಆಕೃತಿಗಳನ್ನು ಭಿತ್ತಿಚಿತ್ರ ರಚನೆಯಲ್ಲಿ ಮೂಡಿಸಿದ್ದಾರೆ. ಅವರು ಅಮೆರಿಕಾಗೆ ಹೋಗಿ ಬಂದನಂತರ. ಅವರ ಚಿತ್ರಗಳಲ್ಲಿ ಒಳ ಆವರಣಗಳಂತೆ ಕಾಣುವ ಒಂದರೊಳ ಗೊಂದು ಸೇರಿದ ಮನುಷ್ಯರ ಕಾಲು ಕೈಗಳಾಗಲೀ, ಅದೇ ರೀತಿಯ ಭಾವನೆಯನ್ನು ಹೊಂದಿರುವುದನ್ನು ಕಾಣಬಹುದು. ಅವರ ನಂತರದ ಚಿತ್ರಗಳು ಐತಿಹಾಸಿಕ PUNS QUOTATIONSಗಳ ಆಧಾರದ ಮೇಲೆ ಚಿತ್ರಿತವಾಗಿದ್ದು, ಪರ್ಷಿಯನ್ ಕಂಪನಿ ಸ್ಕೂಲ್‌ನ ಅಣುಚಿತ್ರಗಳ ಪ್ರಭಾವ ತಂದಿದ್ದಾರೆ. ಅವರ ಇತ್ತೀಚಿನ ಕಲಾ ಕೃತಿಗಳು ಗಾಜಿನ ಮೇಲೆ ಅಕ್ರಾಲಿಕ್ ವರ್ಣಗಳನ್ನು ಉಪಯೋಗಿಸಿಕೊಂಡು, ತೀವ್ರಾ ಸಕ್ತಿಯುಳ್ಳ, ಧೋರಣೆಯುಳ್ಳ ವಿಡಂಬನೆ ಕಾಣಬಹುದು ಹಾಗೂ ಅಕ್ರಾಲಿಕ್ ಷೀಟಿನ ಮೇಲೆ ಚಿತ್ರಿಸಿರುವ ಚಿತ್ರಗಳಲ್ಲಿ ದಿನನಿತ್ಯದ ಬದುಕಿನ ಚಿತ್ರಣವನ್ನು ಕಾಣಬಹುದು.

ಸುಬ್ರಮಣ್ಯನ್ ಕೆ. ಜಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುನಯೋನಿದೇವಿ

ಸುನಯಾನಿದೇವಿ 1875ರಲ್ಲಿ ಕಲ್ಕತ್ತಾದಲ್ಲಿ ಹುಟ್ಟಿದರು. ಗಗೇಂದ್ರನಾಥ ಟಾಗೂರ್, ಸುಮರೇಂದ್ರನಾಥ ಮತ್ತು ಅಬನೀಂದ್ರನಾಥ ಟಾಗೂರರ ಸೋದರಿ. ಮನೆಯಲ್ಲಿ ಕಲೆಯ ವಾತಾವರಣವಿದ್ದುದರಿಂದ ಆಕೆಗೆ ಪ್ರೋತ್ಸಾಹ. ಹಿಂದೂ ಧರ್ಮಕ್ಕೆ ಸಂಬಂಧಿಸಿದ ಹಾಗೂ ಮುಗ್ಧ ಮಕ್ಕಳ, ತಾಯಿಯ ಬಗೆಗಿನ ಚಿತ್ರಗಳ ರಚನೆ. ಚಿತ್ರಗಳಲ್ಲಿ ಕಲಾಭಿವ್ಯಕ್ತಿ, ರೇಖಾಚಿತ್ರಗಳಲ್ಲಿ ಸರಳತೆ, ಶೈಲಿಯುಕ್ತ ಆಕಾರಗಳು ಮತ್ತು ಹೆಚ್ಚು ಚಿತ್ರಗಳು ಕಥಾನಕ ರೂಪದಲ್ಲಿವೆ. ಅವು ಬೆಂಗಾಲ್ ಸ್ಕೂಲಿನ ಪದ್ಧತಿಯಲ್ಲಿ ರಚಿತವಾಗಿವೆ. ಚಿತ್ರಗಳು ಏಕವರ್ಣದಿಂದ ಹಾಗೂ ಮಸುಕಾದ ವರ್ಣದಿಂದ ಕೂಡಿದ್ದು, ಲಾಲಿತ್ಯವಾದ ಚಲನೆಯಿರುತ್ತದೆ ಮತ್ತು ನೆರಳು ಬೆಳಕುಗಳು ಪ್ರಧಾನವಾಗಿರುತ್ತವೆ. ಆಕೆ 1962ರಲ್ಲಿ ನಿಧನಳಾದಳು.

ಸುಲ್ತಾನ ಆಲಿ ಜೆ.

ಸುಲ್ತಾನ ಆಲಿ 1920ರಲ್ಲಿ ಮುಂಬಯಿನಲ್ಲಿ ಹುಟ್ಟಿದರು. 1945ರಲ್ಲಿ ತಮ್ಮ ಕಲಾಶಿಕ್ಷಣವನ್ನು ಮದ್ರಾಸಿನ ಕಲಾಶಾಲೆಯಿಂದ ಪಡೆದರು. ಅವರ ಮೊದಲ ಚಿತ್ರಗಳು ಹಳ್ಳಿಗಾಡಿನ ಜಾನಪದ ಜೀವನದ ಚಿತ್ರಣ ಮತ್ತು ಟೆಂಪರಾ ವರ್ಣದಿಂದ ರಚಿಸಿದ್ದು, ಪೌವಳಿಕೆ ಮುಖ್ಯವಾಗಿತ್ತು. ರಾಜಾಸ್ತಾನದ ಜನರ ವರ್ಣರಂಜಿತವಾದ ಉಡುಪುಗಳ ಪ್ರೇರಣೆಯಿಂದ. ವಿಶಿಷ್ಟವಾದ ವರ್ಣಸಂಯೋಜನೆ ಹಾಗೂ ಆಕೃತಿಗಳು ಚಪ್ಪಟೆಯಾಗಿದ್ದು, ಮನುಷ್ಯಾಕೃತಿಗಳು ನೀಳವಾಗಿದ್ದು, ಅಲಂಕರಣ ರೂಪದಲ್ಲಿರುತ್ತಿತ್ತು. ಹಳ್ಳಿ ಮತ್ತು ಗುಡ್ಡಗಾಡಿನ ಜೀವನದಲ್ಲಿ ನಂದಿ ಮುಖ್ಯಪಾತ್ರ ವಹಿಸಿರುವುದನ್ನು ಕಾಣಬಹುದು. ನಂದಿ ಆಕಾರ ಅವರ ಮೇಲೆ ವಿಶೇಷ ಪರಿಣಾಮ ಬೀರಿದ್ದು, ಅವರ ಚಿತ್ರಗಳಲ್ಲಿ ರೂಪಾಂತರ ಹೊಂದಿ, ಕಲ್ಪನೆಯ ವಸ್ತುವಾಯಿತು. ಚಿತ್ರಾತ್ಮಕವಾದ ಆಕಾರಗಳು, ವೈವಿಧ್ಯಮಯ ಜೀವನ, ಮಿಥ್ಯೆ ಮತ್ತು ಐತಿಹ್ಯಗಳು, ಬರಹವನ್ನು ಚಿತ್ರದಲ್ಲಿ ಅರ್ಥವಂತಿಕೆಯಾಗಿ ಬಳಸಿರುವುದು, ಈ ಆಕಾರಗಳು ಅಲಂಕಾರವಾಗಿ ಮತ್ತು ಅವು ಪ್ರಕೃತಿಯಿಂದ ಸ್ಫೂರ್ತಿ ಪಡೆದಿದ್ದು ಹೂ, ಎಲೆ, ಸೂರ್ಯ, ಚಂದ್ರ, ನಕ್ಷತ್ರ ಇತ್ಯಾದಿ; ಇವು ನಿಗೂಢವಾದ ಪ್ರೇರಕಶಕ್ತಿಗಳು. ಇತ್ತೀಚಿನ ಚಿತ್ರಗಳು ಜೀವನಕ್ಕೆ ಸಂಬಂಧಿಸಿದ್ದಾಗಿದ್ದು, ತಂತ್ರಶೈಲಿಯಲ್ಲಿವೆ. ಪುರುಷ ಮತ್ತು ಪ್ರಕೃತಿಗಳು ಜೀವನನ ಪ್ರೇರಕಗಳಾಗಿದ್ದು, ಚಿತ್ರದಲ್ಲಿ ಉಲ್ಲಾಸದ ವರ್ಣಗಳ ಸಂಯೋಜನೆ ಕಾಣಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಸುನೀಲ್‌ದಾಸ್

ಸುನೀಲ್‌ದಾಸ್ 1938ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ್ದು, ಕಲ್ಕತ್ತಾದ ಸರ್ಕಾರಿ ಕಲಾಶಾಲೆಯಿಂದ ಶಿಕ್ಷಣ ಪಡೆದಿರುವ ಅವರು, 1961-63ರಲ್ಲಿ ಫ್ರೆಂಚ್ ಸರ್ಕಾರದ ಶಿಷ್ಯವೇತನ ಪಡೆದು ಭಿತ್ತಿಚಿತ್ರ ಮತ್ತು ಗ್ರಾಫಿಕ್ಸ್‌ನಲ್ಲಿ ಹೆಚ್ಚಿನ ತರಬೇತಿ ಪಡೆದಿದ್ದಾರೆ. ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿಯನ್ನು 1959 ಮತ್ತು 1978ರಲ್ಲಿ ಪಡೆದಿದ್ದು, ಯಾವುದೇ ಒಂದು ಶೈಲಿಯಲ್ಲಿ ಚಿತ್ರ ರಚಿಸಿಲ್ಲವಾದರೂ, ವಿವಿಧ ವಿಷಯಗಳ ಬಗ್ಗೆ ಚಿತ್ರಗಳನ್ನು ರಚಿಸಿದ್ದಾರೆ. ಅವರು ರಚಿಸಿರುವ ಸ್ಕೆಚ್‌ಗಳು ವೀರ್ಯವತ್ತಾಗಿರುತ್ತವೆ. ಅಲ್ಲದೆ 'ಕುದುರೆ' ಮಾಲಿಕೆಯ ಚಿತ್ರಗಳು ವಿಶೇಷತೆಯಿಂದ ಕೂಡಿವೆ. ವಿವಿಧ ಮಾಧ್ಯಮಗಳಿಂದ ಕೊಲಾಜ್, ಬ್ಲೋಟಾರ್ಚ್, ಮರದ ಆಕಾರಗಳು, ಸ್ಟೈನ್‌ಗ್ಲಾಸ್ ಮಾಧ್ಯಮಗಳಲ್ಲಿ ಪ್ರಯೋಗ ನಡೆಸಿದ್ದಾರೆ. ಇತ್ತೀಚಿನ ಚಿತ್ರಗಳಲ್ಲಿ ಭ್ರಾಮಕತೆ ಕಾಣಬಹುದು.

ಸ್ವಾಮಿನಾಥನ್ ಜೆ.

ಸ್ವಾಮಿನಾಥನ್ 1928ರಲ್ಲಿ ಸಿಮ್ಲಾದಲ್ಲಿ ಜನಿಸಿದ್ದು, ಕಲಾಶಿಕ್ಷಣ ಪಡೆಯದಿದ್ದರೂ, 1958ರಲ್ಲಿ ಶಿಷ್ಯವೇತನ ಪಡೆದು ವಾರ್ಸಾದ ಅಕಾಡೆಮಿ ಆಫ್ ಫೈನ್ ಆರ್ಟ್‌ನಲ್ಲಿ ಗ್ರಾಫಿಕ್ ಕಲಿತು, ಇಂದು ಭಾರತೀಯ ಸಮಕಾಲೀನ ಕಲಾವಿದರಲ್ಲಿ ಒಬ್ಬರಾಗಿದ್ದಾರೆ. ಅವರು ತಮ್ಮ ಚಿತ್ರಗಳಲ್ಲಿ ತಂತ್ರದ ಸಂಕೇತಗಳನ್ನು ಬಳಸಿ, ಆಕಾರಗಳು ತೇಲುವಂತಿದ್ದು, ಮನೋಭಾವ, ಹಕ್ಕಿಗಳು ಮತ್ತು ಮರಗಿಡಗಳಿದ್ದು, ಉಪನಿಷತ್ತಿನಿಂದ ಹೆಚ್ಚು ಪ್ರಭಾವಿತರಾಗಿದ್ದಾರೆ. ತಮ್ಮ ಸಂಯೋಜನಾ ಚಿತ್ರಗಳಲ್ಲಿ ಕೆಂಪು, ನೀಲಿ, ಹಳದಿ, ಹಸಿರು, ಬಿಳಿ ಮುಂತಾದ ವರ್ಣಗಳನ್ನು ಉಪಯೋಗಿಸಿ, ಮೈವಳಿಕೆಗೆ ಪ್ರಾಮುಖ್ಯ ನೀಡಿದ್ದು, ಆಧ್ಯಾತ್ಮಿಕತೆಯನ್ನು ಅವರ ಚಿತ್ರಗಳಲ್ಲಿ ಕಾಣಬಹುದು.

ಸೂರ್ಯಪ್ರಕಾಶ್

ಸೂರ್ಯಪ್ರಕಾಶ್ ಆಂಧ್ರಪ್ರದೇಶದ ಮದೀರಾದಲ್ಲಿ 1940ರಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಹೈದ್ರಾಬಾದಿನ ಸರ್ಕಾರಿ ಕಲಾಶಾಲೆಯಲ್ಲಿ ಪಡೆದರು. 1965ರಲ್ಲಿ ಆಂಧ್ರಪ್ರದೇಶದ ಲಲಿತಕಲಾ ಅಕಾಡೆಮಿಯ ಸಹಾಯಧನದಿಂದ ಕಲಾವಿದ ರಾಮ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಕಲಾಕೃತಿಗಳ ರಚನೆ. ಚಿತ್ರದ ಸಂಯೋಜನೆಯಲ್ಲಿ ವಿಶೇಷ ಆಸಕ್ತಿ ಹುಟ್ಟಿಸುವ ಅವರ ಚಿತ್ರಗಳ ವಸ್ತುಗಳು, ಕೆಲಸಕ್ಕೆ ಬಾರದ ವಸ್ತುಗಳಾದ ಕಾರಿನ ಅವಶೇಷಗಳು, ಬಟ್ಟೆ, ಪೇಪರಿನ ಮಡಿಕೆಗಳು, ಕೋಸು ಅಥವಾ ಪ್ರಕೃತಿಯಲ್ಲಿ ಕಾಣುವ ಆಕಾರಗಳ ಕಲ್ಪನೆಗಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಅಮೂರ್ತ ಶೈಲಿಯ ಆಕಾರಗಳು, ಸ್ನಾಯು ವ್ಯೂಹಗಳಂತೆ ಕೆಲವೊಮ್ಮೆ ಗಾಳಿಯಲಿ ಬಟ್ಟೆ ಸುತ್ತಿಕೊಂಡಂತ್ತಿದ್ದು ತೇಲಾಡುತ್ತಿರುವಂತೆ, ಒಳಪದರಗಳಂತಿದ್ದು, ವೀಕ್ಷಕರ ಮನಸ್ಸನ್ನು ಸೆಳೆಯುವ ಆಕಾರಗಳು ವರ್ಣಸಂಯೋಜನೆಯಲ್ಲಿ ವಿಶೇಷತೆಯನ್ನು ಪಡೆದಿರುತ್ತವೆ. ಈ ವರ್ಣಗಳಲ್ಲಿ ಒಂದು ಶಕ್ತಿ ಕಾಣುತ್ತೇವೆ. ಚಿತ್ರದಲ್ಲಿ ವಸ್ತು ಕೆಲವೊಮ್ಮೆ ಮಧ್ಯದಲ್ಲಿದ್ದು, ಹಿಂಬದಿಯಲ್ಲಿ ಹದವಾದ ವರ್ಣಗಳಿರುತ್ತವೆ.

ಸೋಮನಾಥ ಹೊರೆ

ಹೊರೆ 1918ರಲ್ಲಿ ಚಿತ್ತಗಾಂಗ್‌ನಲ್ಲಿ ಜನಿಸಿದ ಅವರು 1945ರಲ್ಲಿ ಕಲ್ಕತ್ತಾದ ಕಾಲೇಜ್ ಆಫ್ ಆರ್ಟ್ ಅಂಡ್ ಕ್ರಾಫ್ಟ್‌ನಲ್ಲಿ ಕಲೆಯ ಶಿಕ್ಷಣ ಪಡೆದರು. ಪ್ರಾರಂಭದಲ್ಲಿ ಮರ ಕೆತ್ತನೆಗಳನ್ನು ಮಾಡಿ. ನಂತರ ಲಿಥೋಗ್ರಾಫ್ ಮತ್ತು ಎಚ್ಚಿಂಗ್ ಮಾಧ್ಯಮಗಳಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ, ತಮ್ಮ ಸ್ವಂತಿಕೆಯನ್ನು ರೂಪಿಸಿಕೊಂಡು, ಮಾಧ್ಯಮದ ಪ್ರಭುತ್ವವನ್ನು ಪಡೆದಿದ್ದಾರೆ. ತಮ್ಮ ಜೀವನದಲ್ಲಿ ಕಂಡ ಸಾವು ನೋವುಗಳ ಹಾಗೂ ಮನುಷ್ಯಾಕೃತಿಗಳು ಮತ್ತು ಪ್ರಕೃತಿಯ ಆಕಾರಗಳನ್ನು ಕಂಡರೂ ಅವು ಅಷ್ಟಕ್ಕೇ ಸೀಮಿತವಾಗಿರದೆ, ಆಕಾರಗಳನ್ನೂ ರೂಪ, ರೇಖೆಗಳನ್ನು ತಮ್ಮ ಕೃತಿಗಳಲ್ಲಿ ಮೂಡಿಸುತ್ತಿದ್ದು, ಅವರು ಕೆಲವು ಶಿಲ್ಪಗಳನ್ನೂ ರಚಿಸಿದ್ದಾರೆ.



ಸೋಮನಾಥ ಹೊರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹುಸೇನ್ ಎಂ. ಎಫ್.

ಹುಸೇನ್ ಎಂ. ಎಫ್.

ಭಾರತದ ಸಮಕಾಲೀನ ಕಲೆಯಲ್ಲಿ ಅತ್ಯಂತ ಪ್ರತಿಭಾನ್ವಿತ ಕಲಾವಿದ ಎಂದು ಹೆಸರು ಪಡೆದವರು ಎಂ. ಎಫ್. ಹುಸೇನ್. ಅವರು 1915ರಲ್ಲಿ ಸೊಲ್ಲಾಪುರದಲ್ಲಿ ಹುಟ್ಟಿದರು. ಇಂದೂರಿನಲ್ಲಿ ಪ್ರಾರಂಭಿಕ ಕಲಾಶಿಕ್ಷಣ ಪಡೆದು, ಅನಂತರ ಮುಂಬಯಿ ನಗರಕ್ಕೆ ಬಂದು, ಅಲ್ಲಿ ಚಲನಚಿತ್ರಗಳ ಬ್ಯಾನರ್ ಕಲಾವಿದರಾಗಿ ಜೀವನ ಪ್ರಾರಂಭಿಸಿದರು. ಅಲ್ಲೇ ಚಿತ್ರಕಲೆಯ ವಿವಿಧ ವಿಷಯಗಳನ್ನು ಅಧ್ಯಯನ ಮಾಡಿದರು. ನಮ್ಮ ದೇಶದ ಜಾನಪದ ಕಲೆಯ ವಸ್ತುಗಳನ್ನು ತಮ್ಮ ಚಿತ್ರಗಳಲ್ಲಿ ಬಳಸಿ, ಹಳ್ಳಿಯ ಬದುಕಿನ ಚಿತ್ರಗಳನ್ನು ಚಿತ್ರಿಸಿ, ಅನಂತರ ಪೌರಾಣಿಕ ಕಥಾನಕಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟರು. ಚಾರಿತ್ರಿಕ ಹಿನ್ನೆಲೆಯಿಂದ ಅವರ ಚಿತ್ರಗಳಲ್ಲಿ ಮಾನವೀಯ ಮೌಲ್ಯಗಳನ್ನು, ಜೀವನವನ್ನು ವ್ಯಕ್ತಪಡಿಸಿರುವುದನ್ನು ಕಾಣಬಹುದು. ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಚಿತ್ರಗಳ ಮನುಷ್ಯಾಕೃತಿಗಳಲ್ಲಿ ವಿವಿಧ ರೀತಿಯ ಹೊಂದಾಣಿಕೆ ಮತ್ತು ಸಂಕೇತಗಳು. ಅವು ಸಾಹಿತ್ಯಾತ್ಮಕವಾದ, ಪವಿತ್ರವಾದ, ಅಸಹಜ ರೀತಿಯ ಅಥವಾ ಅಲಂಕಾರಿಕವಾಗಿ ಈ ಸಂಕೇತಗಳನ್ನು ಉಪಯೋಗಿಸಿದ್ದಾರೆ. ಅವರು ಆಯ್ಕೆ ಮಾಡುವ ಭಾವಗಳು ಭಾರತೀಯ ಕಲೆಯಿಂದ ಪರೋಕ್ಷವಾಗಿ ತೆಗೆದುಕೊಂಡಿದ್ದಾರೆ. ಅವರು ಸಹ ಅಭಿನಯ ಮತ್ತು ಸಂಕೇತಗಳ ಭಾವದಿಂದ ಹಾಗೂ ಭಾರತೀಯ ನೃತ್ಯ ಅವರಿಗೆ ಹೆಚ್ಚಿ ಭಾವನಾತ್ಮಕವಾಗಿ ಕಂಡು, ಭರತನಾಟ್ಯ ಮತ್ತು ಒಡಿಸ್ಸಿ ನೃತ್ಯದಲ್ಲಿ ಬರುವ ಮುದ್ರೆಗಳು, ಅವರ ಮೇಲೆ ಹೆಚ್ಚು ಪ್ರಭಾವ ಬೀರಿವೆ. ಅವರ ಬಹಳ ಚಿತ್ರಗಳಲ್ಲಿ ಭಾರತೀಯತ್ವದ ಮಹಿಳೆಯನ್ನು ಜೀವನದ ಸಂಕೇತವನ್ನಾಗಿ ತೆಗೆದುಕೊಂಡಿದ್ದಾರೆ. ಭಾರತೀಯ ಸಾಂಪ್ರದಾಯಿಕ ಜಾನಪದವನ್ನು ವಿಶಿಷ್ಟವಾಗಿ ತಮ್ಮ ಚಿತ್ರಗಳಲ್ಲಿ ಬಳಸಿಕೊಂಡು ಪೂರ್ವ ಪಶ್ಚಿಮದ ಮಿಲನದಿಂದ ಹೊಸ ಅಭಿವ್ಯಕ್ತಿಗೆ ಕಾರಣಕರ್ತರು.

ಹಿಮ್ಮತ್ ಷಾ

ಹಿಮ್ಮತ್ ಷಾ 1933ರಲ್ಲಿ ಭಾವಾನಗರದಲ್ಲಿ ಜನಿಸಿದ್ದು, ತಮ್ಮ ಕಲಾಶಿಕ್ಷಣವನ್ನು ಮುಂಬಯಿನ ಸರ್ ಜೆ. ಜೆ. ಕಲಾಶಾಲೆಯಲ್ಲೂ ಮತ್ತು 1960ರಲ್ಲಿ ಫೆಕಲ್ಟಿ ಆಫ್ ಆರ್ಟ್ಸ್, ಬರೋಡಾ ಮತ್ತು 1967ರಲ್ಲಿ ಪ್ಯಾರಿಸಿನಲ್ಲಿ ಎಚ್ಚಿಂಗ್‌ನಲ್ಲಿ ವಿಶೇಷ ತರಬೇತಿ ಪಡೆದಿದ್ದಾರೆ. ಚಿತ್ರ, ಶಿಲ್ಪ, ಭಿತ್ತಿಚಿತ್ರ ಮತ್ತು ಗ್ರಾಫಿಕ್ ಮಾಧ್ಯಮಗಳಲ್ಲಿ ಪರಿಣತಿ. ಚಿತ್ರಗಳಲ್ಲಿ ಕ್ರೌರ್ಯ, ಕಾಮ ಸಂಬಂಧವನ್ನು ಕಂಡರೇ, ಭಾವಶಿಲ್ಪಗಳಲ್ಲಿ ಕ್ಯೂಬಿಸಂನ ಪ್ರಭಾವವಿದ್ದು, ನಿಷ್ಕಳಂಕ ಮನಸ್ಸಿನ ವ್ಯಕ್ತಿಯಲ್ಲಿ ದುಃಖದ ಭಾವನೆಗಳು ಹಾಗೂ ಆಸಕ್ತಿಯುತವಾದ ಸಮತಲಗಳು ಮತ್ತು ಕೊರೆದ ಗೆರೆಗಳಿರುತ್ತವೆ. ತಲೆಯ ಮೇಲ್ಮೈ ಭಾಗ ನುಣುಪಾಗಿದ್ದು, ಹೊಸ ಅಭಿವ್ಯಕ್ತಿಯನ್ನು ಕಾಣಬಹುದು. ಭಿತ್ತಿಚಿತ್ರಗಳ ರಚನೆಯಲ್ಲಿ ಶಿಲ್ಪ ಮತ್ತು ಉಬ್ಬುಶಿಲ್ಪ ರಚನೆ ಹಾಗೂ ಅವುಗಳಲ್ಲಿ ಶೃಂಗಾರ ಕಲ್ಪನೆಗಳನ್ನು ಕಾಣಬಹುದು. ರಾಷ್ಟ್ರದ ಮತ್ತು ವಿದೇಶಗಳ ಅನೇಕ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೆ. ಕೆ. ಹೆಬ್ಬಾರ್

ಹೆಬ್ಬಾರ್ ಕೆ. ಕೆ.

1911ರಲ್ಲಿ ಕಟ್ಟಂಗೇರಿಯಲ್ಲಿ ಜನಿಸಿದ ಹೆಬ್ಬಾರರು. ತಮ್ಮ ಕಲಾಶಿಕ್ಷಣವನ್ನು 1938ರಲ್ಲಿ ಸರ್ ಜೆ. ಜೆ. ಕಲಾಶಾಲೆಯಿಂದ ಪಡೆದಿದ್ದಾರೆ. 1949-50ರಲ್ಲಿ ಪ್ಯಾರಿಸಿನ ಜ್ಯೂಲಿಯನ್ ಅಕಾಡೆಮಿಯಲ್ಲಿ ಹೆಚ್ಚಿನ ಕಲಾಭ್ಯಾಸ ಪಡೆದಿದ್ದು, ನ್ಯೂಯಾರ್ಕ್, ಜರ್ಮನಿ, ಬರ್ಲಿನ್, ಸಿಡ್ನಿ ಮತ್ತು ಭಾರತದ ಪ್ರಮುಖ ಸ್ಥಳಗಳಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಏಕವ್ಯಕ್ತಿ ಕಲಾಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. 1957, 58ರಲ್ಲಿ ಕೇಂದ್ರ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಹಾಗೂ ಭಾರತ ಸರ್ಕಾರದಿಂದ 1988-98ರಲ್ಲಿ ಪದ್ಮಭೂಷಣ ಪ್ರಶಸ್ತಿ ಸಂದಿದೆ. ಅಲ್ಲದೆ ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಕರ್ನಾಟಕ ಸರ್ಕಾರದ ಪ್ರಶಸ್ತಿ ಸಹ ಬಂದಿದೆ. ಕೇಂದ್ರ ಲಲಿತಕಲಾ ಅಕಾಡೆಮಿಯು ಉನ್ನತ ಪ್ರಶಸ್ತಿ 'ಫೆಲೋ' ಸಹ ಬಂದಿದ್ದು, 1980ರಲ್ಲಿ ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. 1977-80ರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದು ರಾಜ್ಯದಲ್ಲಿ ಕಲಾ ಬೆಳವಣಿಗೆಗೆ ಹೊಸ ಆಯಾಮ ನೀಡಿದರು. ಮೈಸೂರು ವಿಶ್ವ ವಿದ್ಯಾಲಯವು 1976ರಲ್ಲಿ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಗೌರವಿಸಿದೆ. ಅವರ ಚಿತ್ರಗಳಲ್ಲಿ ಭಾವನೆ ಮತ್ತು ವಿಚಾರಗಳನ್ನು ಅಭಿವ್ಯಕ್ತಗೊಳಿಸುವರು. ರೂಢಿ, ಸಂಪ್ರದಾಯಗಳಿಂದ ಮುಕ್ತವಾಗಿದ್ದು, ಸರಳವಾಗಿದ್ದು, ಅರ್ಥಪೂರ್ಣವಾಗಿರುತ್ತವೆ, ಅವರ ಅನುಭವ ಬೇರೆ ಬೇರೆ ರೀತಿಯಾಗಿರುವುದರಿಂದ, ಭಿನ್ನ ರೀತಿಯ ಚಿತ್ರಗಳನ್ನು ನೋಡಬಹುದು. ಭಾರತೀಯ ಕಲಾಪ್ರಪಂಚದಲ್ಲಿ ಹೆಬ್ಬಾರರ ಚಿತ್ರಗಳು ಒಂದು ವಿಶಿಷ್ಟ ಸ್ಥಾನವನ್ನು ಪಡೆದಿವೆ. ಅವರ ರೇಖಾಚಿತ್ರಗಳಲ್ಲಿ ಲಯ ಮತ್ತು ರೇಖೆಗಳಿಗೆ ಪ್ರಾಮುಖ್ಯತೆ ಕೊಟ್ಟಿರುವುದನ್ನು ಕಾಣಬಹುದು. ಭಾರತ ಸರ್ಕಾರವು 1989ರಲ್ಲಿ 'ಪದ್ಮಭೂಷಣ' ಪ್ರಶಸ್ತಿ ನೀಡಿ ಗೌರವಿಸಿದೆ.

ಹೆನ್ರಿ ಮಾಟಿಸ್

ಹೆನ್ರಿ ಮಾಟಿಸ್ ಉತ್ತರ ಫ್ರಾನ್ಸಿನ ಲೇ ಕ್ಯಾಟೂದಲ್ಲಿ 1869ರಲ್ಲಿ ಜನಿಸಿದ. ವಕೀಲನೊಬ್ಬನ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದಾಗ, ಚಿತ್ರಕಲೆಯನ್ನು ಕಲಿತ. ಅನಂತರ ಪ್ಯಾರಿಸಿನಲ್ಲಿ ಕಲಾಶಾಲೆಗೆ ಸೇರಿ ಕಲಾಶಿಕ್ಷಣ ಪಡೆದ. ಪ್ಯಾರಿಸಿನಲ್ಲಿ ಪ್ರಭಾವಿತನಾದ ಕಲಾವಿದ ಮತ್ತು ಈ ಶತಮಾನದ ಬಹಳ ಪ್ರಮುಖ ಕಲಾವಿದ. ಅವನ ಮೊದಲ ಸ್ವತಂತ್ರ ಕೃತಿಗಳು ಬಾಹ್ಯ ವಸ್ತುಗಳನ್ನು ಹತೋಟಿಯಲ್ಲಿಟ್ಟುಕೊಂಡು, ಒಳಭಾಗಗಳು ಮತ್ತು ಸ್ಟಿಲ್‌ಲೈಫ್‌ಗಳ ಚಿತ್ರಣ, ನಂತರ ಪ್ರಕೃತಿ ಮತ್ತು ಅದರ ಚಿತ್ರಣ, ಇವು ಒಂದೇ ಆಗಿರಬೇಕಿಲ್ಲ ಎಂಬ ನಿರ್ಧಾರಕ್ಕೆ ಬಂದು, ಕಡು ಬಣ್ಣಗಳನ್ನು ಬಳಸಿ ಚಿತ್ರಗಳಲ್ಲಿ ವಸ್ತುಗಳಿಗಿಂತ ವರ್ಣಗಳಿಗೆ ಪ್ರಾಧಾನ್ಯ. ವಾಸ್ತವತೆಗಿಂತ ಕಲ್ಪನೆಗೆ ಪ್ರಾಧಾನ್ಯವಿದ್ದು, ಮನಸ್ಸಿನ ಭಾವನೆಗಳನ್ನು ಸರಳವಾಗಿ ಚಿತ್ರಿಸಿದ್ದು, 'ಫಾವಿಸಂ' ಪಂಥದ ಜನಕನಾಗಿ, ವರ್ಣಗಳ ಸ್ವಚ್ಛಂದ ಬಳಕೆ ಕಾಣಬಹುದು. ತನ್ನ ವೃದ್ಧಾಪ್ಯದಲ್ಲೂ, ಹಾಸಿಗೆಯ ಮೇಲೆ ಮಲಗಿ, ಬಣ್ಣ ಕಾಗದಗಳಿಂದ ವಿನ್ಯಾಸಗಳನ್ನು ಚಿತ್ರಿಸುತ್ತಿದ್ದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಹೆನ್ರಿಮೂರ್

ಹೆನ್ರಿಮೂರ್ 1898ರಲ್ಲಿ ಲಂಡನ್ನಿನ ಕ್ಯಾಸ್ಟೆಲ್ ಯಾರ್ಕ್‌ಷೈರ್‌ನಲ್ಲಿ ಜನಿಸಿದನು. ಲೀಡ್ಸ್ ಸ್ಕೂಲ್ ಆಫ್ ಆರ್ಟ್‌ನಲ್ಲಿ ಶಿಲ್ಪ ಕಲೆಯಲ್ಲಿ ಶಿಕ್ಷಣ ಪಡೆದು, ಉಬ್ಬುಶಿಲ್ಪಗಳಲ್ಲಿ ದೈನಂದಿನ ಬದುಕಿನ ಚಿತ್ರಣ ಹಾಗೂ ಸೂಕ್ಷ್ಮ ವಿವರ, ಕುಶಲತೆ ಕಾಣಬಹುದು. ಶಕ್ತಯುತ ಕೈಚಳಕದಿಂದ, ಸೃಜನಶೀಲತೆಯ ಭಾವಗಳು ಶಿಲ್ಪದಲ್ಲಿ ಅಭಿವ್ಯಕ್ತವಾಗಿವೆ. ಬೃಹದಾಕಾರದ ಶಿಲ್ಪಗಳನ್ನು, ಅವು ಪರಿಸರದ ವಾತಾವರಣಕ್ಕೆ ಹೊಂದಿಕೆಯಾಗುವಂತೆ ರಚಿಸಿದ್ದು, ಸಮತೋಲನ, ಚಲನೆ, ಸಂಯೋಜನೆ ಹಾಗೂ ಮನಸ್ಸಿನ ಚಿಂತನೆಗೆ ರೂಪಕೊಡುವ ಸಾಮರ್ಥ್ಯಗಳನ್ನು ಕಾಣಬಹುದು. ಹಲವಾರು ಮಾಧ್ಯಮಗಳಲ್ಲಿ ಪ್ರಭುತ್ವ ಪಡೆದಿದ್ದು, ಮೂರ್ತಿಶಿಲ್ಪಗಳಲ್ಲಿ ವಿವರಗಳಿಗಿಂತ ಸರಳತೆ ಹೆಚ್ಚು. ಈ ಸರಳ ರೂಪಗಳಿಗೆ, ಪ್ರಕೃತಿಯೇ ಸ್ಫೂರ್ತಿಯಾಗಿದ್ದು, ಸೂಕ್ಷ್ಮತೆ ಮತ್ತು ಅವುಗಳಲ್ಲಿ ಚೈತನ್ಯ ಕಾಣಬಹುದು. ತನ್ನ ಪರಿಸರದ ಮಾನವ, ಪಶು ಪಕ್ಷಿಗಳನ್ನು ತನ್ನದೇ ಆದ ಸರಳರೂಪ ಮತ್ತು ಸಂಯೋಜನೆಗಳಿಂದ ದಪ್ಪ, ತೆಳು, ಘನ, ಅವಕಾಶಗಳಲ್ಲಿ. ವಿಶೇಷ ಸಂಯೋಜನೆ ಹಾಗೂ ನಯ. ಒರಟಾಗಿ ಮೇಲ್ಮೈಯನ್ನು ಹೊಂದಿದ್ದು, ಅಮೂರ್ತತೆ ಕಾಣಬಹುದು.

ಹೆನ್ರಿಮೂರನ ಅನೇಕ ಮಲಗಿರುವ ಶಿಲ್ಪಗಳು ವಿವಿಧ ರೀತಿಯ ಅಭಿವ್ಯಕ್ತಿಯನ್ನು ಹೊಂದಿವೆ. ಗ್ರಾಫಿಕ್ ಮತ್ತು ಲಿಥೋಗ್ರಾಫಿಕ್ ಮಾಧ್ಯಮಗಳಲ್ಲೂ ಕೃತಿಗಳನ್ನು ರಚಿಸಿದ್ದು, ವಿಶ್ವದ ಸಮಕಾಲೀನ ಶಿಲ್ಪಿಗಳಲ್ಲಿ ಪ್ರಮುಖನಾದವನು.

ಹೆನ್ರಿರೂಸ್ಸೋ

ಹೆನ್ರಿರೂಸ್ಸೋ ಫ್ರಾನ್ಸಿನ ಲಾವೆಲ್‌ನಲ್ಲಿ 1844ರಲ್ಲಿ ಜನಿಸಿದ. ತನ್ನ ಐವತ್ತನೆಯ ವಯಸ್ಸಿನಲ್ಲಿ ಪೂರ್ಣಾವಧಿಯ ಕಲಾವಿದನಾಗಿ, ವ್ಯಕ್ತಿಚಿತ್ರಗಳು, ಪ್ಯಾರಿಸ್ಸಿನ ಸುತ್ತ ಮುತ್ತಲ ಪ್ರಕೃತಿಚಿತ್ರ ಹಾಗೂ ಬಣ್ಣಬಣ್ಣದ ಅರಣ್ಯ ದೃಶ್ಯಗಳನ್ನು ಚಿತ್ರಿಸಿದ್ದಾನೆ. ಅವನ ಸಿಂಹಗಳಲ್ಲಿ ರಾಜಗಾಂಭೀರ್ಯ, ದನಗಳಲ್ಲಿ ಸಾಧುತನ, ಕೋತಿಗಳಲ್ಲಿ ತುಂಟತನ ಮರದ ಎಲೆಗಳೂ ಆಕಾಶದ ಮೋಡಗಳೂ ಜೀವತಳೆದಂತಿರುತ್ತವೆ. ಅವನ ಚಿತ್ರಗಳಲ್ಲಿ ಉಷ್ಣವಲಯದ ಕಾಡು ಮತ್ತು ಕ್ರೂರ ಮೃಗಗಳ ಚಿತ್ರ ಬರೆಯುವುದು ಅವನಿಗೆ ಬಹಳ ಇಷ್ಟವಾಗಿತ್ತು. ಆ ಚಿತ್ರಗಳು ಸರಳವಾಗಿದ್ದು, ತನ್ನ ಚಿತ್ರದ ಪ್ರತಿ ರೇಖೆಯನ್ನು ಅತ್ಯಂತ ಜಾಗರೂಕತೆಯಿಂದ ಎಳೆಯುತ್ತಿದ್ದ. 1910ರಲ್ಲಿ ರಚಿಸಿದ 'ಕನಸು' ಚಿತ್ರದ ಕಾಡಿನ ದೃಶ್ಯದಲ್ಲಿ ಐವತ್ತಕ್ಕಿಂತ ಹೆಚ್ಚು ಛಾಯೆಗಳ ಹಸಿರು ವರ್ಣವಿದೆ. ಅವನ 'ಮಲಗಿರುವ ಜಿಪ್ಸಿ' ಹೆಸರಾಂತ ಚಿತ್ರ. ಅವನು 1910ರಲ್ಲಿ ಮರಣ ಹೊಂದಿದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಗ್ರಂಥಋಣ

1. A Dictionary of Art & Artists.
2. Lalitkala Akademy Contemporary Indian Art Series.
3. Modern Artists of India - G. Venkatachalam.
4. ಜ್ಞಾನಭಾರತಿ–ಕಲೆ ಮತ್ತು ಸಾಹಿತ್ಯ–5.
5. Art Heritage Season–4
6. ಸೃಜನಶೀಲರು - ಎನ್. ಮರಿಶಾಮಾಚಾರ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಇದೇ ಲೇಖಕರ ಇತರ ಕೃತಿಗಳು

1. ಸಮಕಾಲೀನ ಕಲೆ*
2. ಹೆಬ್ಬಾರ್ - ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಪಡೆದಿದೆ.
3. ಸೃಜನಶೀಲರು* ,,
4. ಕಲಾಕೋಶ*
5. ಕೆ. ಜಿ. ಸುಬ್ರಮಣ್ಯನ್
6. ಕಲಾಭಿವ್ಯಕ್ತಿ*
7. ಕೆ. ಕೆ. ಹೆಬ್ಬಾರ್ - ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ
8. ಭಾರತದಲ್ಲಿ ಸಮಕಾಲೀನ ಕಲೆ
9. ಎಂ. ಎಫ್. ಹುಸೇನ್
10. ಸಾಹಿತ್ಯದಲ್ಲಿ ಚಿತ್ರಕಲೆ
11. ಎಸ್. ಎನ್. ಸ್ವಾಮಿ - ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ

GURUKUL KANGRI LIBRARY
Accos on 12-2-71
Class on
Cat on
Tag etc.
Checked
Any Other

*ಪ್ರತಿಗಳು ಮುಗಿದಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

ಕರ್ನಾಟಕದ ಕಲಾಕ್ಷೇತ್ರದಲ್ಲಿ 'ಮರಿ' ಎಂದೇ ಹೆಸರು ಪಡೆದಿರುವ ಎನ್. ಮರಿಶಾಮಾಚಾರ್ ಚಿತ್ರಕಲಾವಿದ, ಪ್ರಿಂಟ್‌ಮೇಕರ್, ಲೇಖಕ, ಸಂಘಟಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಬೆಂಗಳೂರಿನ ಕೆನ್ ಸ್ಕೂಲ್ ಆಫ್ ಆರ್ಟ್‌ನಿಂದ ಡಿಪ್ಲೊಮೊವನ್ನು ಪ್ರಥಮ ರ‍್ಯಾಂಕಿನಲ್ಲೂ ಮತ್ತು ಆರ್ಟ್ ಮಾಸ್ಟರ್‌ನಲ್ಲಿ ದ್ವಿತೀಯ ರ‍್ಯಾಂಕ್ ಪಡೆದಿರುವ ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಯ ವಿದ್ವಾಂಸ ವೇತನ ಪಡೆದು ಬರೋಡಾದ ಫೆಕಲ್ಟಿ ಆಫ್ ಫೈನ್ ಆರ್ಟ್‌ನಲ್ಲಿ ಭಾರತದ ಹೆಸರಾಂತ ಕಲಾವಿದ ಪ್ರೊ. ಕೆ. ಜಿ. ಸುಬ್ರಮಣ್ಯನ್ ಅವರ ಬಳಿ ಕಲಾಭ್ಯಾಸ ಮತ್ತು ಕಲಾ ಇತಿಹಾಸಗಳ ಪ್ರಯೋಜನ ಪಡೆದಿದ್ದಾರೆ.

ಅಖಿಲ ಭಾರತ ಮತ್ತು ರಾಜ್ಯದ ಕಲಾಪ್ರದರ್ಶನಗಳಲ್ಲಿ ಭಾಗವಹಿಸಿ ಚಿತ್ರ, ಗ್ರಾಫಿಕ್ ಮಾಧ್ಯಮದ ಕ್ಷೇತ್ರಗಳಲ್ಲಿ ತಮ್ಮ ಸೃಜನತೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಅಲ್ಲದೆ ಲಲಿತಕಲಾ ಅಕಾಡೆಮಿಯ 17ನೆಯ ವಾರ್ಷಿಕ ಮತ್ತು ದಸರಾ ಕಲಾಪ್ರದರ್ಶನಗಳಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಕನ್ನಡದಲ್ಲಿ ಕಲಾಸಾಹಿತ್ಯ ಬೆಳೆಯಲು ಇವರ ಕಾಣಿಕೆ ಅಪಾರವಾದುದು. ಇವರು ಬರೆದಿರುವ ಸಮಕಾಲೀನ ಕಲೆ, ಹೆಬ್ಬಾರ್, ಸೃಜನಶೀಲರು, ಕಲಾಕೋಶ, ಕೆ. ಜಿ. ಸುಬ್ರಮಣ್ಯನ್, ಕಲಾಭಿವ್ಯಕ್ತಿ, ಭಾರತದಲ್ಲಿ ಸಮಕಾಲೀನ ಕಲೆ, ಎಂ. ಎಫ್. ಹುಸೇನ್, ಸಾಹಿತ್ಯದಲ್ಲಿ ಚಿತ್ರಕಲೆ - ಕಲಾ ಪುಸ್ತಕಗಳು ಕನ್ನಡ ಸಾಹಿತ್ಯದಲ್ಲಿ ಉತ್ತಮ ಕೊಡುಗೆ ಎಂದು ಮನ್ನಣೆ ಪಡೆದಿವೆ. ಹೆಬ್ಬಾರ್ ಮತ್ತು ಸೃಜನಶೀಲರು ಪುಸ್ತಕಗಳಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಬಹುಮಾನ ದೊರೆತಿದೆ. ಅಲ್ಲದೆ ಲಲಿತಕಲಾ ಅಕಾಡೆಮಿಗಾಗಿ ಕೆ. ಕೆ. ಹೆಬ್ಬಾರ್ ಮತ್ತು ಎಸ್. ಎನ್. ಸ್ವಾಮಿ ಅವರ ಬಗ್ಗೆ ಪುಸ್ತಕಗಳನ್ನು ಬರೆದುಕೊಟ್ಟಿದ್ದಾರೆ.

ಭಾರತೀಯ ಹಾಗೂ ಕನ್ನಡ ಭಾಷೆಗಳಲ್ಲಿ ಪ್ರಪ್ರಥಮವಾಗಿ ಪ್ರಕಟವಾಗುತ್ತಿರುವ 'ಕಲಾವಿದರು' ಪುಸ್ತಕದ ಲೇಖಕರು.

CC-0. In Public Domain. Gurukul Kangri Collection, Haridwar